ಕರ್ನಾಟಕ ಸರ್ಕಾರ – ಸಾರ್ವಜನಿಕ ಶಿಕ್ಷಣ ಇಲಾಖೆ

## ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ.

ಸಂಶೋಧನೆ ಮೌಲ್ಯಮಾಪನ ನಿರ್ವಹಣೆ ಮೇಲುಸ್ತುವಾರಿ ಮಧ್ಯವರ್ತನದಡಿಯಲ್ಲಿ

# ಶಿವಮೊಗ್ಗ ಜಿಲ್ಲೆಯ ಶಿಕ್ಷಕರು ಮತ್ತು ಅಧಿಕಾರಿಗಳಲ್ಲಿರುವ ಲಿಂಗ ಸೂಕ್ಷ್ಮತೆ ಒಂದು ಅಧ್ಯಯನ.

ಸಂಶೋಧಕರು :

ಶ್ರೀಮತಿ ಕೆ. ವನಮಾಲ

ಉಪನ್ಯಾಸಕರು ಡಯಟ್

ಶಿವಮೊಗ್ಗ.

# ಮುನ್ನುಡಿ

ಲಿಂಗ ಸಮಾನತೆಯನ್ನು ಮಿಲೇನಿಯಂ ಅಭಿವೃದ್ಧಿಯ ಗುರಿಯಾಗಿ ವಿಶ್ವ ಸಂಸ್ಥೆ ಘೋಷಿಸಿದೆ. ಶಿಕ್ಷಣ ಇಲಾಖೆಯ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಸಾಕಷ್ಟು ಪ್ರಯತ್ನಪಟ್ಟಿದ್ದರೂ ಸಹಬಾಲಕ ಬಾಲಕಿಯರ ನಡುವಿನ ಶೈಕ್ಷಣಿಕ ಅವಕಾಶದ ಅಂತರವನ್ನು ಕಡಿಮೆ ಮಾಡುವುದು ಕಷ್ಟ ಸಾಧ್ಯವಾಗಿದೆ. ಸರ್ವ ಶಿಕ್ಷಣ ಅಭಿಯಾನದ ಈ ಗುರಿಯು ವ್ಯಕ್ತಿಗಳ ನಡುವಿನ ಸಾಮಾಜಿಕ ಸಂಬಂಧಗಳಿಗೆ ಸಂಬಂದಿಸಿದ್ದಾಗಿದ್ದು, ವ್ಯಕ್ತಿಗತವಾಗಿಯೇ ಮನೋಧೋರಣೆಯನ್ನು ಬದಲಾಯಿಸುವಂತಹ ಕಾರ್ಯವಾಗಬೇಕಿದೆ.ಈ ಕಾರ್ಯ ಸಾಧನೆ ಶಿಕ್ಷಣದ ಮೂಲಕ ಮಾತ್ರ ಸಾಧ್ಯ.ನಿಟ್ಟಿನಲ್ಲಿ ಶಿಕ್ಷಣ ಇಲಾಖೆಯ ವ್ಯವಸ್ಥೆಯಲ್ಲಿರುವ ಶಿಕ್ಷಕರು ಅಧಿಕಾರಿಗಳಲ್ಲಿರುವ ಲಿಂಗ ಸಂವೇದನಾತ್ಮಕ ಆಲೋಚನೆಗಳನ್ನು ತಿಳಿಯುವಂತಹ ಶ್ರೀಮತಿ ವನಮಾಲರವರ ಪ್ರಯತ್ನ ಶ್ಲಾಘನೀಯ ಹಾಗೂ ಜಿಲ್ಲೆಯಲ್ಲಿ ಲಿಂಗ ಸಮಾನತೆಯ ಕಾರ್ಯ ತಂತ್ರವನ್ನು ರೂಪಿಸಲು ಸಂಶೋಧನಾ ಫಲಶ್ರುತಿಗಳು ಸಹಕಾರಿಯಾಗಲಿದೆ.ಶೈಕ್ಷಣಿಕ ವ್ಯವಸ್ಥೆಯಲ್ಲಿರುವ ಶಿಕ್ಷಕರು ಅಧಿಕಾರಿಗಳು ಹೊಂದಿರುವ ಮನೋಧೋರಣೆಯನ್ನು ತಿಳಿಯುವ ಕೈಗನ್ನಡಿಯಾಗಲಿ ಎಂಬ ಆಶಯದೊಂದಿಗೆ ಶುಭವನ್ನು ಕೋರುತ್ತೇನೆ.

ಶ್ರೀಯುತ ಜಿ. ಎಸ್ ಪ್ರಭುಸ್ವಾಮಿ
ಪ್ರಾಂಶುಪಾಲರು ಹಾಗೂ
ಉಪನಿರ್ದೇಶಕರು (ಅಭಿವೃದ್ದಿ) ಡಯಟ್, ಶಿವಮೊಗ್ಗ.

# ಕೃತಜ್ಞತೆಗಳು

ಯಶಸ್ವಿ ಕಾರ್ಯಾಚರಣೆಗೆ ಸಕಾಲಿಕ ಮಾರ್ಗದರ್ಶನ ನೀಡುತ್ತಾ ಸಹಕರಿಸಿದೆ ಮಾರ್ಗದರ್ಶಕರುಹಾಗೂ ಪ್ರಾಂಶುಪಾಲರು ಉಪನಿರ್ದೆಶಕರು (ಅಭಿವೃದ್ಧಿ) ಆದ ಜಿ.ಎಸ್.ಪ್ರಭುಸ್ವಾಮಿ ರವರಿಗೆ ಹಾಗೂ ಪ್ರಶ್ನಾವಳಿಗೆ ಸಕಾಲದಲ್ಲಿ ಮಾಹಿತಿ ನೀಡಿದ ಡಯಟ್‌ನ ಹಿರಿಯ ಮತ್ತು ಎಲ್ಲಾ ಉಪನ್ಯಾಸಕರಿಗೆ ಹೃದಯಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಅಧ್ಯಯನಕ್ಕೆ ಪ್ರೋತ್ಸಾಹದ ನುಡಿಗಳನ್ನಾಡಿ ಪ್ರಶ್ನಾವಳಿಗೆ ತಮ್ಮ ಅನಿಸಿಕೆಗಳನ್ನು ಸಕಾಲದಲ್ಲಿ ನೀಡಿದ ಉಪನಿರ್ದೇಶಕರು (ಆಡಳಿತ) ಶ್ರೀ ನಾರಾಯಣ ಗೌಡರಿಗೆ ಹಾಗೂ ಅವರ ಅಧಿಕಾರಿ ಬಂಧುಗಳಿಗೆ ವಿನಯ ಪೂರ್ವಕ ಧನ್ಯವಾದಗಳು

ಹೊಸತನ್ನು ಕಲಿಯಬೇಕೆಂಬ ಹಂಬಲದೊಂದಿಗೆ ಅಭಿಪ್ರಾಯವನ್ನು ಸೂಚಿಸಲು ನೀಡದ ಪ್ರಶ್ನಾವಳಿಗೆ ತಮ್ಮ ಅನಿಸಿಕೆಗಳನ್ನು ಸಕಾಲದಲ್ಲಿ ನೀಡಿದ 7 ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಿಕ್ಷಣ ಸಂಯೋಜಕರು ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳು ಮತ್ತು ಕ್ಷೇತ್ರ ಸಂಪನ್ಮೂಲ, ಸಮೂಹ ಸಂಪನ್ಮೂಲ ಅಧಿಕಾರಿಗಳಿಗೆ ವಂದನೆಗಳು.

ಹೆಚ್ಚಿನ ಸಂಖ್ಯೆಯಲ್ಲಿ ಅಧ್ಯಯನಕ್ಕೆ ಭಾಗವಹಿಸಿದ ನನ್ನ ಪ್ರೌಢ ಮತ್ತು ಪ್ರಾಥಮಿಕ ಹಂತದ ಶಿಕ್ಷಕರ ಮಿತ್ರರಿಗೆ ವಿನಮ್ರ ಧನ್ಯವಾದಗಳನ್ನು ಅರ್ಪಿಸುತ್ತೇನೆ

ಅಚ್ಚುಕಟ್ಟಾಗಿ ಕರಡು ಪ್ರತಿಯನ್ನು ಸಿದ್ಧಪಡಿಸಿ ಮುದ್ರಿಸಿದ ಶ್ರೀಮತಿ ಲೀಲಾರವರಿಗೆ ನಮನಗಳು

ದಿನಾಂಕ :  **ಕೆ. ವನಮಾಲ**

ಸ್ಥಳ : ಶಿವಮೊಗ್ಗ  ಉಪನ್ಯಾಸಕರು ಡಯಟ್ ಶಿವಮೊಗ್ಗ.

# ಪರಿವಿಡಿ


| ಕ್ರಮ ಸಂಖ್ಯೆ | ವಿಷಯ | ಪುಟಗಳು |
|---|---|---|
| 1. | ಅಧ್ಯಾಯ: 1<br>ಅಧ್ಯಯನ ಉದ್ದೇಶ ವ್ಯಾಪ್ತಿ ವಿನ್ಯಾಸ ಮಿತಿಗಳು | ರಿಂದ ವರೆಗೆ |
| 2 | ಅಧ್ಯಾಯ: 2<br>ಸಾಹಿತ್ಯ ಅವಲೋಕನ | |
| 3 | ಅಧ್ಯಾಯ : 3<br>ಅಧ್ಯಯನದ ಫಲಶೃತಿಗಳು | |
| 4 | ಅಧ್ಯಾಯ 4 :<br>ಕೇಸ್ ಸ್ಟೇಡಿಸ್ ವಿಮರ್ಶೆ | |
| 5 | ಅಧ್ಯಾಯ:5<br>ಒಳನೋಟಗಳು ಸಲಹೆಗಳು ಮತ್ತು ಮುಂದಿನ<br>ಅಧ್ಯಯನ ಕ್ಷೇತ್ರಗಳು: | |
| 6 | ಅನುಬಂಧಗಳು:<br>ಗ್ರಂಥಋಣ<br>ಪ್ರಶ್ನಾವಳಿ<br>ಛಾಯಾ ಚಿತ್ರ ಗ್ಯಾಲರಿ | |

# ಅಧ್ಯಾಯ: 1

## ಅಧ್ಯಯನ ಉದ್ದೇಶ ವ್ಯಾಪ್ತಿ ವಿನ್ಯಾಸ ಮಿತಿಗಳು

**ಪೀಠಿಕೆ:**

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 ಶಾಲಾ ಶಿಕ್ಷಣವನ್ನು 2009 ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಶಿಕ್ಷಕರ ಶಿಕ್ಷಣದ ಮಾರ್ಗದರ್ಶಿಯಾಗಿದೆ. ಈ ಡಾಕ್ಯುಮೆಂಟ್ ಚಿಂತನಾಶೀಲ ಆಚರಣೆಯುಳ್ಳ ಮಾನವೀಯ ನೆಲೆಯಲ್ಲಿದ್ದು ಶಾಲಾ ಕಲಿಕೆಗೆ ಅನುಕೂಲಿಸುವ ಶಿಕ್ಷಕರನ್ನು ಪ್ರೋತಾಹಿಸುತ್ತದೆ.ಶಾಲಾ ಕಲಿಕೆ ಕೇವಲ ಒಂದು ವರ್ಗದ ಹಿತವನ್ನು ಕಾಯ್ದುಕೊಂಡಿರುವುದು 2014 UNDP Gender Development Index ಭಾರತ 0.795 ಅಂಕಗಳಿಂದ ಮಧ್ಯಮ ಶ್ರಯಾಂಕಿತ ಮಾನವ ಅಭಿವೃದ್ದಿ ಸೂಚಕದಲ್ಲಿದೆ. ಅತ್ಯಂತ ಕೊನೆಯದೆಂದು ವರ್ಗೀಕರಿಸಲಾಗಿರುವ 5ನೇ ಗುಂಪಿನಲ್ಲಿದೆ. ಮಹಿಳೆ ಮತ್ತು ಪುರುಷರ ನಡುವಿನ ಅಂತರದಲ್ಲಿ ಶೇಕಡ 10 ಕ್ಕಿಂತ ಹೆಚ್ಚು ಅಂತರವಿರುವ ರಾಷ್ಟ್ರಗಳಲ್ಲಿ ಗುರುತಿಸಲಾಗಿದೆ. ಇದರೊಂದಿಗೆ 2001 ರಿಂದ 2010 ರವರೆಗೆ ಸರ್ವಶಿಕ್ಷಣ ಅಭಿಯಾನದಲ್ಲಿ ಪ್ರಾಥಮಿಕ ಶಿಕ್ಷಣ ಸಾರ್ವತ್ರಿಕರಣಕ್ಕೆ ಸಂಬಂಧಿಸಿದಂತೆ ಹಾಕಿಕೊಳ್ಳಲಾದ ಗುರಿಗಳಲ್ಲಿ ಇನ್ನೂ ಸಾಧಿಸಲಾಗದೆ ಉಳಿದಿರುವ ಗುರಿಗಳಲ್ಲಿ ಒಂದೆಂದರೆ ಲಿಂಗ ಸಮಾನತೆಯಾಗಿದೆ. ಈ ಗುರಿಯು ಮಿಲೇನಿಯಂ ಅಭಿವೃದ್ದಿ ಗುರಿಗಳಲ್ಲಿ ಒಂದಾಗಿದ್ದರೂ ಮನುಕುಲಕ್ಕೆ ಸವಾಲಾಗಿರುವ ವಿಷಯವನ್ನು ಕ್ಷೇತ್ರವನ್ನು ಬಹು ಮುಖ್ಯವೆಂದು ಭಾವಿಸಿ **ಆರ್‌ಇಎಂಎಸ್ ಮೊದಲನೇ ಪರಿಕಲ್ಪನೆ ಸಂಶೋಧನೆಯ ಆಯಾಮಕ್ಕೆ ಆದ್ಯತೆ ನೀಡಿ** ಕ್ಷೇತ್ರ ಕಾರ್ಯದಿಂದ ಸಂಗ್ರಹಿಸಿದ ದತ್ತಾಂಶ ಹಾಗೂ ಈಗಾಗಲೇ ನಡೆದಿರುವ ಸಂಶೋಧನೆ ನೆರಳಿನಲ್ಲಿ ವಿಶ್ಲೇಷಿಸುವಂತಹ ಬರಿಗಾಲ ನಡೆಯಂತೆ ಕಿರು ಸಂಶೋಧನಾ ಪ್ರಯತ್ನ ಇದಾಗಿದೆ.

**ಉದ್ದೇಶಗಳು:**

1. ಶಿಕ್ಷಕರು ಅಧಿಕಾರಿಗಳು ವೈಯಕ್ತಿಕವಾಗಿ ಲಿಂಗಾಧಾರಿತ ಅಸಮಾನತೆ ಅನುಭವಿಸಿರುವುದನ್ನು ಗುರುತಿಸುವುದು

2. ಲಿಂಗಾಧಾರಿತ ಸಮಾನತೆಯ ಪ್ರಯತ್ನಗಳಿಗೆ ಇರುವ ಅಡಚಣೆಗಳನ್ನು ಗುರುತಿಸುವುದು

3. ಲಿಂಗಾಧಾರಿತ ಅಸಮಾನತೆಯ ಅಡಚಣೆಯನ್ನು ನಿಭಾಯಿಸುವ ತಂತ್ರಗಳನ್ನು ಗುರುತಿಸುವುದು

4. ಶಿಕ್ಷಕರು ಅಧಿಕಾರಿಗಳು ಲಿಂಗ ಸಮಾನತೆಗಾಗಿ ವ್ಯಕ್ತಿಗತವಾಗಿ ಮಾಡಿರುವ ಪ್ರಯತ್ನಗಳನ್ನು ತಿಳಿಯುವುದು

5. ಶಾಲೆಯು ಬಾಲಕ ಬಾಲಕಿಯರಿಬ್ಬರ ವ್ಯಕ್ತಿತ್ವ ವಿಕಸನಕ್ಕೆ ಅವಕಾಶ ನೀಡುತ್ತಿದೆಯೆ? ಗುರುತಿಸುವುದು

6. ಪೋಷಕರು ಶಿಕ್ಷಕರು ಅಧಿಕಾರಿಗಳಿಗೆ ಲಿಂಗ ಸಮಾನತೆಯ ಅರಿವು ನೀಡುವುದರ ಅಗತ್ಯತೆಯನ್ನು ತಿಳಿಯುವುದು

7. ಲಿಂಗ ಸಂವೇದನಾತ್ಮಕ ಜಾಗೃತಿಗಳು ಆಲೋಚನೆಯನ್ನು ಪ್ರಭಾವಿಸುತ್ತವೆಯೆ? ತಿಳಿಯುವುದು

8. ಶಿಕ್ಷಕರು ಅಧಿಕಾರಿಗಳಿಗೆ ಲಿಂಗ ಸಂವೇದನಾ ತರಬೇತಿಗೆ ಹೆಚ್ಚಿನ ಮಾಹಿತಿ ಅಗತ್ಯವಿರುವ ಕ್ಷೇತ್ರಗಳನ್ನು ಗುರುತಿಸುವುದು

**ಸಂಶೋಧನಾ ಪ್ರಶ್ನೆಗಳು:**

1. ಶಿಕ್ಷಕರು ಅಧಿಕಾರಿಗಳು ವೈಯಕ್ತಿಕವಾಗಿ ಲಿಂಗಾಧಾರಿತ ಅಸಮಾನತೆಯನ್ನು ಅನುಭವಿಸಿರುವರೆ?

2. ಲಿಂಗಾಧಾರಿತ ಸಮಾನತೆಯ ಪ್ರಯತ್ನಗಳಿಗೆ ಅಡಚಣೆಗಳಿವೆಯೆ?

3. ಲಿಂಗಾಧಾರಿತ ಅಸಮಾನತೆಯ ಅಡಚಣೆಯನ್ನು ನಿಭಾಯಿಸುವ ತಂತ್ರಗಳು:

4. ಲಿಂಗ ಸಮಾನತೆಗಾಗಿ ವ್ಯಕಿಗತ ಪ್ರಯತ್ನಗಳನ್ನು ಮಾಡಿದ್ದಿರಾ?

5. ಬಾಲಕ ಬಾಲಕಿಯರಿಬ್ಬರ ವ್ಯಕ್ತಿತ್ವ ವಿಕಸನಕ್ಕೆ ಶಾಲೆಯು ಅವಕಾಶ ನೀಡುತ್ತಿದೆಯೆ?

6. ಪೋಷಕರು ಶಿಕ್ಷಕರು ಅಧಿಕಾರಿಗಳಿಗೆ ಲಿಂಗ ಸಮಾನತೆಯ ಅರಿವಿನ ಅಗತ್ಯತೆ ಇದೆಯೆ?

7. ಲಿಂಗ ಸಂವೇದನಾ ಜಾಗೃತಿಗಳು ಆಲೋಚನೆಯನ್ನು ಪ್ರಭಾವಿಸುತ್ತವೆಯೆ?

8 ಶಿಕ್ಷಕರು ಅಧಿಕಾರಿಗಳಿಗೆ ಲಿಂಗ ಸಂವೇದನಾ ತರಬೇತಿಗೆ ಹೆಚ್ಚಿನ ಮಾಹಿತಿ ಬೇಕೆನಿಸುವ ಕ್ಷೇತ್ರಗಳಾವುವು?

**ವ್ಯಾಪ್ತಿ:**

ಶಿವಮೊಗ್ಗ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಶಾಲಾ ಶಿಕ್ಷಣಕ್ಕೆ (1 ರಿಂದ 10 ನೇ ತರಗತಿ) ಸಂಪನ್ಮೂಲ ಬೆಂಬಲ ಒದಗಿಸುವ ಸರ್ಕಾರಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ಹಾಗೂ ಮಾರ್ಗದರ್ಶಕ ಅಧಿಕಾರಿಗಳು ನೀಡಿರುವ ಅಭಿಪ್ರಾಯಗಳಿಗೆ ಸೀಮಿತವಾಗಿದೆ. ಈ ಅಭಿಪ್ರಾಯಗಳು ಬಾಲಕ ಬಾಲಕಿ ಪುರುಷ ಮಹಿಳೆಯನ್ನು ಸಮಾನ ನೆಲೆಗಟ್ಟಿನಲ್ಲಿ ವೀಕ್ಷಿಸದೆ, ಬಾಲಕಿ ಮಹಿಳೆಯಲು ಹೆಚ್ಚು ಅವಕಾಶ ವಂಚಿತರು ಎಂಬ ದೃಷ್ಟಿಕೋನದಲ್ಲಿ ಪ್ರತಿಕ್ರಿಯಿಸಿರುವದನ್ನು ಆಧರಿಸಿ ವಿಶ್ಲೇಷಣೆಯನ್ನು ನಿರ್ವಹಿಸಲಾಗಿದೆ.

**ಪರಿಭಾಷೆಗಳು** :

ಲಿಂಗ : ಗಂಡು ಹೆಣ್ಣಿನ ನಡುವಿನ ಜೈವಿಕ ವ್ಯತ್ಯಾಸ

**ಜೆಂಡರ್** : ಲಿಂಗಾಧಾರಿತ ಸಾಮಾಜಿಕ ಪಾತ್ರ

**ಲಿಂಗ ಸಂವೇದನೆ** : ಲಿಂಗ ಸಮಾನತೆಯ ಜ್ಞಾನದಿಂದ ಮನೋಧೋರಣೆಯಲ್ಲಾದ ಬದಲಾವಣೆಯನ್ನು ಸೂಚಿಸುವ ಪದವಾಗಿದೆ

**ಅಧಿಕಾರಿಗಳು** : ಜಿಲ್ಲೆಯ ಡಿಡಿಪಿಐ (ಆಡಳಿತ) ಡಿಡಿಪಿಐ (ಅಭಿವೃದ್ದಿ) ಬಿಇಓ, ಬಿಆರ್‌ಸಿ ಆಯ್ದ ಸಿಆರ್‌ಸಿ ಕೇಂದ್ರದ ಅಧಿಕಾರಿಗಳು

**ಶಿಕ್ಷಕರು** : ಸರ್ಕಾರಿ ಶಾಲೆಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಮುಖ್ಯ ಮತ್ತು ಸಹಶಿಕ್ಷಕರು

## ಪ್ರತಿದರ್ಶಚಯನ:

ಶಿವಮೊಗ್ಗ ಜಿಲ್ಲೆಯ ಶಿಕ್ಷಕರ ಶಿಕ್ಷಣ ವ್ಯವಸ್ಥೆಯಲ್ಲಿದ್ದು ಶಾಲಾ ಶಿಕ್ಷಣಕ್ಕೆ ಮಾರ್ಗದರ್ಶನ ನೀಡುವ ಸರ್ಕಾರಿ ಸ್ವಾಮ್ಯದಲ್ಲಿರುವ ಶಿಕ್ಷಕರು ಹಾಗೂ ಜಿಲ್ಲಾ ಹಂತದವರೆಗಿನ ಮಾರ್ಗದರ್ಶಕ ಅಧಿಕಾರಿಗಳು

ಜಿಲ್ಲೆಯ ಡಿಡಿಪಿಐ (ಆಡಳಿತ) ಡಿಡಿಪಿಐ (ಅಭಿವೃದ್ಧಿ) ಬಿಇಓ, ಬಿಆರ್‌ಸಿ ಕೇಂದ್ರದ ಅಧಿಕಾರಿಗಳು ಹಾಗೂ ಆಯ್ದ ಸಿಆರ್‌ಸಿ ಶಾಲೆಯ ಶಿಕ್ಷಕರನ್ನು ಒಳಗೊಂಡ ಸಂಸ್ಥೆ ಅಧಿಕಾರಿಗಳಿಂದ ಮಾಹಿತಿ ಪಡೆಯಲಾಗಿದೆ.

**ಪ್ರಶ್ನಾವಳಿ** : ತೆರೆದ ಹಾಗೂ ಮುಚ್ಚಿದ ಉತ್ತರ ನಿರೀಕ್ಷಿಸುವ ಪ್ರಶ್ನಾವಳಿಗಳು.

ಶಾಲೆ ಭೇಟಿ ಮತ್ತು ಸಂಬಂಧಿಸಿದ ಸಂಸ್ಥೆಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದೆ ಕೆಲವು ತರಬೇತಿ ಅವಧಿಯಲ್ಲಿ ಪ್ರಶ್ನಾವಳಿ ನೀಡಿ ಮಾಹಿತಿ ಸಂಗ್ರಹಿಸಿದೆ.

**ವಿಶ್ಲೇಷಣೆ** :ಎಸ್‌ಪಿಎಸ್‌ಎಸ್ 16.0 ಮುಚ್ಚಿದ ಪ್ರಶ್ನೆಗಳನ್ನು ವಿಶ್ಲೇಷಿಸಿ ನಕ್ಷೆಯಲ್ಲಿ ಪ್ರತಿನಿಧಿಸಿದೆ.

ತೆರೆದ ಪ್ರಶ್ನೆಗಳಿಗೆ ದತ್ತಾಂಶ ಕ್ರೋಢೀಕರಿಸಿ ಗುಣಾತ್ಮಕ ವಿಶ್ಲೇಷಣೆಯನ್ನು ಕೈಗೊಂಡಿದೆ.

ಫಲಶೃತಿಯನ್ನು 180 ಪ್ರಶ್ನಾವಳಿಗಳಿಗೆ ನೀಡಿದ ಅಭಿಪ್ರಾಯ ಹಾಗೂ ಕೆಲವು ಸಂಶೋಧನೆ ಪರಾಮರ್ಶನ ಆಧರಿಸಿ ವಿಶ್ಲೇಷಣೆಗೆ ಒಳಪಡಿಸಲಾಯಿತು.

# ಅಧ್ಯಾಯ: 2 ಸಾಹಿತ್ಯ ಅವಲೋಕನ

ಕ್ರಾಂತಿಯನ್ನು ತಡೆಯಲು ಶಿಕ್ಷಣ ನೀಡು'' ಎಂಬ ಹಿತೋಕ್ತಿಯಂತೆ ಶಿಕ್ಷಣವು ಎಲ್ಲಾ ಸಾಮಾಜಿಕ ಅವಶ್ಯಕತೆಗಳಿಗೆ ದಾರಿ ದೀಪವಾಗಿದೆ. ಅಲ್ಲದೆ ಸಾಂಸ್ಕೃತಿಕ ಮಾರ್ಪಡಿಕೆಗೆ ಶಿಕ್ಷಣವು ಕೈಮರದಂತಿದ್ದು, ಜನರನ್ನು ಸರಿದಾರಿಗೆ ತರಲು, ಮನಸ್ಥಿತಿಯನ್ನು, ಧೋರಣೆಗಳನ್ನು ವಿಮರ್ಶೆಯ ಒರೆಗಲ್ಲಿಗೆ ಹಚ್ಚಿ ತನ್ಮೂಲಕ ಸಾಮಾಜಿಕ ಪರಿವರ್ತನೆ ತರುವ ಸಾಧನವಾಗಿದೆ. ಇದಕ್ಕೆ ಹಲವು ನಿದರ್ಶನಗಳನ್ನು ಇತಿಹಾಸದ ಕಾಲಘಟ್ಟದಲ್ಲಿ ಗುರುತಿಸಬಹುದಾಗಿದೆ. ಆದರೆ ಶಿಕ್ಷಣದ ಎಲ್ಲೆ ದಾಟಿ ವ್ಯಾಪಿಸಿರುವ ಹಲವು ಸಾಮಾಜಿಕ ಅವಶ್ಯಕತೆಗಳಿವೆ. ಈ ಬಗೆಯ ಸಾಮಾಜಿಕ ಅವಶ್ಯಕತೆಗಳಲ್ಲಿ ಒಂದೆಂದರೆ ಸ್ತ್ರೀ ಪುರುಷ ನಡುವೆ ಅಸಮಾನತೆ ಎನ್ನುವ ಆಳವಾದ ಕಂದರವಾಗಿದೆ ಈ ಕಂದರದಿಂದಾಗಿ ಎಷ್ಟೋ ಸೃಜನಶೀಲ ಮನಸ್ಸುಗಳು ಕಮರಿ ಹೋಗಿ ಮನೆಗಷ್ಟೇ ಸೀಮಿತವಾಗಿ, ಮನುಕುಲಕ್ಕೆ ಕೊಡುಗೆ ನೀಡದೆ ನಶಿಸಿವೆ. ರಾಷ್ಟ್ರದ ಅಭಿವೃದ್ಧಿಗೆ ಕೈ ಜೋಡಿಸದೆ ಕೇವಲ ಮನೆಗಷ್ಟೇ ಸೀಮಿತವಾದ ಸ್ತ್ರೀ ಸಂಪನ್ಮೂಲವನ್ನು 1948 ವಿಶ್ವವಿದ್ಯಾಲಯ ಆಯೋಗದ ಅಧ್ಯಕ್ಷರಾದ ಡಾ. ರಾಧಕೃಷ್ಣನ್‌ರವರು ಹೀಗೆ ಪ್ರಶ್ನಿಸಿದ್ದಾರೆ. ಯಾವ ಸಾಂಸ್ಕೃತಿಕ ಬಲ ಸುಮಾರು ಶೇಕಡ 50ರಷ್ಟಿರುವ ಮಾನವ ಸಂಪನ್ಮೂಲವನ್ನು, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಹೀಗೆ ಎಲ್ಲಾ ಕ್ಷೇತ್ರಗಳಿಂದ ದೂರವಿಟ್ಟು ರಾಷ್ಟ್ರದ **ಅಭಿವೃ**ದ್ಧಿ ಕುರಿತು ಚಿಂತಿಸುತ್ತಿದ್ದಾರೆ ನನಗೆ ಶಿಕ್ಷಣ ನೀಡಲು ಸ್ತ್ರೀ ಪುರುಷರ ನಡುವೆ ಆಯ್ಕೆಗೆ ಅವಕಾಶವಿತ್ತರೆ ನಾನು ಸ್ತ್ರೀಯನ್ನೇ ಆಯ್ಕೆ ಮಾಡುತ್ತೇನೆ ಏಕೆಂದರೆ ಸ್ತ್ರೀ ಗೆ ಶಿಕ್ಷಣ ನೀಡಿದರೆ ಅದು ಮುಂದಿನ ಪೀಳಿಗೆ ಲಭಿಸುವ ಸಾಧ್ಯತೆ ಹೆಚ್ಚು.

ಮಾನವ ಜೀವಿಯು ಸೃಷ್ಟಿಯ ಎಲ್ಲಾ ಜೀವಿಗಳಂತೆ ಜೈವಿಕವಾಗಿ ಗಂಡು ಹೆಣ್ಣು ಎಂದು ವರ್ಗೀಕರಿಸಲಾಗಿದೆ. ಲಿಂಗ (ex) ಈ 2 ಜೀವಿಗಳಲ್ಲಿನ ಜೈವಿಕ ವ್ಯತ್ಯಾಸಗಳನ್ನು ಗುರುತಿಸಲು ಬಳಸುವ ಪದವಾಗಿದ್ದು, ಇದರೊಂದಿಗೆ ಇನ್ನೊಂದು ಪರಿಕಲ್ಪನೆ ಲಿಂಗಾಧಾರಿತ ಭೇದ (sex based difference) **'ಜೆಂಡರ್'** ದೈಹಿಕ ವ್ಯತ್ಯಾಸವನ್ನಾಧರಿಸಿ ಸಮಾಜ ನಿರ್ಧರಿಸಿದ ಮೌಲ್ಯ ಅಥವಾ ಲಿಂಗಾಧಾರಿತ ಪಾತ್ರ ನಿರ್ವಹಣೆಯ ಸೂಚಿಯಾಗಿದೆ. ಇದೊಂದು ಅಲಿಖಿತ ಮೌಲ್ಯವಾಗಿದ್ದು ಸಂಸ್ಕೃತಿಯಲ್ಲಿ ಪದ್ಧತಿ, ಸಂಪ್ರದಾಯ, ಲೋಕರೂಢಿ ಎಂಬ ಹೆಸರಿನಲ್ಲಿ ಹಿರಿಯರಿಂದ ಕಿರಿಯರಿಗೆ ವರ್ಗಾಯಿಸಲ್ಪಡುತ್ತಿದೆ. ಈ ವ್ಯವಸ್ಥೆಯಿಂದ ಕೇವಲ ಪುರುಷ ವರ್ಗದ ಹಿತವನ್ನು ಕಾಪಾಡಲಾಗಿದ್ದು ಸ್ತ್ರೀಯರು ಕಡೆಗಣಿಸಲ್ಪಟ್ಟಿದ್ದಾರೆ. (ಡಿ,ಎಸ್,ಇ,ಆರ್,ಟಿ ಬೆಂಗಳೂರು ''ಜೆಂಡರ್ ವಿಷಯಗಳು''ಸಂಪನ್ಮೂಲ ಪುಸ್ತಕ)

ಆ್ಯನ್ ಓಕ್‌ಲೆ ರವರು ಜೆಂಡರ್ ಪದವನ್ನು ಸ್ತ್ರೀ ಪುರುಷರ ನಡುವಿನ ಸಾಮಾಜಿಕ ವ್ಯತ್ಯಾಸವನ್ನು ಗುರುತಿಸಲು ಬಳಸುವ ಪರಿಕಲ್ಪನೆಯಾಗಿಸಿದರು.(Ann oakley ,1972) (ಲಿಂಗಾಧಾರಿತ ಸಾಮಾಜಿಕ ಪಾತ್ರ ಹಂಚಿಕೆ) ಈ ಸಾಮಾಜಿಕ ವ್ಯವಸ್ಥೆಯನ್ನು ಪ್ರಶ್ನಿಸಿ ವಿಶ್ವದಾದ್ಯಂತ ಹಲವು ಮಜಲುಗಳಲ್ಲಿ ಸ್ತ್ರೀಪರ ಹೋರಾಟಗಳು, ಅಂತರಾಷ್ಟ್ರೀಯ ಮಹಿಳಾ ಚಳುವಳಿಗಳು 1960ರ ದಶಕದ ಉತ್ತರಾರ್ಧದಲ್ಲಿ ಪಶ್ಚಿಮದಲ್ಲಿ ಸಂಭವಿಸಿದವು

ಈ ಬಗೆಯ ಹೋರಾಟಗಳಲ್ಲಿ ಸ್ತ್ರೀಯರು ರಾಜಕೀಯ, ಆರ್ಥಿಕ, ಜನಾಂಗೀಯ ಗುಲಾಮಗಿರಿಯಿಂದ ಹೊರಬರುವ ಧ್ಯೇಯ ಹೊಂದಿದ್ದವು ಇದರ ಪರಿಣಾಮವಾಗಿ ಸ್ತ್ರೀವಾದಿ ವಿಮರ್ಶೆ ಹುಟ್ಟಿಕೊಂಡಿತು ಈ ಬಗೆಯ ವಿಮರ್ಶೆಗಳನ್ನು ಉದಾರವಾದಿ ಸ್ತ್ರೀವಾದ, ಸಮಾಜವಾದಿ/ಮಾರ್ಕ್ಸ್‌ವಾದ ಸ್ತ್ರೀವಾದ, ಸಾಂಸ್ಕೃತಿಕ ಸ್ತ್ರೀವಾದ, ತೀವ್ರವಾದ ಸ್ತ್ರೀವಾದ, ಮನೋವಿಶ್ಲೇಷಣಾತ್ಮಕ ಸ್ತ್ರೀವಾದ, ಅಮೇರಿಕಾ ಸ್ತ್ರೀವಾದ, ಫ್ರೆಂಚ್ ಸ್ತ್ರೀವಾದ, ಕಪ್ಪು ಸ್ತ್ರೀವಾದ, ಲೆಸ್ಬಿಯನ್ ಸ್ತ್ರೀವಾದ ಹೀಗೆ ವಿಭಿನ್ನ ನೆಲೆಗಟ್ಟಿನಲ್ಲಿ ವಿಶ್ಲೇಷಣೆ ಹುಟ್ಟುಹಾಕಿ ಪುರುಷ ಪ್ರಾಧಾನ್ಯತೆಯಲ್ಲಿ ಸ್ತ್ರೀಯ ದ್ವಿತೀಯ ದರ್ಜೆಯನ್ನು ಪ್ರಶ್ನಿಸಿರುವುದನ್ನು ಗಮನಿಸಬಹುದು (ಡಾ. ಪ್ರೀತಿ ಶುಭಚಂದ್ರ 2010)

ತೀವ್ರಗಾಮಿ ಸ್ತ್ರೀ ವಾದದ ನೆಲೆಯಂತೆ ಜೆಂಡರ್ ಎಂಬುದು ಸಮಾಜ ಸೃಷ್ಟಿಸಿದ್ದು, ಸಂಸ್ಕೃತಿಯ ಶೋಧನೆಯಾಗಿದೆ.ಇದು ಸ್ತ್ರೀ ಪುರುಷರಿಬ್ಬರನ್ನು ನಿಶ್ಚಿತ ಸನ್ನಿವೇಶದಲ್ಲಿ ವ್ಯಕ್ತಿಗಳೊಂದಿಗೆ ಹೇಗೆ ವರ್ತಿಸಬೇಕೆಂಬುದನ್ನು ಮಾರ್ಗದರ್ಶಿಸುತ್ತದೆ. (fausto and sterling; 1992, Gerjen & davis 1997,Kessler & Mc kenna 1978) ಈ ದೃಷ್ಟಿಕೋನದಲ್ಲಿ (something what we are not what we do) ನಾವೇನಾಗಿದ್ದೇವೆ ಎಂಬುದಕ್ಕಿಂತ ನಾವು ಏನು ಮಾಡುತ್ತೇವೆ ಎಂಬುದು ಬಹಳ ಮುಖ್ಯವಾಗಿರುತ್ತದೆ.

ಜೆಂಡರ್ ಎಂಬುದು ಸಾಮಾಜಿಕವಾಗಿ ಲೋಕರೂಡಿ ಸಂಪ್ರದಾಯ ಪದ್ಧತಿ ಸಂಸ್ಕೃತಿಯ ಹೆಸರಿನಲ್ಲಿ ಹೆಣೆಯಲ್ಪಟ್ಟಿದೆ ಸಾಮಾಜಿಕ ರಚನಾವಾದಿ ಸಿದ್ಧಾಂತವು ನಿರೂಪಿಸುತ್ತದೆ.

ಈ ನೆಲೆಯಲ್ಲೆ ಮನಶಾಸ್ತ್ರಜ್ಞರಾದ Kay deaxu and Brenda major (1987) ಅವರು ವಾದ ಮಂಡಿಸುತ್ತಾ, ನಾವು ಗಂಡು ಅಥವಾ ಹೆಣ್ಣಾಗಿ ನಿರ್ವಹಿಸುವ ಪಾತ್ರವು ನಾವು ಹೊಂದಿರುವ (self schema (1,2) and self concept) ಸ್ವಯಂ ಸ್ಕೀಮ ಹಾಗೂ ಸ್ವಯಂ ಪರಿಕಲ್ಪನೆಯಂತಿರುತ್ತದೆ. ಇದನ್ನು ಮಕ್ಕಳಿಗೆ ಪೋಷಕರಿಂದ ಅನುಬಂಧಿಸಲಾಗುತ್ತದೆ. ಮಕ್ಕಳು ಪೋಷಕರು ಗಂಡು ಹೆಣ್ಣಾಗಿ ನಿರ್ವಹಿಸುವ ಸಾಮಾಜಿಕ ಪಾತ್ರಗಳನ್ನು ವೀಕ್ಷಿಸುತ್ತಾ ಅನುಕರಿಸುತ್ತಿರುತ್ತಾರೆ. ಈ ಪ್ರಕ್ರಿಯೆಯನ್ನು ವೀಕ್ಷಣಾ ಕಲಿವು/ ಮಾದರಿ ಪಡೆಯುವಿಕೆ (ಬಂಡೂರ) ಎಂದೂ ಇದರ ಉಚ್ಛ್ರಾಯ ಸ್ಥಿತಿ ಆ ವ್ಯಕ್ತಿಯೊಂದಿಗೆ ಗುರುತಿಸಿಕೊಳ್ಳುವವರೆಗೆ ಸಾಗುತ್ತದೆ ಇದನ್ನೆ ತಾದಾತ್ಯಗೊಳಿಸುವಿಕೆ (ಡಿಸೆಕೊ) ಎಂದು ಗುರುತಿಸಲಾಗಿದೆ.

ಹೀಗೇಯೆ ಜೆಂಡರ್ ಜ್ಞಾನವು ಮಕ್ಕಳಿಗೆ ತಮ್ಮನ್ನು ಗುರುತಿಸುಕೊಳ್ಳುವಿಕೆಯಿಂದಾರಂಭವಾಗಿ ತಾವೇ ಪಾತ್ರಧಾರಿಗಳಾಗುವವರೆಗೆ ಸಾಗುತ್ತದೆ ಎಂದು ಸ್ವಯಂ ಪ್ರಸೆಂಟೇಶನ್ ಸಿದ್ಧಾಂತ ನಿರೂಪಿಸುತ್ತದೆ.
ಮೇಲಿನ ಎಲ್ಲಾ ಸಿದ್ಧಾಂತಗಳು ಗುರುತಿಸುತ್ತಿರುವ ಜೆಂಡರ್ ಜ್ಞಾನವು, ವ್ಯಕ್ತಿಗಳಲ್ಲಿನ ಜ್ಞಾನ ನಕಾಶೆಯಲ್ಲಿ ಹೇಗೆ ವಿಕಸನವಾಗುತ್ತದೆ ಎಂಬುದನ್ನು ಮನೋವಿಜ್ಞಾನದ ಅಧ್ಯಯನಗಳು ವಿವರಿಸಿವೆ. ಇಲ್ಲಿ **(schema)** ಸ್ಕೀಮಾ, ಜೆಂಡರ್ ಸ್ಕೀಮಾ ಪಾರಿಭಾಷಿಕ ಪದವು ಅದನ್ನು ಅರ್ಥೈಸುವಲ್ಲಿ ಬಳಸಲಾಗಿದೆ.

ಅಡಿ ಟಿಪ್ಪಣಿಗಳು:

1. schema: schema is defined as a cognitive structure where the individual forms a network of associations which organizes and guides his or her percepetions. OR an organized pattern of thought or behavior OR a mental structure of preconceived idea.

   ಸ್ಕೀಮಾ:ಜ್ಞಾನ ನಕಾಶೆ

2. ಪಿಯಾಜೆ ಜ್ಞಾನ ಸಂರಚನಾ ಪ್ರಕ್ರಿಯೆ:ಜೀನ್ ಪಿಯಾಜೆರವರು ಪ್ರತಿಯೊಬ್ಬ ವ್ಯಕ್ತಿಯು ಜ್ಞಾನಾತ್ಮಕ ವಿಕಾಸದಲ್ಲಿ ಮುನ್ನಡೆಯಬೇಕಾದ 4 ಹಂತಗಳನ್ನು ಜ್ಞಾನಾತ್ಮಕ ವಿಕಾಸದ ಹಂತಗಳೆಂದು ಗುರ್ತಿಸಿದ್ದಾರೆ (cognative development) ಸಂವೇದನಾ ಗತಿ (ತಾನು ಪರಿಸರ ಪ್ರತ್ಯೇಕ ಕಲ್ಪನೆ) ಔಪಚಾರಿಕ ಕಾರ್ಯದವರೆಗೆ (ಪರಿಸರ ಕುರಿತು ಅಮೂರ್ತ ಚಿಂತನಾ ಸಾಮರ್ಥ್ಯ) 2 ವರ್ಷದಿಂದಾರಂಭಿಸಿ 11 ವರ್ಷದವರೆಗೆ ಮೇಲ್ಪಟ್ಟಿನ ವಯಸ್ಸಿನವರೆಗೆ ವಿಕಸನವಾಗುವುದನ್ನು ಗುರುತಿಸುತ್ತಾರೆ ಇಲ್ಲಿ ಸ್ಕೀಮ ಎಂಬ ಪಾರಿಭಾಷಕ ಪದ ಬಳಸುತ್ತಾರೆ. ಇದು ಜ್ಞಾನ ಸಂಸ್ಕರಿಸಲು ವ್ಯಕ್ತಿ ಹೊಂದಿರುವ ವಿಧಾನವಾಗಿದೆ. ಮಕ್ಕಳು ಪರಿಸರ ಮತ್ತು ಸಮಾಜ ಕುರಿತು ಸ್ಕೀಮಾ ಹೊಂದಿರುತ್ತಾರೆ. ಇದು ಹಾಗೆಯೇ ಮುಂದುವರಿಯುವುದಿಲ್ಲ ಇದು ಕಾಲ, ವಯಸ್ಸಿಗೆ ತಕ್ಕಂತೆ ಪರಿಸರದ ಅಂತರ್ ಕ್ರಿಯೆಯಿಂದ ಮಾರ್ಪಾಡಾಗುತ್ತಿರುತ್ತದೆ. ಈ ಬದಲಾವಣೆಯನ್ನು ವಿವರಿಸಲು ಪಿಯಾಜೆಯವರು ಹೊಂದಿಕೊಳ್ಳುವಿಕೆ (Adaptation) ಎನ್ನುತ್ತಾರೆ ಈ ಹೊಂದಿಕೊಳ್ಳುವಿಕೆ ಎರಡು ಪೂರಕ ಕ್ರಿಯೆಗಳ ಮೂಲಕ ನಡೆಯುತ್ತದೆ ಅವುಗಳೆಂದರೆ ಮನೋಗತ ಮಾಡಿಕೊಳ್ಳುವಿಕೆ ತಾನು ಹೊಂದಿರುವ ನಿಲುವುಗಳನ್ನು (Assimilation) ಮನೋಗತ ಮಾಡಿಕೊಳ್ಳುತ್ತಾರೆ ಹೊಸ ಮಾದರಿಗಳಿಗೆ ಸ್ಥಳಾವಕಾಶ ಒದಗಿಸುತ್ತಾಂ ೆ(accommodation) ಹೀಗೆ ಜ್ಞಾನದ ಸ್ಕೀಮಾವು ಮಾರ್ಪಡಾಗುತ್ತಿರುತ್ತದೆ.

ಜೆಂಡರ್ ಜ್ಞಾನ ಸಂರಚನಾ ಪ್ರಕ್ರಿಯೆ:

ಜೀನ್ ಪಿಯಾಜೆ ಸ್ಕೀಮಾ ಸಿದ್ಧಾಂತದ ಆಧಾರದಲ್ಲಿ ಕೋಲ್ಬರ್ಗ್‌ರವರು Kohlberg (1966) ಮೊಟ್ಟಮೊದಲ ಬಾರಿಗೆ ಜೆಂಡರ್ ಜ್ಞಾನಾತ್ಮಕ ವಿಕಾಸವನ್ನು (gender cognative approach) ದೃಷ್ಟಿಕೋನವನ್ನು ಹುಟ್ಟುಹಾಕಿದರು. ಇವರು ಮಕ್ಕಳ ಜೆಂಡರ್ ಜ್ಞಾನ ವಿಕಾಸವು ಕೆಳಗಿನ 3 ಹಂತಗಳಲ್ಲಿ ಗುರುತಿಸುತ್ತಾರೆ.

1. gender identity: (ಜೆಂಡರ್ ಗುರುತಿಸಿಕೊಳ್ಳುವಿಕೆ) ಮಕ್ಕಳು ತನ್ನನ್ನು ಗಂಡು ಹೆಣ್ಣಾಗಿ ಗುರುತಿಸಿಕೊಳ್ಳುತ್ತಾರೆ ನಂತರ ಸಮಾಜದ ಇತರೆ ಸದಸ್ಯರನ್ನು ಲಿಂಗಾಧಾರಿತ ವರ್ಗೀಕರಿಸುತ್ತದೆ.

2. gender stability: ಗುರುತಿಸಿದ ಮಾದರಿಯನ್ನು ಬದಲಾಯಿಸದೆ ಉಳಿಸಿಕೊಳ್ಳುವರು

3. gender consistency: ಉಳಿಸಿಕೊಂಡ ಮಾದರಿಯಂತೆ ತನ್ನ ವ್ಯಕ್ತಿತ್ವದ ಗುಣ ಲಕ್ಷಣಗಳು, ವರ್ತನೆಯನ್ನು ಮಾರ್ಪಡಿಸಿಕೊಂಡು ಮುಂದುವರಿಸುತ್ತಾರೆ

ಹೀಗೆ ಕೋಹ್ಲ್‌ಬರ್ಗ್‌ರವರು ಜೆಂಡರ್ ಜ್ಞಾನ ಸಂರಚನೆಯಾಗುವುದರಿಂದ ಇದು ಅವರ ಆಲೋಚನೆ ಹಾಗೂ ವರ್ತನೆಯ ಮೇಲೆ ಪ್ರಭಾವಿಸುತ್ತದೆ (ನಾನು ಹುಡುಗ ಹಾಗಾಗಿ ಹುಡುಗ ಮಾಡುವಂತಹ ಕೆಲಸ ಮಾಡುತ್ತೇನೆ) ಹಾಗೂ ಈ ಬಗೆಯ ತೀವ್ರವಾದ ಪ್ರಭಾವವನ್ನು ಅಳಿಸುವುದು ಕಷ್ಟ.

ಇದೆ ದೃಷ್ಟಿಕೋನ ಆಧರಿಸಿದ (Carol Lynn Martin1 and Diane Ruble2) ರವರ

ಸಂಶೋಧನೆ ಸಹ ಜೆಂಡರ್ ಜ್ಞಾನಾತ್ಮಕ ವಿಕಾಸವು ಮೂರು ಮುಖ್ಯ ಹಂತಗಳೊಂದಿಗೆ ಸಾಗುವುದನ್ನು ದೃಢಪಡಿಸಿದೆ.

1. ಜೆಂಡರ್ ಗುರುತಿಸುವಿಕೆ : The Emergence of Gender Identity: ಮಕ್ಕಳು ತಮ್ಮ ಲಿಂಗವನ್ನಾಧರಿಸಿ ಸಾಮಾಜಿಕ ಪಾತ್ರಗಳನ್ನು (ಗಂಡು ಹೆಣ್ಣಾಗಿ ನಿರ್ವಹಿಸುವ) ಗುರುತಿಸಿರುವಂತೆ ವ್ಯಕ್ತಿ ತನ್ನ ಸಾಮಾಜಿಕ ಗುಂಪನ್ನು ಗುರುತಿಸಿಕೊಳ್ಳುತ್ತಾರೆ ನಂತರ ಅದರ ಬೆನ್ನಲ್ಲೆ ತನ್ನ ಪಾತ್ರವನ್ನು ಧನಾತ್ಮಕವಾಗಿ ಮೌಲ್ಯೀಕರಿಸುತ್ತಿರುತ್ತಾರೆ.
2. ಅಭಿಪ್ರೇರಣೆ ಹಾಗೂ ಜೆಂಡರ್ ಜ್ಞಾನ ಸಂಗ್ರಹಣೆ Motivational and Informational stage : ಸಾಮಾಜಿಕ ಗುಂಪಿನ ಸದಸ್ಯನಾಗಿ ಗಂಡು ಹೆಣ್ಣು ಎಂದು ಗುರುತಿಸಿ, ಅರ್ಥೈಸಿಕೊಂಡ ನಂತರ ಮಕ್ಕಳಿಗೆ ತನ್ನ ಗುಂಪಿನ ಬಗ್ಗೆ ಹೆಚ್ಚು ತಿಳಿಯುವ ಪ್ರೇರೇಪಣೆ ಹೊಂದುತ್ತಾರೆ ಹಾಗೂ ಮಾಹಿತಿ ಸಂಗ್ರಹಿಸಿಕೊಳ್ಳುತ್ತಾರೆ.
3. ಕ್ರಿಯಾಶೀಲ ಹಾಗೂ ತಾವೇ ಮುಂದಾಳತ್ವ ವಹಿಸುವಿಕೆಯ ಜೆಂಡರ್ ವಿಕಾಸ Active, Self-Initiated View of Gender Development. ತನ್ನ ಸಾಮಾಜಿಕ ಪಾತ್ರ ಸ್ಪಷ್ಟತೆಯು ಮುಂದಾಳತ್ವ ವಹಿಸಲು, ಕ್ರಿಯಾಶೀಲವಾಗಿ ಪಾಲ್ಗೊಳ್ಳಲು ಸಹಕರಿಸುತ್ತದೆ.

(Trautner et al., 2003)ರವರು ಮಕ್ಕಳ ಬೆಳವಣಿಗೆ ಹಂತಗಳಲ್ಲಿ ಜ್ಞಾನಾತ್ಮಕ ವಿಕಾಸದ ಬಹುಮುಖ್ಯ ಅಂಶವೆಂದರೆ ಮಕ್ಕಳು ಜೆಂಡರ್ ಜ್ಞಾನಾತ್ಮಕ ಸಾಮರ್ಥ್ಯವನ್ನು ವಿಕಸನಗೊಳಿಸಿಕೊಳ್ಳುತ್ತಿರುವುದು (ವಿಭಿನ್ನ ಆಯಾಮದಲ್ಲಿ ಆಲೋಚಿಸಿ ವರ್ಗೀಕರಿಸುವುದು) ಆರಂಭಿಕ ಹಂತದಲ್ಲಿ ಮಕ್ಕಳು ಅವರ ನಂಬಿಕೆ ಆಲೋಚನೆಗಳು ಕಟ್ಟುನಿಟ್ಟಾಗಿ ಪಾಲಿಸುವರು(ಗಂಡು ಮಾತ್ರ,ಹೆಣ್ಣು ಮಾತ್ರ) ಹೀಗೆ ಮಕ್ಕಳು ತಮ್ಮದೇ ಸಾಮಾಜಿಕ ಪರಿಸರ ಸೃಷ್ಟಿಸಿಕೊಳ್ಳುತ್ತಾರೆ. ಈ ಹಂತದಲ್ಲಿನ ಒಂದು ಅಧ್ಯಯನ ಗುರುತಿಸುವಂತೆ ಹುಡುಗಿ ಬಿತ್ತುತ್ತಿರುವ ಹಾಗೂ ಹುಡುಗ ಅಡುಗೆ ಮಾಡುತ್ತಿರುವ ಚಿತ್ರವನ್ನು ಪುನಸ್ಮರಿಸಲು ಕೇಳಿದಾಗ ಜೆಂಡರ್ ಸ್ಟೀರಿಯೋ ಟೈಪ್ ಎನಿಸುವ ಅಂಶವನ್ನು ಮಾತ್ರ ಪುನ: ಸ್ಮರಿಸಿದರು (Martin & Halverson, 1983). ಅಲ್ಲದೆ ಮಕ್ಕಳು ಬೇಗ ತೀರ್ಮಾನಕ್ಕೆ ಬಂದು ಸಾಮಾನ್ಯೀಕರಿಸುತ್ತಾರೆ ಎಂಬುದು 3ವರ್ಷದ ಮಕ್ಕಳಿಗೆ ಹುಡುಗನಿಗೆ ಸೋಫ ಹಾಗೂ ಹುಡುಗಿಗೆ ಟೇಬಲ್ ಇಷ್ಟ ಎಂಬುದನ್ನು ಸ್ಪಷ್ಟತೆಯೊಂದಿಗೆ ನಿರೂಪಿಸಲು ಕೇಳಿದಾಗ ಗಂಡು ಮಕ್ಕಳು ಸೋಫಾ ಹಾಗೂ ಹೆಣ್ಣು ಮಕ್ಕಳು ಟೇಬಲ್ ಇಷ್ಟ ಪಡುತ್ತಾರೆ ಎಂದು ಸಾಮಾನ್ಯೀಕರಿಸುವಿಕೆಯನ್ನು ಪ್ರಾಯೋಗಿಕ ಸಂಶೋಧನೆ ನಿರೂಪಿಸುತ್ತದೆ. (auer& Coyne, 1997). ನಂತರದ ಹಂತದ ಬೆಳವಣಿಗೆಯಲ್ಲಿ ಸಡಿಲವಾಗುವುದನ್ನು ವಾಸ್ತವಕ್ಕೆ ಹತ್ತಿರವಾಗುವುದನ್ನು(2 ಲಿಂಗದವರು ಮಾಡಬಹುದು ಎಂಬ ಹಂತಕ್ಕೆ ಸಾಗುವುದು) ಇದು 3 ಹಂತಗಳಲ್ಲಿ ಅನುಕ್ರಮವಾಗಿ ಸಾಗುವುದನ್ನು ಅಧ್ಯಯನಗಳು ಗುರುತಿಸಿದೆ.

**ಮೊದಲನೆಯದು** ಶಾಲಾ ಪೂರ್ವ ಹಂತವಾಗಿದ್ದು ಈ ಹಂತದಲ್ಲಿ ಮಕ್ಕಳು ಜೆಂಡರ್ ಸಂಬಂದಿಸಿದ ಲಕ್ಷಣಗಳನ್ನು ಗುರುತಿಸಿಕೊಂಡು ತಾವು ಅನುಕರಿಸುವರು.

**ಎರಡನೆಯದು** ಶಾಲಾ ಹಂತವಾಗಿದ್ದು ಈ ಹಂತದಲ್ಲಿ ಮಕ್ಕಳು ತಾವು ಕಲಿತ ಜೆಂಡರ್ ಜ್ಞಾನವನ್ನು ಕಟ್ಟುನಿಟ್ಟಿನಿಂದ ಪಾಲಿಸಿ ಸಮಗ್ರಿಗೊಳಿಸಿಕೊಳ್ಳುವರು 5 ರಿಂದ 7 ನೇ ವಯಸ್ಸಿನಲ್ಲಿ ಇದರ ಉಚ್ಛ್ರಾಯ ಸ್ಥಿತಿ ತಲುವುದನ್ನು ಕಾಣಬಹುದು.

**ಮೂರನೆಯ** ಹಂತದಲ್ಲಿ ಜೆಂಡರ್ ಸ್ಕೀಮಾ ಕಠಿಣತೆಯಿಂದ ಸಡಿಲತೆ, ವಾಸ್ತವಕ್ಕೆ ಮರಳುವುದನ್ನು ಕಾಣಬಹುದು.

ಹೀಗೆ ಜೆಂಡರ್ ಸ್ಕೀಮಾ: (gender schema) ಜೆಂಡರ್ ಸ್ಕೀಮಾ ಮಾನವ ನರಮಂಡಲದಲ್ಲಿ ಮೂಡುವ ಲಿಂಗ ಸಂಬಂದಿ ಲಕ್ಷಣಗಳು ಜ್ಞಾನಾತ್ಮಕ ನಕಾಶೆಯ ಸಂರಚನೆಯಾಗಿದೆ. ಇಲ್ಲಿ ಪ್ರತಿ ಸಾಮಾಜಿಕರಣವು ಜ್ಞಾನಾತ್ಮಕವಾಗಿ ಲಿಂಗ ಸಂಬಂಧಿ ಲಕ್ಷಣಗಳು(ಣಡಿಚಿುಣ) ಇದರೊಂದಿಗೆ ಮೇಳೈಸಿರುವ ಅಂಶಗಳನ್ನು ಸಂಸ್ಕೃತಿಯಲ್ಲಿರುವ ಎಲ್ಲಾ ಸದಸ್ಯರಿಗೆ ವರ್ಗಾಯಿಸುತ್ತಿರುತ್ತದೆ. ವ್ಯಕ್ತಿ ತಾನು ಹೊಂದಿರುವ (gender role) ಲಿಂಗ ಪಾತ್ರದ ಮಾನಸಿಕ ಚಿತ್ರಣಕ್ಕೆ ತಕ್ಕಂತೆ ತನ್ನದೆ ಲಿಂಗದ ಸದಸ್ಯರನ್ನು ಗುರುತಿಸುವುದು

ಅವರ ಲಕ್ಷಣಗಳು, ಕಾರ್ಯಗಳು, ವಿಭಿನ್ನ ಸನ್ನಿವೇಶದಲ್ಲಿನ ವರ್ತನೆಗಳನ್ನು ವೀಕ್ಷಿಸಿ, ತನ್ನದಾಗಿಸಿಕೊಳ್ಳುತ್ತಿರುವ ಪ್ರಕ್ರಿಯೆಯನ್ನು ಸೂಚಿಸುತ್ತದೆ.ಈ ಪ್ರಕ್ರಿಯೆ ನಿರಂತರವಾಗಿ ಸಾಮಾಜಿಕರಿಸುತ್ತಿರುತ್ತದೆ.

ಜೀನ್ ಪಿಯಾಜೆರವರು ನೈತಿಕ ವಿಕಾಸನ ಪ್ರಕ್ರಿಯೆಯನ್ನು ವಿವರಿಸಿದ್ದಾರೆ. ಅವರು ಮಕ್ಕಳಲ್ಲಿ ನೈತಿಕ ಪರಿಕಲ್ಪನೆಗಳು ಹೇಗೆ ವಿಕಸನ ಹೊಂದುತ್ತವೆ ಎಂಬುದನ್ನು ವಿವರಿಸುತ್ತ, ಮೊದಲು ಸದಾಚಾರದ ಅಥವಾ ಪರಾದೀಪತ್ಯ ಹಂತದಿಂದಾರಂಭವಾಗುತ್ತದೆ. (5 ರಿಂದ 10 ನೇ ವಯಸ್ಸಿನವರೆಗೆ) ಈ ಹಂತದಲ್ಲಿ ಮಕ್ಕಳು ಎಲ್ಲಾ ನಿಯಮಗಳು ತಮಗೆ ದೇವರು, ಪೋಷಕರು ಮತ್ತು ಶಿಕ್ಷಕರಿಂದ ಬರುತ್ತವೆ ಈ ನಿಯಮಗಳು ಶಾಶ್ವತ ಅವುಗಳನ್ನು ಬದಲಾಯಿಸಬಾರದು ಕಡ್ಡಾಯ ವಿಧೇಯತೆ ಅಗತ್ಯ ಎಂದು ಭಾವಿಸುತ್ತಾರೆ.ಜ್ಞಾನಾತ್ಮಕ ಅಪರಿಪಕ್ವತೆ ನೈತಿಕ ತಿಳುವಳಿಕೆಯ ಕೊರತೆಗೆ ಕಾರಣವಾಗುತ್ತದೆ.

ನಂತರದಲ್ಲಿ ಸ್ವಯಂ ಆಧಿಪತ್ಯ (10 ವರ್ಷ ಮೇಲ್ಪಟ್ಟು) ಹಂತದಲ್ಲಿ ಹಿರಿಯರ ನಿಯಂತ್ರಣದಿಂದ ಬಿಡುಗಡೆ ಹೊಂದಿ ಸಮವಯಸ್ಕರ ಒಡನಾಟದಿಂದ ನಿಯಮಗಳು ಹೆಚ್ಚಿನ ಜನರ ಇಚ್ಛೆಯಂತೆ ಪರಷ್ಕರಿಸಬಲ್ಲಂತವು, ಸಕಾರಣದಿಂದ ನಿಯಮಗಳನ್ನು ಮುರಿಯಬಹುದು ತೀರ್ಮಾನಿಸುತ್ತಾರೆ. (Jean Pieaget Moral development) ಎಂದು ತಮ್ಮ ಸಂಶೋಧನೆಯಿಂದ ನಿರೂಪಿಸಿರುವರು.

ಜೆಂಡರ್ ಸ್ಕೀಮಾ ವಿಕಾಸವನ್ನು ಮನೋ ವೈಜ್ಞಾನಿಕ ನೆಲೆಯಲ್ಲಿ ಸ್ಯಾನ್‌ಡ್ರಾ ಬೆಮ್ ಲಿಪ್ಸ್‌ಸಿಟ್ಸ್‌ಜ್‌ರವರು ಅಧ್ಯಯನ ಮಾಡಿ ಜೆಂಡರ್ ಸ್ಕೀಮಾ ಸಿದ್ಧಾಂತವನ್ನು ಮೊದಲ ಬಾರಿಗೆ ಹುಟ್ಟುಹಾಕಿದರು ಇಲ್ಲಿ ಜೆಂಡರ್ ಸ್ಕೀಮಾ, ಸೆಕ್ಸ್ ಟೈಪಿಂಗ್ (sex typing) ಜೆಂಡರ್ ಸ್ಟೀರಿಯೋ ಟೈಪ್ಸ್ (Gender stereotypes) ಪರಿಕಲ್ಪನೆಗಳ ಮೂಲಕ ವಿವರಿಸುವ ಪ್ರಯತ್ನ ಮಾಡಿದ್ದಾರೆ. (**Gender schema theory** Sandra Bem Lipsitz 1981)

ಜೆಂಡರ್ ಸ್ಟೀರಿಯೋ ಟೈಪ್ಸ್ (Gender stereotypes) ಮನೋವೈಜ್ಞಾನಿಕವಾಗಿ ಸಮಾಜದಲ್ಲಿ ಬಿತ್ತಲ್ಪಟ್ಟ ಟಿಸಿಲೋಡೆದು ಬೆಳೆಯುತ್ತಿರುವ ಜೆಂಡರ್ ಸಾಮಾಜಿಕರಣ ಪ್ರಕ್ರಿಯೆಗಳನ್ನು ಹಾಗೂ ಪ್ರಶ್ನಿಸದೆ ಒಪ್ಪಿಕೊಳ್ಳುತ್ತಿರುವ ಪ್ರವೃತ್ತಿಯನ್ನು ಸೂಚಿಸುತ್ತದೆ. ಬೆಮ್ ಊಹಿಸುವಂತೆ ತಾರುಣ್ಯಾಪೂರ್ವದಲ್ಲೆ ಪ್ರಶ್ನಾರ್ತಕವಾಗಿ ನೋಡುವ, ವಿಭಿನ್ನ ಆಯಾಮದ ವಿಮರ್ಶೆಗಳು ಬೆಳವಣಿಗೆ ಹಂತದಲ್ಲೆ ಮನಸ್ಸಿನಲ್ಲಿ ಹುಟ್ಟಿಕೊಂಡರು ಸಹ ಸಮಾಜ ಹಾಗೂ ಸಂಸ್ಕೃತಿಯ ನಿಯಮಾವಳಿಗಳು ಸ್ತ್ರೀತ್ವ, ಪುರುಷತ್ವ ಎಂಬಂತೆ ಸಾಮಾಜಿಕರಿಸುತ್ತವೆ ಮತ್ತು ವಿರುದ್ಧ ಲಿಂಗಾಕರ್ಷಣೆಗೆ ತಕ್ಕಂತೆ ಸಾಮಾಜಿಕ ಪಾತ್ರ ವಹಿಕೆಗೆ ತೆರೆದುಕೊಳ್ಳುವಂತಹ ಸನ್ನಿವೇಶವನ್ನು ಸಂಸ್ಕೃತಿ ಸೃಷ್ಟಿಸುತ್ತದೆ.

ಸೆಕ್ಸ್ ಟೈಪಿಂಗ್ (sex typing) ಲಿಂಗ ಮಾದರಿಗಳು ಪ್ರತಿ ವ್ಯಕ್ತಿ ತಾನು ಅವಶ್ಯಕವೆಂದು ಪರಿಭಾವಿಸುವ ಲಿಂಗ ಮಾದರಿಯನ್ನು ಸಮೂಹ ಮಾದ್ಯಮ, ತನ್ನನ್ನು ಸಂಪೋಷಿಸಿದ ವಾತಾವರಣ, ಶಾಲೆ, ವಿಭಿನ್ನ ಸಂಸ್ಕೃತಿಯ ಬಗೆಗಳ ಮೂಲಕ ಪಡೆಯುತ್ತಿರುತ್ತಾರೆ. ಬೆಮ್‌ರವರು ವ್ಯಕ್ತಿಗಳು ಜೆಂಡರ್ ಸಾಮಾಜಿಕರಿಸಲ್ಪಡುತ್ತಿರುವವರ ಲಿಂಗ ಮಾದರಿಗಳನ್ನು 4 ಬಗೆಗಳಲ್ಲಿ ಗುರುತಿಸುತ್ತಾರೆ. sex-typed (individuals process and integrate traits and information)ವ್ಯಕ್ತಿಗಳು ತನ್ನದೆ ಲಿಂಗ ಮಾದರಿಯ ಲಕ್ಷಣ ಸಾಮಾಜಿಕ ಪಾತ್ರ ಪ್ರಕ್ರಿಯೆಯಲ್ಲಿರುವವರ ಮಾಹಿತಿಯನ್ನು ಹಾಗೂ cross-sex-typed, ವ್ಯಕ್ತಿಗಳು ತನ್ನ ವಿರುದ್ಧ ಲಿಂಗ ಮಾದರಿ ಸಾಮಾಜಿಕ ಪಾತ್ರ ಪ್ರಕ್ರಿಯೆಯಲ್ಲಿರುವವರ ಮಾಹಿತಿಯನ್ನು androgynous, ವ್ಯಕ್ತಿಗಳು ತನ್ನ ಹಾಗೂ ತನ್ನ ವಿರುದ್ಧ 2 ಬಗೆಯ ಲಿಂಗ ಮಾದರಿ ಸಾಮಾಜಿಕ ಪಾತ್ರ ಪ್ರಕ್ರಿಯೆಯಲ್ಲಿರುವವರ ಮಾಹಿತಿಯನ್ನು ಮತ್ತು undifferentiated ವ್ಯಕ್ತಿಗಳು ಯಾವುದೇ ಬಗೆಯ ಲಿಂಗ ಮಾದರಿ ಸಾಮಾಜಿಕ ಪಾತ್ರಗಳನ್ನು ತೋರ್ಪಡಿಸದಿರುವ ವ್ಯಕ್ತಿತ್ವದವರಾಗಿ ವರ್ಗೀಕರಿಸಿದ್ದಾರೆ.

ಹೀಗೆ ಜೆಂಡರ್ ಸಾಮಾಜೀಕರಣವು ಹೆಣ್ಣು,ಗಂಡು ಜೈವಿಕ ವ್ಯತ್ಯಾಸವನ್ನೆ ಮುಖ್ಯ ತಳಪಾಯವಾಗಿಟ್ಟುಕೊಂಡು ಅವರ ವ್ಯಕ್ತಿತ್ವ ಆಲೋಚನೆ,ವೃತ್ತಿ, ಪ್ರವೃತ್ತಿಯನ್ನು ಪ್ರಭಾವಿಸುತ್ತಿರುವುದನ್ನು

ಕಾಣಬಹುದು ಈ ನಿಟ್ಟಿನಲ್ಲಿ ಬೆಮ್ ರವರು ಸ್ತ್ರೀ ಪುರುಷ ಪ್ರತ್ಯೇಕತೆಯನ್ನು ವ್ಯವಸ್ಥಿತ ಚೌಕಟ್ಟಿನಲ್ಲಿ ಮುಂದುವರೆಸುವುದರ ವಿರುದ್ಧ ಜಾಗೃತಿಯ ಅವಶ್ಯಕತೆಯನ್ನು ತಿಳಿಸುತ್ತಾರೆ ವಿಶೇಷವಾಗಿ ಶಾಲೆ ಪಠ್ಯಕ್ರಮದಲ್ಲಿ ಈ ತಪ್ಪಾಗದಂತೆ ಎಚ್ಚರಿಕೆ ವಹಿಸಲು ಕರೆ ನೀಡಿದ್ದಾರೆ. ಒಂದೇ ಜೆಂಡರ್‌ಗೆ ಪ್ರಾಮುಖ್ಯತೆ ನೀಡುವುದು ಸಮಾಜದ ಮೇಲೆ ಋಣಾತ್ಮಕ ಪ್ರಭಾವವನ್ನು ಬೀರುವುದನ್ನು ತಿಳಿಸುತ್ತಾರೆ ಜೆಂಡರ್ ಸ್ಕೀಮಾಕ್ಕೆ ಕಡಿಮೆ ಮಹತ್ವ ನೀಡಲು ತಿಳಿಸುತ್ತಾರೆ.

ಜೆಂಡರ್ ಸ್ಕೀಮಾ ಸಿದ್ಧಾಂತವು ಮಕ್ಕಳು ಜೆಂಡರ್ ಜ್ಞಾನವನ್ನು ಕ್ರಿಯಾಶೀಲವಾಗಿ ಸಾಮಾಜಿಕ ಪರಿಸರದಲ್ಲಿ ಭಾಗವಹಿಸಿ ಕಟ್ಟಿಕೊಳ್ಳುವುದನ್ನು ಸಮರ್ಥಿಸುತ್ತವೆ. ಲಿಂಗ ಪಾತ್ರದ ಕುರಿತು ಮಕ್ಕಳ ಆಲೋಚನೆ ಸಹ ಅವರಲ್ಲಿ ಜೆಂಡರ್ ಜ್ಞಾನ ವಿಕಾಸಕ್ಕೆ ನಾಂದಿಯಾಗುತ್ತದೆ. (Bussey & Bandura, 1999). (Liben & Bigler, 2002; for reviews, Carol Lynn Martin1 and Diane Ruble& Szkrybalo,2002).

ಮೇಲಿನ ಸಂಶೋದನೆಗಳಲ್ಲಿ ಸಂಶೋಧಕರು ಮೂರನೇ ಹಂತದಲ್ಲಿ ಜೆಂಡರ್ ಜ್ಞಾನ ಸ್ಪಷ್ಟ ಚಿತ್ರಣ ಹೊಂದಿ ವಾಸ್ತವತೆಗೆ ಮರಳಿರುವುದನ್ನು ದೃಢಪಡಿಸಿವೆ.

## ಇಲಾಖೆಯಲ್ಲಿ ಲಿಂಗ ಸಂವೇದನೆಗಾಗಿ (ಜ್ಞಾನದಿಂದ ಮನೋಧೋರಣೆ ಬದಲಾವಣೆಗೆ) ಲಭ್ಯ ಮಾಹಿತಿಗಳು:

**2015–16 ನೇ ವರ್ಷದಲ್ಲಿ ಶಿಕ್ಷಣ ಇಲಾಖೆಯು ಸಿದ್ಧಪಡಿಸಿದ ಸಾಹಿತ್ಯವನ್ನು ಪರಾಮರ್ಶಿಸಲಾಗಿದೆ.**

### ಹೆಣ್ಣು ಮಕ್ಕಳ ಶಿಕ್ಷಣ ಪರಿಕಲ್ಪನೆ:

ಮಾನವ ಜೀವನದ ಆರಂಭದಲ್ಲಿ ಸ್ತ್ರೀಪುರುಷರಿಬ್ಬರೂ ಜ್ಞಾನವನ್ನು ದೃಷ್ಟಿಮಾಡಿದರೆಂದು ಐತಿಹಾಸಿಕ ಸಂಶೋಧನೆ ಮತ್ತು ಅಧ್ಯಯನಗಳು ತಿಳಿಸುತ್ತವೆ. ಸ್ತ್ರೀಯರು ವ್ಯವಸಾಯ ಕಂಡುಹಿಡಿದರೆಂದೂ ಕೆಲವು ಕರಕುಶಲತೆಗಳನ್ನು ಪ್ರಾರಂಭಿಸಿದರೆಂದೂ ಸ್ತ್ರೀಯರು ಮೊದಲು ವೈದ್ಯರೆಂದು ಔಷದಿಗಳನ್ನು ಅಭಿವೃದ್ಧಿ ಪಡಿಸಿದರೆಂದೂ ಕಂಡುಕೊಳ್ಳಲಾಗದೆ ಆದರೂ ಇಂದು ನಾವು ಮಾನವನ ಇತಿಹಾಸ ಮಾನವನ ಮತ್ತು ಸಮಾಜ ಇತ್ಯಾದಿ ಪದಗಳನ್ನು ಬಳಸುವಾಗ ಮಾನವ ಇತಿಹಾಸದ ದೃಷ್ಯದಿಂದ ಸ್ತ್ರೀಯರನ್ನು ದೂರ ಮಾಡಿ ಮಾತನಾಡುತ್ತೇವೆ. ವಿಷಾದದ ಸಂಗತಿಯೆಂದರೆ ಪುರುಷರು ಇತಿಹಾಸ ಮತ್ತು ಕಲಿಕೆ ಶಿಕ್ಷಣದ ಜವಾಬ್ದಾರಿ ವಹಿಸಿಕೊಂಡಿದ್ದು ಜ್ಞಾನದ ಸೃಷ್ಟಿ ಮತ್ತು ಬೆಳವಣಿಗೆ ಮೇಲ್ವರ್ಗಗಳ ಮತ್ತು ಪುರುಷರ ಸಂಪೂರ್ಣ ಸ್ವತ್ತಾಯಿತು. ಇಂತಹ ಸಂದರ್ಭದಲ್ಲಿ, ತತ್ವಗಳನ್ನು ವ್ಯಾಖ್ಯಾನಿಸುವ ತಮ್ಮ ಭವಿಷ್ಯವನ್ನು ನಿರ್ಧರಿಸುವ ನಮ್ಮ ಕುಟುಂಬಗಳ ಅಭಿವೃದ್ದಿಗೆ ಪ್ರಭಾವಯುತವಾದ ವಯಸ್ಸಿನಲ್ಲಿ ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವುದಕ್ಕೆ ಮಹಿಳೆಯರ ಅಭಿವೃದ್ಧಿ ಮತ್ತು ಶಿಕ್ಷಣವು ಅತ್ಯಂತ ಪ್ರಮುಖವಾದುದು" ಎಂದು ಕೊಠಾರಿ ಆಯೋಗವು ಹೇಳಿರುವುದು ಸಮರ್ಪಕವಾಗಿಯೇ ಇದೆ.

### ಮಹಿಳೆಯರ/ಬಾಲಕಿಯರ ಪ್ರಸ್ತುತ ಸ್ಥಾನ ಒಂದು ವಿಮರ್ಶೆ:

ಪ್ರಸ್ತುತ ಸನ್ನಿವೇಶದಲ್ಲಿ ಮಹಿಳೆಯರ/ಬಾಲಕಿಯರ ಸ್ಥಾನದ ಬಗ್ಗೆ ಚರ್ಚಿಸುವುದಾದರೆ ದೇಶದ ಶೇ.50 ರಷ್ಟು ಬಾಲಕಿಯರು ಬಾಲಕಿಯರಾಗಿ ಜನಿಸಲು ಇಷ್ಟಪಡುವುದಿಲ್ಲ. ಅಂದರೆ ಅವರು ಬಾಲಕರಾಗಿ ಹುಟ್ಟಲು ಇಚ್ಛಿಸುತ್ತಾರೆ.ವಾರ್ಷಿಕ ಹತ್ತು ಲಕ್ಷಕ್ಕೂ ಅಧಿಕ ಹೆಣ್ಣುಮಕ್ಕಳು ತಾವು ಜನಿಸುವ ಮೊದಲೇ ಅಂದರೆ ಭ್ರೂಣಾವಸ್ಥೆಯಲ್ಲಿದ್ದಾಗಲೇ ಕಣ್ಣು ಮುಚ್ಚುತ್ತಾರೆ. 1 ರಿಂದ 5 ವರ್ಷದೊಳಗಿನ ಬಾಲಕಿಯರು ತಮ್ಮದೇ ವಯಸ್ಸಿನ

ಬಾಲಕರಿಗಿಂತ ಶೇ.75ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಸಾವೀಗೀಡಾಗುತ್ತಾರೆ. ಪ್ರಸ್ತುತ ದೇಶದಲ್ಲಿ 6 ವರ್ಷದೊಳಗಿನ ಮಕ್ಕಳ ಲಿಂಗಾನುಪಾತವು 918 : 1000 (ಕರ್ನಾಟಕದಲ್ಲಿ 948:1000) ಇದ್ದು, ಸ್ವಾತಂತ್ರ್ಯಾನಂತರ ದೇಶ ಕಂಡ ಅತಿ ಕಡಿಮೆ ಲಿಂಗಾನುಪಾತ ದರವಾಗಿದೆ.ಪ್ರಪಂಚದಲ್ಲಿ ಅಂದಾಜು ಒಂದು ಕೋಟಿಗೂ ಅಧಿಕ ಬಾಲ ವಧುಗಳಿದ್ದು, ಅದರಲ್ಲಿ ಮೂರನೇ ಒಂದು ಭಾಗದಷ್ಟು ಸಂಖ್ಯೆಯ ಬಾಲವಧುಗಳು ಭಾರತದಲ್ಲಿದ್ದಾರೆ.ಶೇ.47ರಷ್ಟು ಬಾಲಕಿಯರು 18 ವರ್ಷ ತುಂಬುವುದರೊಳಗೆ ಹಾಗೂ ಶೇ.18 ರಷ್ಟು ಬಾಲಕಿಯರು 15ವರ್ಷ ತುಂಬುವುದರೊಳಗೆ ಮದುವೆಯಾಗುತ್ತಾರೆ.ದೇಶದಲ್ಲಿ ಪ್ರತಿ ದಿನ ಅಂದಾಜು 39,000 ದಷ್ಟು ಬಾಲ್ಯವಿವಾಹಗಳು ಜರುಗುತ್ತವೆ. ಇನ್ನು ದೇಶದಲ್ಲಿ ಕೌಟುಂಬಿಕ ದೌರ್ಜನ್ಯ (ತಮ್ಮ ಕುಟುಂಬದಲ್ಲಿಯೇ ತಂದೆ, ತಾಯಿ, ಸೋದರ, ಗಂಡ, ಅತ್ತೆ, ನಾದಿನಿ, ಇತ್ಯಾದಿಯವರಿಂದ ತೀವ್ರ ರೀತಿಯ ಬೈಗುಳ ಮತ್ತು ಹೊಡೆತ ತಿನ್ನುವುದು) ಎದುರಿಸುತ್ತಿರುವ ಸ್ತ್ರೀಯರ ಸಂಖ್ಯೆ ಶೇ.40ಕ್ಕೂ ಅಧಿಕವಾಗಿದೆ. ಹೆಣ್ಣುಮಕ್ಕಳು ಮತ್ತು ಮಹಿಳೆಯರು ಯಾವ ರೀತಿಯ ಶೋಷಣೆಗೊಳಗಾಗುತ್ತಿದ್ದಾರೆಂಬುದನ್ನು ಈ ಅಂಕಿ ಸಂಖ್ಯೆಗಳು ದೃಢಪಡಿಸುತ್ತವೆ.

ಇನ್ನು ಶಿಕ್ಷಣ ಕ್ಷೇತ್ರದಲ್ಲಿರುವ ಲಿಂಗ ತಾರತಮ್ಯಗಳನ್ನು ಗಮನಿಸಬಹುದಾದರೆ 2011ರ ಜನಗಣತಿಯಂತೆ ದೇಶದಲ್ಲಿ ಮಹಿಳೆಯರ ಸಾಕ್ಷರತೆಯು ಶೇ.68.08 ರಷ್ಟು ಮಾತ್ರ ಇದೆ (ಪುರುಷರು– ಶೇ.82.47). ಆದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ಇದು ಕೇವಲ ಶೇ.59.71 ರಷ್ಟಿದೆ. ನಮ್ಮ ರಾಜ್ಯದ ಮಟ್ಟಿಗೆ ಹೇಳುವುದಾದರೆ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಪೂರಕವಾದ ಸೂಚಕಗಳಾದ ವಿದ್ಯಾರ್ಥಿ ವಿದ್ಯಾರ್ಥಿನಿಯರ ಜೊತೆಗೂಡಿ ಕಲಿಯುವ ಕೋ ಎಡುಕೇಶನ್ ಶಾಲೆಗಳ ಸಂಖ್ಯೆಯು ಶೇ.95 ರಷ್ಟಿರುವುದು ಹಾಗೂ ಮಹಿಳಾ ಶಿಕ್ಷಕಿಯರ ಸಂಖ್ಯೆಯು ಪ್ರಾಥಮಿಕ ಶಾಲೆಗಳಲ್ಲಿ ಶೇ.57ರಷ್ಟಿರುವುದು ಉತ್ತಮ ಬೆಳವಣಿಗೆಯಾಗಿದೆ; ಆದರೆ ಪ್ರೌಢಶಾಲೆಗಳಲ್ಲಿ ಮಹಿಳಾ ಶಿಕ್ಷಕಿಯರ ಸಂಖ್ಯೆಯು ಶೇ.36ರಷ್ಟಿದ್ದು, ಈ ಪ್ರಮಾಣ ಉತ್ತಮಗೊಳ್ಳಬೇಕಿದೆ.

ಅನೇಕ ಕುಟುಂಬಗಳಲ್ಲಿ ಗಮನಿಸಬಹುದಾದುದೆಂದರೆ ಮಗನನ್ನು ಇಂಗ್ಲೀಷ್ ಮಾಧ್ಯಮ ಶಾಲೆಗೂ ಹಾಗೂ ಮಗಳನ್ನು ಕನ್ನಡ ಮಾಧ್ಯಮ ಶಾಲೆಗೂ ಕಳುಹಿಸಲಾಗುತ್ತದೆ.ಶಿಕ್ಷಣ ಇಲಾಖೆಯ ಅಂಕಿ ಅಂಶಗಳೂ ಸಹ ಇದನ್ನು ಪುಷ್ಟೀಕರಿಸುತ್ತವೆ. ಕನ್ನಡ ಮಾಧ್ಯಮ ಶಾಲೆಗಳಲ್ಲಿ ವಿದ್ಯಾರ್ಥಿನಿಯರ ಸಂಖ್ಯೆಯು ಶೇ.47.85 ರಷ್ಟಿದ್ದರೆ ಇಂಗ್ಲೀಷ್ ಮಾಧ್ಯಮ ಶಾಲೆಗಳಲ್ಲಿ ಶೇ.46.74 ರಷ್ಟಿದೆ.

ಶಾಲೆ ಹಾಗೂ ಕುಟುಂಬಗಳಲ್ಲಿ ಹೆಣ್ಣುಮಕ್ಕಳಿಗೆ ಕೆಲವೇ ಪಾತ್ರಗಳಿಗೆ ಉದಾಹರಣೆಗೆ ಕಸ ಗುಡಿಸುವುದು, ಪಾತ್ರೆ ತೊಳೆಯುವುದು, ಬಟ್ಟೆ ಶುಚಿಮಾಡುವುದು ಹಾಗೂ ಕೆಲವೇ ಆಟಗಳಿಗೆ ಅವರನ್ನು ಸೀಮಿತಗೊಳಿಸುವ ಪರಿಪಾಠ ಇನ್ನೂ ಕಾಣಬಹುದಾಗಿದೆ.ತರಗತಿಯೊಳಗಿನ ಬೋಧನಾ–ಕಲಿಕಾ ಚಟುವಟಿಕೆಗಳಲ್ಲಿ ಬಾಲಕಿಯರನ್ನು ವಿವಿಧ ತಾರತಮ್ಯಗಳಿಗೆ ಗುರಿಮಾಡಲಾಗುತ್ತದೆ.ಅನೇಕರು ಇದನ್ನೂ ನಿರಾಕರಿಸಿದರೂ, ಇಂತಹ ರೀತಿಯ ತಾರತಮ್ಯಗಳು ಹೊರನೋಟಕ್ಕೆ ತಕ್ಷಣ ಗೋಚರಿಸದೆ, ಗುಪ್ತವಾಗಿರುತ್ತವೆ. ಹೆಚ್ಚಿನ ವಿಶ್ಲೇಷಣೆ ಹಾಗೂ ಅಧ್ಯಯನಗಳಿಂದ ಇವುಗಳನ್ನು ಗಮನಿಸಲು ಹಾಗೂ ಗುರುತಿಸಲು ಸಾಧ್ಯವಿದೆ.

ಶಾಲೆ ಹಾಗೂ ಕುಟುಂಬಗಳಲ್ಲಿನ ಲಿಂಗ ತಾರತಮ್ಯಗಳಿಗೆ ಪರಿಹಾರ ಹೇಗೆ? ಎಂಬ ಪ್ರಶ್ನೆ ಕಾಡುವುದು ಸಹಜ. ವಿದ್ಯಾರ್ಥಿನಿಯರಿಗೆ ಸರ್ಕಾರವು ಒದಗಿಸುತ್ತಿರುವ ವಿವಿಧ ಪ್ರೋತ್ಸಾಹದಾಯಕ ಯೋಜನೆಗಳು ಸ್ವಲ್ಪ ಮಟ್ಟಿನ ಯಶ ತಂದುಕೊಟ್ಟರೂ, ಲಿಂಗತ್ವದ ಕುರಿತಂತೆ ಕುಟುಂಬ ಹಾಗೂ ಶಾಲೆಯ ವಿವಿಧ ಪಾಲುದಾರರಿಗೆ ಮೂಡಿಸಬೇಕಾದ ಉತ್ತಮ ಉತ್ತಮ ಮಟ್ಟದ ಜಾಗೃತಿ ಮಾತ್ರ ಆಳವಾಗಿ

ಬೇರೂರಿರುವ ಮನೋಭಾವಗಳ ಬದಲಾವಣೆಗೆ ಸಹಾಯಕವಾಗಬಲ್ಲವು. ಇವುಗಳ ಜೊತೆ ವಿದ್ಯಾರ್ಥಿನಿಯರಿಗೆ ವಿಮರ್ಶಾತ್ಮಕ ಸ್ತ್ರೀ ಬೋಧನಾ ಕ್ರಮವನ್ನು (Crtitical Feminist Pedogogy) ಅಳವಡಿಸಿಕೊಂಡಲ್ಲಿ ಹೆಣ್ಣುಮಕ್ಕಳಲ್ಲಿ ಅಗತ್ಯ ಜಾಗೃತಿಯುಂಟು ಮಾಡಿ, ವಿದ್ಯಾರ್ಥಿನಿಯರು ತಾವೇ ಸ್ವತಃ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಸ್ವಪ್ರೇರಣೆಯಿಂದ ಅಗತ್ಯ ಶ್ರಮವಹಿಸಲು ಸಾಧ್ಯವಾಗುತ್ತದೆಂದು ತಜ್ಞರು ಅಭಿಪ್ರಾಯಪಡುತ್ತಾರೆ.

ಹೆಣ್ಣುಮಕ್ಕಳಿಗೆ ಅವರಿರುವ ಸ್ಥಿತಿಗತಿ, ಸಾಮಾಜಿಕ ಸನ್ನಿವೇಶ, ಅವರು ಶಿಕ್ಷಣ ಪಡೆಯಲು, ಗಂಡುಮಕ್ಕಳಿಗೆ ಸಮಾನವಾಗಿ ಸೌಲಭ್ಯಗಳನ್ನು ಹೊಂದಲು ಅನುಭವಿಸುತ್ತಿರುವ ಅಡ್ಡಿ ಆತಂಕಗಳ ಕುರಿತಂತೆ ಪ್ರಶ್ನೆಗಳನ್ನು ಕೇಳಲು, ಚಿಂತಿಸಲು ಪ್ರೇರೇಪಿಸಬೇಕು. ಮೊದಲು ಹೆಣ್ಣುಮಕ್ಕಳು ಯಾವುದೇ ಅಳುಕಿಲ್ಲದೆ ಉತ್ತರಿಸಲು ಸಾದ್ಯವಾಗುವ ಆತ್ಮವಿಶ್ವಾಸ ತುಂಬಬೇಕು. ಹೆಣ್ಣುಮಕ್ಕಳು ಪ್ರಶ್ನೆಗಳಿಗೆ ಉತ್ತರಿಸುತ್ತಾ, ತಮ್ಮ ಸ್ಥಿತಿಗತಿಗಳ ಬಗ್ಗೆ ವಿಮರ್ಶಾತ್ಮಕವಾಗಿ ಆಲೋಚಿಸಲು ತೊಡಗುವುದರಿಂದ ಅವರಲ್ಲಿ ವಿಶ್ಲೇಷಣೆ ಹಾಗೂ ವಿಮರ್ಶೆಯ ಮನೋಭಾವಗಳು ಜಾಗೃತಗೊಳ್ಳುತ್ತವೆ. ವಿದ್ಯಾರ್ಥಿನಿಯರು ಅವರ ವೈಯಕ್ತಿಕ ಸಮಸ್ಯೆ ಹಾಗೂ ಅನುಭವಗಳನ್ನು ಅವರಿರುವ ಸಾಮಾಜಿಕ ಸನ್ನಿವೇಶಗಳಿಗೆ ಯಶಸ್ವಿಯಾಗಿ ಸಂಪರ್ಕ ಕಲ್ಪಿಸಿಕೊಂಡು ವಿಮರ್ಶೆ ಮಾಡುವುದರ ಮೂಲಕ ತಾವಿರುವ ಸ್ಥಿತಿ–ಗತಿಗಳಿಂದ ಹೊರಬಂದು, ಸಶಕ್ತರಾಗುವ ಮಾರ್ಗೋಪಾಯಗಳನ್ನು ಆಲೋಚಿಸುತ್ತಾರೆ. ಎಷ್ಟೋ ವೇಳೆ ತೊಂದರೆಯಲ್ಲಿರುವವರಿಗೆ ತಾವು ಎದುರಿಸುತ್ತಿರುವುದು ಸಮಸ್ಯೆ ಎಂಬ ತಿಳುವಳಿಕೆಯೇ ಇರುವುದಿಲ್ಲ.

'ನಾನು ಇಂತಹ ಸಮಸ್ಯೆಯಲ್ಲಿದ್ದೇನೆ' ಎಂಬ ಜಾಗೃತಿಯೇ ಬದಲಾವಣೆ ಹೊಂದುವ ಆರಂಭಿಕ ಹೆಜ್ಜೆಯಾಗುತ್ತದೆ.ತಾನು ಸಮಸ್ಯೆಯೊಳಗೆ ಸಿಲುಕಿದ್ದೇನೆ ಅಥವಾ ತೊಂದರೆ ಎದುರಿಸುತ್ತಿದ್ದೇನೆಂಬ ಅರಿವಿಲ್ಲದಿದ್ದಲ್ಲಿ ಅದರಿಂದ ಆಚೆ ಬರುವ ಯೋಚನೆ ಮಾಡುವುದೂ ಸಹ ಅಸಾಧ್ಯವಾಗುತ್ತದೆ.ಈ ನಿಟ್ಟಿನಲ್ಲಿ ಶಿಕ್ಷಕರು ಹಾಗೂ ಪೋಷಕರು ಹೆಣ್ಣುಮಕ್ಕಳ ಕುರಿತಂತೆ ಕೇಳಲಾಗುವ ಪ್ರಶ್ನೆಗಳು ಅವರಲ್ಲಿ ಜಾಗೃತಿಯುಂಟು ಮಾಡಲು ಕಾರಣವಾಗುತ್ತದೆ. ಹೆಣ್ಣುಮಕ್ಕಳಿಗೆ ಕೇಳುವ ಪ್ರಶ್ನೆಗಳು ಉದಾಹರಣೆಗೆ ಈ ರೀತಿಯಿರಬಹುದು;

'ಜೀವನದಲ್ಲಿ ನಿನ್ನ ಗುರಿಯೇನು?', 'ಆ ಗುರಿ ಸಾಧನಗೆ ನೀನು ಪಡೆಯಬೇಕಾದ ವಿದ್ಯಾಭ್ಯಾಸವೇನು?', 'ಆ ವಿದ್ಯಾಭ್ಯಾಸವನ್ನು ಹೊಂದಲು ಕುಟುಂಬದಲ್ಲಿ ಅನುಕೂಲ ಅಥವಾ ಅನಾನುಕೂಲಗಳಿವೆಯೇ?', 'ಅನಾನುಕೂಲಗಳಿದ್ದಲ್ಲಿ ವಿದ್ಯಾಭ್ಯಾಸ ಪೂರೈಸಲು ಏನು ಮಾಡುವೆ?', 'ನಿಮ್ಮ ತಾಯಿ ಪಡೆದಿರುವ ವಿದ್ಯಾಭ್ಯಾಸವೆಷ್ಟು?', 'ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸದ ಮಹತ್ವವೇನು?', 'ನಿನಗೆ ನಿನ್ನ ಇಷ್ಟದ ಆಟವಾಡಲು ಅವಕಾಶವಿದೆಯೇ?'.......ಈ ರೀತಿಯ ಪ್ರಶ್ನೆಗಳಿಗೆ ಹೆಣ್ಣುಮಕ್ಕಳು ಸಾವಧಾನವಾಗಿ, ಆಲೋಚಿಸಿ ಉತ್ತರಿಸುವಂತೆ ಪ್ರೇರೇಪಿಸಬೇಕು. ಇದರ ಜೊತೆ ಹೆಣ್ಣುಮಕ್ಕಳ ರಕ್ಷಣೆ ಹಾಗೂ ಬೆಂಬಲಕ್ಕಾಗಿ ಇರುವ ಸರ್ಕಾರಿ ಇಲಾಖೆ, ಸ್ವಯಂ ಸೇವಾ ಸಂಸ್ಥೆಗಳು, ಅವರ ದೂರವಾಣಿ ಸಂಖ್ಯೆ, ಮಕ್ಕಳ/ಹೆಣ್ಣುಮಕ್ಕಳ ಸಹಾಯವಾಣಿ ವಿವರ, ಆಪತ್ತು, ತೊಂದರೆ ಅಥವಾ ಶೋಷಣೆಗೊಳಗಾಬಹುದಾದ ಸನ್ನಿವೇಶ ಎದುರಿಸುವ ವಿಧಾನ ಇತ್ಯಾದಿ ಅಂಶಗಳ ಕುರಿತಂತೆ ಮಾಹಿತಿಯನ್ನು ನೀಡುವುದೂ ಸಹ ಪರಿಣಾಮಕಾರಿಯಾಗುತ್ತದೆ. ಹೆಣ್ಣುಮಕ್ಕಳ ಶಿಕ್ಷಣಕ್ಕೆ ವಿವಿಧೆಡೆ ಇರುವ ಸೌಲಭ್ಯ ಹಾಗೂ ಅನುಕೂಲಗಳ ಮಾಹಿತಿ ತಿಳಿಸುವುದರ ಜೊತೆ ಹೆಣ್ಣುಮಕ್ಕಳಿಗೆ ಸಂಬಂಧಿಸಿದಂತೆ ಇರುವ ಕಾನೂನಿನ ಮಾಹಿತಿಗಳನ್ನು ತಿಳಿಸಿಕೊಡುವುದೂ ಸಹ ಪರಿಣಾಮಕಾರಿಯಾಗುತ್ತದೆ. ಈ ನಿಟ್ಟಿನಲ್ಲಿ ಪ್ರಯತ್ನಪಟ್ಟಲ್ಲಿ ಹೆಣ್ಣು ಮಕ್ಕಳ ಸಬಲೀಕರಣಕ್ಕೆ ಇಂಬು ಕೊಟ್ಟಂತಾಗುತ್ತದೆ.

**ಹೆಣ್ಣು ಮಕ್ಕಳ ಶಿಕ್ಷಣದ ಅವಶ್ಯಕತೆ:**

‘‘ಹೆಣ್ಣುಮಕ್ಕಳಿಗೆಶಿಕ್ಷಣದ ಅವಕಾಶ ಖಚಿತಪಡಿಸುವುದು, ಗುಣಮಟ್ಟ ಉತ್ತಮಪಡಿಸುವುದು ಮತ್ತು ಅವರ ಸಕ್ರಿಯ ಸಹಭಾಗಿತ್ವದ ಮಾರ್ಗದಲ್ಲಿ ಬರುವ ಪ್ರತಿ ಅಡ್ಡಿಯನ್ನುನಿವಾರಿಸುವುದು ಅತಿ ತುರ್ತುಮಹತ್ವದ್ದಾಗಿದೆ ಎಂದು‘ಎಲ್ಲರಿಗೂ ಶಿಕ್ಷಣ’ ಕುರಿತ ವಿಶ್ವ ಸಮ್ಮೇಳನ ತನ್ನ 3 ನೇ ಅನುಚ್ಛೇದದಲ್ಲಿ ಹೇಳಿದೆ.

ಪ್ರಾಚೀನ ಗ್ರಂಥಗಳು, ಆಧುನಿಕ ಚಿಂತಕರು ಮತ್ತು ಮಹಿಳಾ ವಿಮೋಚನಾ ಕಾರ್ಯಕರ್ತರೆಲ್ಲರೂ ಹೆಣ್ಣು ಮಕ್ಕಳ ಮತ್ತು ಸ್ತ್ರೀಯರ ಶಿಕ್ಷಣದ ಅವಶ್ಯಕತೆಗೆ ಸಾಕಷ್ಟು ಕಾರಣಗಳನ್ನು ಒದಗಿಸಿದ್ದಾರೆ.ಅವರು ಮಹಿಳೆಯನ್ನು ದೈವೀಮಾತೆಯ ಸಾಕಾರವೆಂದೂ ಕುಟುಂಬದ ಶಿಕ್ಷಣದ ಆಶಯವೆಂದೂ ಹೆಣ್ಣು ಮಕ್ಕಳ ಶಿಕ್ಷಣದಲ್ಲಿ ಶಿಕ್ಷಕಿಯರೆಂದೂ ಪ್ರಶಂಸಿಸಿದ್ದಾರೆ.ಆದರೆ ನಿಜವಾದ ಸಮಂಜಸವಾದ ಸಮರ್ಥನೆಯು ಯುನೆಸ್ಕೋದಂತಹ ವಿಶ್ವಮಟ್ಟದ ಸಂಸ್ಥೆಗಳ ದಾಖಲೆಗಳಲ್ಲಿ ಅಡಗಿದೆ.ಮಾನವೀಯ ಕಾರಣಗಳು ಮಾತ್ರವಲ್ಲದೆ ಹೆಣ್ಣುಮಕ್ಕಳ ಶಿಕ್ಷಣವು ಒಂದು ಸಾಮಾಜಿಕ ಜವಾಬ್ದಾರಿಯೂ ಮಾನವ ಹಕ್ಕುಗಳ ಒಂದು ವಿಷಯವೂ ಆಗಿದೆ.

1. 1990 ರಿಂದಲೂ ಮಾನವ ಅಭಿವೃದ್ಧಿಗೆ ಶಿಕ್ಷಣದ ಮಹತ್ವ ಕುರಿತು ಸಾಮಾನ್ಯವಾದ ಸಂಗೀಕಾರವಿದೆ. ಜೊತೆಗೇ ಇದರಲ್ಲಿ ಹೆಣ್ಣು ಮಕ್ಕಳ ಶಿಕ್ಷಣದ ಪ್ರಮುಖ ಪಾತ್ರವೂ ತಿಳಿದಿದೆ. 1989 ರಲ್ಲಿ ರೂಪುಗೊಂಡ ಮಕ್ಕಳ ಹಕ್ಕುಗಳ ಸಮಾವೇಶವು ಎಲ್ಲ ಹೆಣ್ಣು ಹಾಗೂ ಗಂಡುಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣದ ಹಕ್ಕನ್ನು ಬೇಡಿತು. 28ನೇ ಅನುಚ್ಛೇದವು ಶಿಕ್ಷಣ ಒಂದು ಹಕ್ಕೆಂದೂ ಸಮಾನ ಅವಕಾಶಗಳ ಆಧಾರದ ಮೇಲೆ ಅದನ್ನು ಸಾಧಿಸಬೇಕೆಂದೂ ಹೇಳಿದೆ. ಮಾನವ ಹಕ್ಕುಗಳ ದೃಷ್ಟಿಯಿಂದ ಹೆಣ್ಣುಮಕ್ಕಳ ಶಿಕ್ಷಣವು ಆದ್ಯತೆ ಗಳಿಸಬೇಕು. ಏಕೆಂದರೆ ಇಂದಿಗೂ ಪ್ರಾಥಮಿಕ ಶಿಕ್ಷಣದಿಂದ ಹೊರಗಿರುವ ಮಕ್ಕಳಲ್ಲಿ ಸುಮಾರು 2/3 ರಷ್ಟು ಹೆಣ್ಣುಮಕ್ಕಳೇ ಇದ್ದಾರೆ.
2. ಜೋಮ್‌ಟೀಯೆನ್ ಸಮ್ಮೇಳನದಲ್ಲಿ ಸೇರಿದ್ದ 155 ದೇಶಗಳ 1500 ಪ್ರತಿನಿಧಿಗಳೂ 20 ಅಂತರ ಸರ್ಕಾರ ಸಂಸ್ಥೆಗಳೂ 140 ಸರ್ಕಾರೇತರ ಸಂಸ್ಥೆಗಳೂ ಎಲ್ಲರಿಗೂ ಅದರಲ್ಲಿಯೂ ವಿಶೇಷವಾಗಿ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವ ಗುರಿ ಸಾಧಿಸಲು ಹೊಸದಾಗಿ ಕಾರ್ಯಪ್ರಾರಂಭಿಸುವ ಮತ್ತು ಹೊಸ ಬದ್ಧತೆಯನ್ನು ವ್ಯಕ್ತಪಡಿಸಲೇಬೇಕಾದ ಅಗತ್ಯವನ್ನೇ ಪ್ರಮುಖ ವಿಷಯವನ್ನಾಗಿ ಪರಿಗಣಿಸಿವೆ. ಉತ್ತಮ ಗುಣಮಟ್ಟದ ಶಿಕ್ಷಣಕ್ಕೆ ಸಾರ್ವತ್ರಿಕ ಅವಕಾಶ ಒದಗಿಸುವ ಆಂದೋಳನದಲ್ಲಿ ಪ್ರಕಟವಾದ ಮೂರು ಅತಿಮುಖ್ಯ ಅಂಶಗಳಲ್ಲಿ ಒಂದು. ‘‘ಶಾಲೆಗೆ ಹೋಗದವರಲ್ಲಿ ವಿಶ್ವದ ಎಲ್ಲ ಪ್ರದೇಶಗಳಲ್ಲಿಯೂ ಸಾಮಾನ್ಯವಾಗಿ ಆದರೆ ನಿರ್ದಿಷ್ಟವಾಗಿ ಉಪಸಹಾರಾದ ಆಫ್ರಿಕಾ ಮತ್ತು ಆಗ್ನೇಯ ಏಷ್ಯಾದ ಪ್ರದೇಶಗಳಲ್ಲಿ ಹೆಣ್ಣುಮಕ್ಕಳು ಮತ್ತು ಸ್ತ್ರೀಯರು ಹೆಚ್ಚಿನ ಪ್ರಮಾಣದಲ್ಲಿದ್ದಾರೆ.’’ ಶಿಕ್ಷಣದ ಕ್ರಿಯೆಯಲ್ಲಿ ಲಿಂಗಸಮತೆಯು ಆದ್ಯತೆಪಡೆಯಬೇಕೆಂಬುದನ್ನು ಮತ್ತೊಮ್ಮೆ ಒತ್ತಿಹೇಳಲಾಗಿದೆ. ಹೆಣ್ಣುಮಕ್ಕಳಿಗೆ ಮಹಿಳೆಯರಿಗೆ ಅವಕಾಶ ಖಚಿತಪಡಿಸಿ, ಶಿಕ್ಷಣದ ಗುಣಮಟ್ಟ ಉತ್ತಮಪಡಿಸಲು ಹಾಗೂ ಅವರ ಸಕ್ರಿಯ ಸಹಭಾಗಿತ್ವಕ್ಕೆ ಅಡ್ಡಬರುವ ಪ್ರತಿ ಅಡೆತಡೆಯನ್ನೂ ನಿವಾರಿಸಲು ಆದ್ಯತೆ ನೀಡಲು ನಿರ್ಧರಿಸಲಾಗಿದೆ. ಪ್ರತಿ ದೇಶ, ಸಂಸ್ಥೆ ಮತ್ತು ನಿಯೋಗವು ಈ ಗುರಿಸಾಧನೆಗೆ ತನ್ನನ್ನು ಸಮರ್ಪಿಸಿಕೊಂಡಿವೆ.
3. ಹೆಣ್ಣುಮಕ್ಕಳಿಗೆ ಶಿಕ್ಷಣ ಎಂದ ಮೇಲೆ ಅವರು ಬೆಳೆದು ಸ್ತ್ರೀಯರಾದಾಗ ಸಮುದಾಯದಲ್ಲಿ ರಾಜಕೀಯ ಮತ್ತು ಆರ್ಥಿಕ ನಿರ್ಧಾರಗಳನ್ನು ಕೈಗೊಳ್ಳುವ ಕ್ರಿಯೆಯಲ್ಲಿ ಭಾಗವಹಿಸುವ ಹಕ್ಕನ್ನು ಚಲಾಯಿಸಲು ಸಮರ್ಥರಾಗುವರು. ಅಲ್ಲದೆ ಮನೆಗಳಲ್ಲಿಯೂ, ಸಮುದಾಯದಲ್ಲಿಯೂ ಅಭಿವೃದ್ಧಿಯ ಯತ್ನಗಳಲ್ಲಿ ಸಹಭಾಗಿಗಳಾಗುವರು. ಒಬ್ಬ ಸುಶಿಕ್ಷಿತ ಮಹಿಳೆಯು ಹೆಚ್ಚು ಸ್ವತಂತ್ರವಾದ ವೈಯಕ್ತಿಕ, ರಾಜಕೀಯ ಮತ್ತು

ಆರ್ಥಿಕ ನಿರ್ಧಾರಗಳನ್ನು ಮಾಡುವಳು. ಜೊತೆಗೆ ಶಿಕ್ಷಣ ಪಡೆದ ಮಹಿಳೆಯರು ಉತ್ತಮ ಶಿಶುಪೋಷಣೆಯ ಮೂಲಕ ಶಿಶು ಮರಣವನ್ನು ಕಡಿಮೆ ಮಾಡಿ, ಹಡೆಯುವ ಮಕ್ಕಳ ಸಂಖ್ಯೆಯನ್ನು ಕಡಿಮೆ ಮಾಡುವರು. 1992 ರ ವಿಶ್ವಬ್ಯಾಂಕ್ ಪ್ರಕಟಣೆಯು ಮಹಿಳೆಯರ ಶಿಕ್ಷಣದಲ್ಲಿ ಒಂದು ಹೆಚ್ಚುವರಿ ವರ್ಷವು ಫಲವತ್ತತೆಯನ್ನು ಶೇ 5ರಿಂದ 10 ರಷ್ಟು ಕಡಿಮೆ ಮಾಡುವುದೆಂದು ತೋರಿಸಿದೆ.

4. ಕಳೆದ ದಶಕಗಳಲ್ಲಿ ಪ್ರಗತಿ ಸಾಧನೆಯಾಗಿದ್ದರೂ ಈಗಲೂ ಗಂಡುಮಕ್ಕಳಿಗಿಂತ ಕಡಿಮೆ ಸಂಖ್ಯೆಯ ಬಾಲಿಕೆಯರು ಶಾಲೆಗೆ ದಾಖಲಾಗುತ್ತಾರೆ ಒಮ್ಮೆ ದಾಖಲಾದ ಮೇಲೆ ಈ ಮಕ್ಕಳು ಕಲಿಕೆಯಲ್ಲಿ ಬಾಲಕರಷ್ಟು ಸಫಲರೂ ಆಗುವುದಿಲ್ಲ. ಬಾಲಕರಿಗಿಂತ ಕಡಿಮೆ ಸಂಖ್ಯೆಯ ಬಾಲಕಿಯರು ಪ್ರಾಥಮಿಕ ಶಿಕ್ಷಣ ಮುಗಿಸುತ್ತಾರೆ. ಅನೇಕ ಪ್ರದೇಶಗಳಲ್ಲಿ ಪ್ರಾಥಮಿಕ ಶಾಲೆಯಲ್ಲಿ ಮುಂದುವರೆಯುವ ಗಮನಾರ್ಹ ಪ್ರಮಾಣದ ಲಿಂಗ ಆಧಾರಿತ ಅಂತರವು ಪ್ರೌಢಶಾಲೆ ಸಾಗುವ ಹಂತದಲ್ಲಿ ಇನ್ನೂ ಹೆಚ್ಚಾಗುತ್ತದೆ. ಶಿಕ್ಷಣವಿಲ್ಲದ ಅಥವಾ ಕಡಿಮೆ ಶಿಕ್ಷಣ ಪಡೆದ ಹುಡುಗಿಯರು ತಮ್ಮ ಜೀವನವನ್ನು ಸುಧಾರಿಸಿಕೊಳ್ಳುವ ಅವಕಾಶದಿಂದ ವಂಚಿತರಾಗುತ್ತಾರೆ. ಪರಿಣಾಮಕಾರಿಯಾಗಿ ಉತ್ತಮಗುಣಮಟ್ಟದ ಶಿಕ್ಷಣ ಪಡೆಯುವ ಹಕ್ಕನ್ನು ವಂಚಿಸಿದಾಗ ಇತರ ಎಲ್ಲ ಮಾನವ ಹಕ್ಕುಗಳ ವಂಚನೆಯೂ ಆಗ, ತಮ್ಮ ಸಂಪೂರ್ಣ ಸಾಮರ್ಥ್ಯಗಳ ವಿಕಾಸದಲ್ಲಿ ಮುಂದಿನ ತಲೆಮಾರುಗಳ ಅವಕಾಶಗಳನ್ನು, ಅದರಲ್ಲಿಯೂ ಅವರ ಹೆಣ್ಣುಮಕ್ಕಳ ಅವಕಾಶಗಳನ್ನು ಕುಗ್ಗಿಸುತ್ತವೆ.

5. ಯಾವುದೇ ಅಭಿವೃದ್ಧಿ ಹೊಂದುತ್ತಿರುವ ದೇಶವು ಮಾಡಬಹುದಾದ ಅತಿಮುಖ್ಯ ಬಂಡವಾಳ ಹೂಡಿಕೆಗಳಲ್ಲಿ ಹೆಣ್ಣು ಮಕ್ಕಳ ಶಿಕ್ಷಣದ ಮೇಲಿನ ಹೂಡಿಕೆಯು ವೈಯಕ್ತಿಕ, ಸಾಮುದಾಯಿಕ ಮತ್ತು ಸಾಮಾಜಿಕ ಮಟ್ಟಗಳಲ್ಲಿ ಲಾಭದಾಯಕವಾಗಿರುತ್ತದೆ. ಶಿಕ್ಷಣ ಪಡೆದ ಹೆಣ್ಣು ಮಕ್ಕಳು ಹೆಚ್ಚು ಪರಿಣಾಮಕಾರಿ ಮಾತೆಯರಾಗಿ ಅವರ ಮಕ್ಕಳು ಉತ್ತಮ ಪೋಷಣೆ ಹಾಗೂ ಆರೋಗ್ಯದ ಅಭ್ಯಾಸಗಳಿರುವುದರಿಂದ ಹೆಚ್ಚು ಕಾಲ ಬದುಕುಳಿಯುರೆಂಬುದನ್ನು ಹಲವು ದಶಕಗಳ ಸಂಶೋಧನೆ ತೋರಿಸಿಕೊಟ್ಟಿದೆ. ಸುಶಿಕ್ಷಿತ ಮಹಿಳೆಯರು ಔಪಚಾರಿಕ ಕಾರ್ಮಿಕ ಮಾರುಕಟ್ಟೆ ಪ್ರವೇಶಿಸುವ, ಹೆಚ್ಚಿನ ವೇತನ ಪಡೆಯುವ ಹಾಗೂ ಆ ಮೂಲಕ ರಾಷ್ಟ್ರದ ಆರ್ಥಿಕ ಉತ್ಪಾದಕತೆಗೆ ಕೊಡುಗೆ ನೀಡುವ ಸಾಧ್ಯತೆಗಳು ಹೆಚ್ಚಾಗಿವೆ. ಇದರಲ್ಲಿ ಒಂದು ಅಂತರರಾಷ್ಟ್ರೀಯ ಪರಿಣಾಮವೂ ಇದೆ. ಹೇಗೆಂದರೆ ಸುಶಿಕ್ಷಿತ ಮಹಿಳೆಯರ ಮಕ್ಕಳು ಸುಶಿಕ್ಷಿತರಾಗುವ ಸಂಭವವೂ ಹೆಚ್ಚಾಗಿದ್ದು ಮುಂದಿನ ಪೀಳಿಗೆಗೆ ಅದರ ಲಾಭವನ್ನು ವರ್ಗಾಯಿಸುವ ಸಂಭವವೂ ಹೆಚ್ಚಾಗಿದೆ. ಮಾನವ ಅಭಿವೃದ್ಧಿಯಲ್ಲಿ ಒಂದು ದೇಶದ ಸಫಲ ಕಾರ್ಯಾಚರಣೆಗೆ ಕಾರಣವಾದ ಮುಖ್ಯ ಅಂಶಗಳನ್ನು ಗುರ್ತಿಸುವ ಉದ್ದೇಶದಿಂದ ಕೈಗೊಂಡ ಇತ್ತೀಚಿನ ಪುನರ್ಪರಿಶೀಲನೆ ಹಾಗೂ ವಿಶ್ಲೇಷಣೆಯು ಹೆಚ್ಚಿನ ಪ್ರಮಾಣದಲ್ಲಿ ಹೆಣ್ಣು ಮಕ್ಕಳ ಶಾಲಾ ದಾಖಲಾತಿಯು ಒಂದು ಅವಶ್ಯಕ ಅಂಶವಾಗಿ ಕಂಡುಬಂದಿದೆ ಎಂದು ತೀರ್ಮಾನಿಸಿದೆ.

6. ಪ್ರಪಂಚದ ಬಹುತೇಕ ಪ್ರದೇಶಗಳಲ್ಲಿ ಕಂಡುಬಂದಿರುವಂತೆ, ಜನಸಂಖ್ಯೆಯ ಒಂದು ಮಹತ್ವದ ಭಾಗವಾದ ಹೆಣ್ಣು ಮಕ್ಕಳು ಶಿಕ್ಷಣಕ್ಕೆ ಸರ್ಕಾರ ಒದಗಿಸುವ ನೆರವಿನ ಲಾಭವನ್ನು ಪಡೆಯದಿದ್ದಾಗ, ಇದರಲ್ಲಿ ತಮ್ಮ ಸಂಪನ್ಮೂಲಗಳನ್ನು ತೊಡಗಿಸಿ ಪ್ರತಿಫಲ ಎದುರುನೋಡುವ ಎಲ್ಲರೂ ಈ ವಿಭಾಗಕ್ಕೆ ವೆಚ್ಚವಾಗುತ್ತಿರುವ ಹಣ ಸದ್ವಿನಿಯೋಗವಾಗುತ್ತಿದೆಯೆ? ಎಂಬುದನ್ನು ಪರಿಶೀಲಿಸಲೇಬೇಕು. ಶಾಲಾ ವ್ಯವಸ್ಥೆಗಳ ಪರಿಣಾಮಕಾರತೆ ಹಾಗೂ ದಕ್ಷತೆಯನ್ನು ಹೆಚ್ಚಿಸುವ ಪ್ರಧಾನ ಮಾರ್ಗೋಪಾಯವೆಂದರೆ ಹೆಣ್ಣು ಮಕ್ಕಳ ಮತ್ತು ಮಹಿಳೆಯರ ಶಿಕ್ಷಣ ಗುರಿ ಸಾಧನೆಯೇ ಆಗಿದೆ. ಹೀಗೆ ಮಾಡುವುದರಿಂದ ಹೆಣ್ಣು ಮಕ್ಕಳಿಗೆ ಮಾತ್ರ ಲಾಭವಾಗುವುದೆಂದಲ್ಲ ಕಳೆದ ದಶಕದ ಚಟುವಟಿಕೆಗಳಿಂದ ಕಲಿತ ಅತಿ ಸ್ಪಷ್ಟ ಪಾಠಗಳಲ್ಲಿ ಒಂದು ಯಾವುದೆಂದರೆ ದಾಖಲಾತಿ ಮತ್ತು ಸಾಧನೆಗಳಲ್ಲಿ ಹೆಣ್ಣು ಮಕ್ಕಳ ಸಹಭಾಗಿತ್ವವನ್ನು ಪ್ರೋತ್ಸಾಹಿಸುವ ಪ್ರಯತ್ನಗಳಿಂದ ಗಂಡುಮಕ್ಕಳೂ ಲಾಭ ಹೊಂದುತ್ತಾರೆ.

7. ಶಿಕ್ಷಣ ಹೆಣ್ಣು ಮಕ್ಕಳ ಜೀವನವನ್ನು ವರ್ತಮಾನ ಹಾಗೂ ಭವಿಷ್ಯಗಳೆರಡರಲ್ಲೂ ಉತ್ತಮಗೊಳಿಸುವುದೆಂಬುದರಲ್ಲಿ ಸಂಶಯವೇ ಇಲ್ಲ. ಇದನ್ನು ಮಹಿಳೆಯರೂ ಚೆನ್ನಾಗಿಯೇ ಅರಿತಿದ್ದಾರೆ ಹಾಗೂ ವಿಶ್ವದೆಲ್ಲೆಡೆ ನಡೆದಿರುವ ಅಧ್ಯಯನಗಳೂ ಈ ಸತ್ಯಕ್ಕೆ ಪ್ರಮಾಣ ಒದಗಿಸಿವೆ, ಶಿಕ್ಷಣವು ಕೇವಲ ಉದ್ಯೋಗ ಒದಗಿಸುವುದು ಮಾತ್ರವಲ್ಲದೆ ಅವರ ಜೀವನದ ಸ್ಥಿತಿ ಹಾಗೂ ಸನ್ನಿವೇಶಗಳನ್ನೂ ಸುಧಾರಿಸಿದೆ. ಶಿಕ್ಷಣವು ಹೆಣ್ಣು ಮಕ್ಕಳಿಗೂ ಮಹಿಳೆಯರಿಗೂ ಇತರರೊಂದಿಗಿನ ಸಂಬಂಧವನ್ನು ಉತ್ತಮ ಪಡಿಸಿಕೊಳ್ಳಲು, ತಮ್ಮನ್ನು ಸಂರಕ್ಷಿಸಿಕೊಳ್ಳಲು ಮತ್ತು ವಿವಾಹ ಜೀವನ ಸಫಲವಾಗದಿದ್ದಲ್ಲಿ ತಮ್ಮ ಹಾಗೂ ತಮ್ಮ ಮಕ್ಕಳನ್ನು ನೋಡಿಕೊಳ್ಳಲು ಸಮರ್ಥರನ್ನಾಗಿಸುತ್ತದೆ.
8. ಹೆಣ್ಣು ಮಕ್ಕಳಿಗೆ ಶೀಕ್ಷಣ ನೀಡುವುದರಿಂದ ಸ್ವತಃ ಹೆಣ್ಣು ಮಕ್ಕಳಿಗೂ ಅವರ ಸದ್ಯದ ಹಾಗೂ ಮುಂದಿನ ಕುಟುಂಬಗಳಿಗೂ, ಅವರ ಸಮಾಜಕ್ಕೂ ಹಲವಾರು ಲಾಭಗಳನ್ನುಂಟುಮಾಡುವುದೆಂಬುದನ್ನು ಸಂಶೋಧನೆಯು ತೋರಿಸಿದೆ. ಹೆಣ್ಣು ಮಕ್ಕಳ ಶಿಕ್ಷಣದ ಅನೇಕ ಲಾಭಗಳು ಗಂಡುಮಕ್ಕಳ ಶಿಕ್ಷಣದ ಲಾಭಗಳಂತೆಯೇ ಇವೆ. ಎಂದರೆ, ಶಿಕ್ಷಣವು ಹೆಚ್ಚು ಉತ್ಪಾದಕ ಕೆಲಸಗಾರರನ್ನು ಸೃಷ್ಟಿಸಲು ಸಹಾಯ ಮಾಡಿ ಆ ಮೂಲಕ ಆದಾಯದ ಸಮತೆಗೆ ಸಹಾಯಕವಾಗುತ್ತದೆ. ಜನರು ರಾಜಕೀಯ ಮತ್ತು ನಾಗರೀಕ ಜೀವನದಲ್ಲಿ ಹೆಚ್ಚು ಅರ್ಥಪೂರ್ಣವಾಗಿ ಸಹಭಾಗಿಗಳಾಗಲು ಸಹಾಯ ಮಾಡುತ್ತದೆ. ಸಮಗ್ರ ಆರ್ಥಿಕ ವಿಕಾಸಕ್ಕೆ ಸಹಾಯಮಾಡಿ, ಪರಿಸರವನ್ನು ಉತ್ತಮವಾಗಿ ಪೋಷಿಸಲು ಸಹಾಯಕವಾಗಿದೆ. ಜಾಗತೀಕರಣದ ಬೇಡಿಕೆಗಳಿಗೆ ಹೊಂದಿಕೊಂಡು ಅದನ್ನು ರೂಪಿಸಲು ಸಹಾಯ ಮಾಡುತ್ತದೆ.
9. ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವುದರಿಂದ ರಾಷ್ಟ್ರಗಳು ಶಿಕ್ಷಣ ಪಡೆದಂತೆ ಯಾವುದೇ ಸಮಾಜದ ಅತ್ಯುತ್ತಮ ಹೂಡಿಕೆ ಎಂದರೆ ಬಾಲಿಕೆಯರ ಶಿಕ್ಷಣ ಮಾತ್ರವೇ ಸುಶಿಕ್ಷಿತ ಮಹಿಳೆಯು ತಾನು ಉತ್ತಮ ತಾಯಿ, ಕೆಲಸಗಾರ್ತಿ ಮತ್ತು ನಾಗರೀಕಳಾಗಲು ಅಗತ್ಯವಾದ ಎಲ್ಲ ಕೌಶಲಗಳು, ಮಾಹಿತಿ ಮತ್ತು ಆತ್ಮ ವಿಶ್ವಾಸವನ್ನು ಹೊಂದಿರುತ್ತಾಳೆ. ಶಾಲೆಗಳು ಹೆಣ್ಣು ಮಕ್ಕಳಿಗಾಗಿ ತಮ್ಮ ಬಾಗಿಲನ್ನು ತೆರೆದಾಗ ಸಮಾಜಕ್ಕೆ ಲಾಭಗಳು ಇಮ್ಮಡಿಯಾಗುತ್ತವೆ. ಏಕೆಂದರೆ, ಮುಂದೆ ವಿವಾಹವಾಗಿ ಮಕ್ಕಳಿಗೆ ಜನ್ಮ ನೀಡುವ ಸಂದರ್ಭದಲ್ಲಿ ಆಗಬಹುದಾದ ತೊಡಕುಗಳು ಕಡಿಮೆಯಾಗಿ ಮಾತೃಮರಣದರ ಇಳಿಮುಖವಾಗುವುದು. ಶಿಕ್ಷಿತ ಮಹಿಳೆಯ ಮಗು ಶಿಶುಮರಣವನ್ನೆದುರಿಸದೆ ಒಂದು ವರ್ಷದ ನಂತರವೂ ಬದುಕುಳಿಯುವುದು. ಅವಳು ತನ್ನ ಮಗುವಿಗೆ ಹಾಲುಣಿಸಿ ರಕ್ಷಿಸುವಳು. ರೋಗ ನಿರೋಧಕ ಶಕ್ತಿ ಮತ್ತು ಉತ್ತಮ ಪೋಷಣೆ ಇದರಿಂದ ಸಾಧ್ಯ.
10. ಬಾಲಿಕೆಯರ ಶಿಕ್ಷಣವು ಬಡತನ ನೀಗಿಸಿ, ಶಾಂತಿಯನ್ನು ಪ್ರೋತ್ಸಾಹಿಸುವುದು. ಶಿಕ್ಷಣವು ಸರ್ಕಾರದ ಮೇಲಿನ ಸಾಮಾಜಿಕ ಹೊರೆಗಳನ್ನು ಕಡಿಮೆ ಮಾಡಿ, ಕುಟುಂಬದ ಆದಾಯವನ್ನು ಹೆಚ್ಚಿಸಿ ದೊಡ್ಡ, ಉತ್ತಮ ಸಿದ್ದತೆಯುಳ್ಳ ಕಾರ್ಮಿಕ ಬಲವನ್ನು ಉತ್ಪಾದಿಸುತ್ತದೆ. ಇದು ಜೀವನದ ಮಟ್ಟವನ್ನೂ ರಾಷ್ಟಾದಾಯವನ್ನೂ ಹೆಚ್ಚಿಸುವುದು. ಹಾಗೆಯೇ ಭಿನ್ನಾಭಿಪ್ರಾಯಗಳನ್ನು ಅಸಹನೆಯನ್ನು ಪರಸ್ಪರರಲ್ಲಿ ಗೌರವದ ಕೊರತೆಯನ್ನು ಕಡಿಮೆ ಮಾಡುವ ಅತ್ಯಂತ ಪರಿಣಾಮಕಾರಿ ಮಾರ್ಗವಾಗಿ, ಸಮುದಾಯಗಳ, ಸಮೂಹಗಳ ಮತ್ತು ದೇಶಗಳ ನಡುವಿನ ಬಾಂಧವ್ಯಕ್ಕೆ ಸಹಾಯ ಮಾಡುವುದು.

ಹಿಂದೆ ವಿಶ್ವ ಬ್ಯಾಂಕ್‌ನ ಉಪಾಧ್ಯಕ್ಷರೂ, ಪ್ರಧಾನ ಅರ್ಥಶಾಸ್ತ್ರಜ್ಞರೂ ಆಗಿದ್ದ ಲಾರೆನ್ಸ್ ಸಮ್ಮರ್ಸ್‌ರವರು "ಹೆಣ್ಣುಮಕ್ಕಳ ಶಿಕ್ಷಣದ ಎಲ್ಲ ಲಾಭಗಳನ್ನು ಯಾರಾದರೂ ಎಣಿಸುವುದಾದರೆ, ಅಭಿವೃದ್ಧಿಪರ ವಿಶ್ವದಲ್ಲಿ ಈ ಹೂಡಿಕೆಗಿಂತಹೆಚ್ಚು ದರದ ಪ್ರತಿಫಲ ನೀಡುವ ಮತ್ತಾವ ಹೂಡಿಕೆಯೂ ಇಲ್ಲ" ಎಂದಿದ್ದಾರೆ.ಪರಿಮಾಣಗಳಲ್ಲಿ ಅಳೆಯಲಾಗದ ಆದರೆ ಅತ್ಯಂತ ಶಕ್ತಿಯುತವಾದ ಇತರ ಪರಿಣಾಮಗಳೂ ಇವೆ. ಶಿಕ್ಷಣವು ಸ್ತ್ರೀಯರ ಮಾತ್ರವಲ್ಲದೆ ಪುರುಷರ ಜಾಗೃತಿಯನ್ನು

ಮಾರ್ಪಡಿಸಬಲ್ಲದು.ಹೆಣ್ಣು ಮಕ್ಕಳು ಶಿಕ್ಷಿಕರಾದಂತೆಲ್ಲ ತಮ್ಮನ್ನು ತಾವು ಗೃಹಕಾರ್ಯವನ್ನು ಮೀರಿದ ವಿಷಯಗಳಲ್ಲಿ ನಿರ್ಧಾರ ಕೈಗೊಳ್ಳುವವರನ್ನಾಗಿಯೂ, ಜ್ಞಾನ ನಿರ್ಮಾಣ ಹಾಗೂ ಪ್ರಸರಣ ಮಾಡುವವರನ್ನಾಗಿಯೂ ನೋಡುತ್ತಾರೆ. ಪೂರ್ಣವಾಗಿ ಹೊಸದಾದ ಸಮಾಜಿಕ, ಆರ್ಥಿಕ ವಿವರವು ಗೋಚರವಾಗುತ್ತದೆ ಮತ್ತು ಹುಡುಗರು ಹುಡುಗಿಯರನ್ನು ಹೆಚ್ಚು ತೀವ್ರವಾಗಿ ಪರಿಗಣಿಸತೊಡಗುತ್ತಾರೆಂದು ವೆಲ್ಲೆಸ್ಲಿ ಕಾಲೇಜಿನ, ಮಹಿಳೆಯರ ಕುರಿತ ಸಂಶೋಧನಾ ಕೇಂದ್ರದ ಅಸೋಸೊಯೇಟ್ ಡೈರೆಕ್ಟರ್‌ರವರಾದ ಪೆಗ್ಗಿ ಮೆಕಿಂಟೋಶ್ ರವರು ಹೇಳಿದ್ದಾರೆ.

## ಸರ್ಕಾರದ ಪ್ರೋತ್ಸಾಹಕಗಳು ಮತ್ತು ಕ್ರಮಗಳು

ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದಲ್ಲಿ ಲಿಂಗ ಅಸಮಾನತೆಗಳನ್ನು ನಿವಾರಿಸುವುದರಿಂದ ಆಗುವ ಪ್ರಗತಿಯ ನಿಜವಾದ ಪ್ರಭಾವ ಉಂಟಾಗುವ ದೇಶಗಳಲ್ಲಿ ಯುನಿಸೇಫ್‌ನ ಕಾರ್ಯಕಾರಿ ನಿರ್ದೇಶಕರಾದ ಕೆರೋಲ್ ಬೆಲ್ಲಮಿಯವರು ಪ್ರಚಾರ ಕಾರ್ಯಕ್ರಮ ರೂಪಿಸಿದ್ದಾರೆ.2005 ರ ವೇಳೆಗೆ ಲಿಂಗ ಸಮಾನತೆಯ ಗುರಿಸಾಧನೆಗಾಗಿ ಯುನಿಸೇಫ್ ಗುರ್ತಿಸಿರುವ, ಭಾರತವೂ ಸೇರಿದಂತೆ 25 ದೇಶಗಳಿಗೆ ಯಾವ ಸಹಾಯಬೇಕಾದರೂ ಒದಗಿಸಲು ಸಿದ್ಧವಿರುವುದಾಗಿ ಅವರು ಹೇಳಿದ್ದಾರೆ. ‘‘ತನ್ನ ದೇಶ ಮುಂದುವರಿಯಲು ಮಾಡುವ ಪ್ರಯತ್ನಗಳಲ್ಲಿ ಯಾವ ಹುಡುಗಿಯೂ ಹಿಂದೆಬೀಳದಂತೆ ಹಾಗೂ ಪ್ರತಿ ಹುಡುಗಿಯೂ ತನ್ನ ದೇಶದ ಅಭಿವೃದ್ದಿಯ ಮಧ್ಯವರ್ತಿಯಾಗಿ ತನ್ನ ಹಕ್ಕಿನ ಸ್ಥಾನವನ್ನು ಪಡೆಯುವಂತೆ ಮಾಡುವುದು ನಮ್ಮ ಬದ್ಧತೆಯಾಗಿದೆ’’ ಎಂದು ಅವರು ಆಫ್ರಿಕನ್‌ಸದಸ್ಯ ರಾಷ್ಟ್ರಗಳಶಿಕ್ಷಣ ಮಂತ್ರಿಗಳ ಎಂಟನೆಯ ಸಮ್ಮೇಳನದ ಆರಂಭದ ಅವಧಿಯಲ್ಲಿ ಹೇಳಿದ್ದಾರೆ. ಈ ಗುರಿಗಳನ್ನು ಸಾಧಿಸುವಲ್ಲಿ ಪ್ರಶಂಸಾರ್ಹ ಪ್ರಗತಿ ಸಾಧಿಸುವಲ್ಲಿ ವೈಫಲ್ಯವು ಮಾನವ ಅಭಿವೃದ್ದಿಗೇ ಅಪಾಯಕಾರಿ ಎಂದು ಎಚ್ಚರಿಸಿದ್ದಾರೆ.ಈ ಮಾರ್ಗದಲ್ಲಿ ಯಾವುದೇ ತಡವು ಈಗಾಗಲೇ ಬೇರೂರಿರುವ ಅಸಮತೆಗಳನ್ನು ಮುಂದುವರೆಸುವುದಲ್ಲದೆ ಮತ್ತೊಂದು ತಲೆಮಾರಿನ ಮಕ್ಕಳು ಬಡತನದ ಜೀವನ, ಪರಾವಲಂಬನೆ ಮತ್ತು ಸಾಧ್ಯತೆಗಳ ಪೂರೈಕೆಯಾಗದಿರುವ ಸ್ಥಿತಿಗೆ ತಳ್ಳುವುದೆಂದೂ ಅಭಿಪ್ರಾಯಪಟ್ಟಿದ್ದಾರೆ.

ವಿಶ್ವಸಂಸ್ಥೆಯ ಎಲ್ಲ ಸದಸ್ಯ ರಾಷ್ಟ್ರಗಳೂ ಒಪ್ಪಿಕೊಂಡಿರುವ ‘‘ಮಿಲ್ಲೆನಿಯಂ ಅಭಿವೃದ್ದಿ ಗುರಿಗಳು 2005 ರವರ್ಷವನ್ನು ಮೊದಲ ಮೈಲಿಗಲ್ಲಾಗಿ ತೀರ್ಮಾನಿಸಿ, ಆ ವರ್ಷದ ಕೊನೆಯ ವೇಳೆಗೆ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣಗಳಲ್ಲಿ ಲಿಂಗ ಅಸಮಾನತೆಗಳನ್ನು ಕೊನೆಗೊಳಿಸಲು ತೀರ್ಮಾನಿಸಿದೆ.ಗುರ್ತಿಸಿಕೊಂಡಿರುವ 25 ದೇಶಗಳಲ್ಲಿ ಶಾಲೆಗೆ ದಾಖಲಾಗದಿರುವ ಹೋಗದಿರುವ ಹೆಣ್ಣು ಮಕ್ಕಳನ್ನು ಗುರ್ತಿಸಲು ರಾಷ್ಟ್ರ ಸರ್ಕಾರಗಳು ಹಾಗೂ ಇತರ ಸಹಯೋಗಿಗಳೊಂದಿಗೆ ಯುನಿಸೇಫ್ ಕೆಲಸಮಾಡಲಿದೆ.ಪ್ರತಿ ದೇಶದಲ್ಲಿ ಹೊಸ ಸಂಪನ್ಮೂಲಗಳನ್ನು ಸಂಘಟಿಸಲು, ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುವ ಅಗತ್ಯ ಕುರಿತು ವಿಶಾಲವಾದ ರಾಷ್ಟ್ರೀಯ ಒಮ್ಮತವನ್ನು ನಿರ್ಮಿಸಲು ಹಾಗೂ ಶಾಲೆಗಳನ್ನೇ ಉತ್ತಮಗೊಳಿಸಿ ಹೆಣ್ಣು ಮಕ್ಕಳು ಶಾಲೆಗೆ ಆಕರ್ಷಿತರಾಗುವಂತೆ ಮಾಡಲು ಯುನಿಸೇಫ್ ಸರ್ಕಾರಗಳೊಡನೆ ಕೆಲಸ ಮಾಡುತ್ತದೆ.ಭಾರತವು ಈ ಗುರಿಸಾಧನೆಗೆ ಸಹಿ ಹಾಕುವುದರಿಂದ ಅದರ ಸಾಧನೆಗೆ ಬದ್ಧವಾಗಿದೆ, ಸರ್ಕಾರವು ಸ್ವಾತಂತ್ರ್ಯ ನಂತರವೂ ನೇಮಿಸಿರುವ ಹಲವು ಆಯೋಗಗಳ ಉದ್ದೇಶ ಹೆಣ್ಣು ಮಕ್ಕಳ ಶಿಕ್ಷಣದ ಸ್ಥಿತಿಯನ್ನು ಅಧ್ಯಯನ ಮಾಡಿ ಈ ಕುರಿತು ಶಿಫಾರಸ್ಸುಗಳನ್ನು ಮಾಡುವುದೇ ಆಗಿದೆ.ಈ ಕೆಳಗಿನ ಆಯೋಗಗಳು ಮಾಡಿರುವ ಶಿಫಾರಸ್ಸುಗಳು ಹೀಗಿವೆ.

1. 1948-49 ರ ವಿಶ್ವವಿದ್ಯಾಲಯ ಶಿಕ್ಷಣ ಆಯೋಗವು ನಿರ್ದಿಷ್ಟವಾಗಿ ವಿಶ್ವವಿದ್ಯಾಲಯ ಶಿಕ್ಷಣ ಕುರಿತು ಮಾತ್ರ ಅಧ್ಯಯನ ಮಾಡಿ ಕಾಲೇಜುಗಳಲ್ಲಿ ಮಹಿಳೆಯರಿಗೆ ಸಾಮಾನ್ಯ ಸೌಲಭ್ಯಗಳನ್ನು, ಸಮಾನ ವೇತನ, ಶೈಕ್ಷಣಿಕ ಅವಕಾಶ ಮತ್ತು ಮಾರ್ಗದರ್ಶನಗಳನ್ನೆ ಹೆಚ್ಚಿಸುವುದು, ಶಿಕ್ಷಣದಲ್ಲಿ ಸಮಾನ ಅಂಶಗಳು ಹಾಗೂ ಸಾಮಾನ್ಯ ಮಾನವ ಸ್ಥಾನಮಾನದ ಅವಶ್ಯಕತೆಯನ್ನು ಎತ್ತಿ ಹಿಡಿಯಿತು.
2. 1959 ರ ಮಹಿಳೆಯರ ಶಿಕ್ಷಣದ ರಾಷ್ಟ್ರೀಯ ಸಮಿತಿ ಔಪಚಾರಿಕ ಶಾಲೆಗಳಿಗೆ ಹೆಣ್ಣು ಮಕ್ಕಳ ಸಾರ್ವತ್ರಿಕ ದಾಖಲಾತಿ ಮೂಳಕವಲ್ಲದೆ ಸಂಕ್ಷಿಪ್ತಗೊಳಿಸಿದ ಕೋರ್ಸ್‌ಗಳು, ಉತ್ತಮಪಡಿಸಿಕೊಳ್ಳುವ ಕಾರ್ಯಕ್ರಮಗಳು, ವಿಚಾರಗೋಷ್ಠಿಗಳು, ಮುಂದುವರೆದ ಶಿಕ್ಷಣ, ತಾಂತ್ರಿಕ ಶಿಕ್ಷಣಸಂಸ್ಥೆಗಳನ್ನು ತೆರೆಯುವುದು ಮತ್ತು ವಿಶೇಷ ಅನುಕೂಲತೆಗಳನ್ನು, ವಿದ್ಯಾರ್ಥಿವೇತನಗಳನ್ನು ನೀಡುವುದರ ಮೂಲಕ ಬಾಲಕರ ಹಾಗೂ ಬಾಲಕಿಯರ ಶಿಕ್ಷಣದ ನಡುವೆ ಇರುವ ಅಂತರವನ್ನು ನಿವಾರಿಸುವ ಎಲ್ಲ ಕ್ರಮಗಳನ್ನೂ ಕೈಗೊಳ್ಳುವಂತೆ ಶಿಫಾರಸ್ಸು ಮಾಡಿದೆ.
3. 1964ರ, ಮಹಿಳೆಯ ಶಿಕ್ಷಣದ ರಾಷ್ಟ್ರೀಯ ಸಮಿತಿಯ ಶಾಲಾ ಶಿಕ್ಷಣದ ವಯಸ್ಸಿನ ಹೆಣ್ಣು ಮಕ್ಕಳು ಹಾಗೂ ವಯಸ್ಕ ಮಹಿಳೆಯ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳನ್ನು ಕುರಿತು ಸರ್ಕಾರಕ್ಕೆ ಸಲಹೆ ನೀಡಲು ನೇಮಿಸಲ್ಪಟ್ಟಿತು.
4. ಮಹಿಳೆಯ ಶಿಕ್ಷಣಕ್ಕಾಗಿ ಶ್ರೀಮತಿ ಹನ್ಸಾಮೆಹತಾ ಸಮಿತಿ ಪ್ರಾಥಮಿಕ ಮಟ್ಟದಲ್ಲಿ ಸಹ ಶಿಕ್ಷಣವನ್ನು ಶಿಫಾರಸ್ಸು ಮಾಡಿತಲ್ಲದೆ ಆರಂಭಿಕ ಶಿಕ್ಷಣದ ಪಠ್ಯಕ್ರಮದಲ್ಲಿ ಯಾವ ಭೇದವೂ ಇರಬಾರದೆಂದೂ ಶಾಲೆಗಳಲ್ಲಿ ಶಿಕ್ಷಕಿಯ ಪ್ರಮಾಣ ಹೆಚ್ಚಿಸಬೇಕೆಂದೂ ಶಿಫಾರಸ್ಸುಮಾಡಿತು.
5. 1963 ರ ಭಕ್ತ ವತ್ಸಲಂ ಸಮಿತಿಯು ಹೆಣ್ಣು ಮಕ್ಕಳ ಶಿಕ್ಷಣವನ್ನು ಜನಪ್ರಿಯಗೊಳಿಸಲು ಹಲವಾರು ಕ್ರಮಗಳನ್ನು ಸಲಹೆ ಮಾಡಿತು. ಅವುಗಳಲ್ಲಿ ಹೆಣ್ಣು ಮಕ್ಕಳಿಗಾಗಿ ಪೂರ್ವ ಪ್ರಾಥಮಿಕ ಶಾಲೆಗಳನ್ನು ತೆರೆದು, ಈ ಶಾಲೆಗಳನ್ನು ಪ್ರಾಥಮಿಕ ಶಾಲೆಗಳಿಗೆ ಹೊಂದಿಸಬೇಕೆಂಬುದೂ ಹೆಚ್ಚು ಆಕರ್ಷಕ ಶಾಲಾ ಕಾರ್ಯಗಳನ್ನು ಒದಗಿಸುವುದರ ಜೊತೆಗೆ ಶಿಕ್ಷಕಿಯರನ್ನು ನೇಮಿಸಬೇಕೆಂದೂ ಶಿಫಾರಸ್ಸು ಮಾಡಿತ್ತು.
6. 1964-66ರ ಕೊಠಾರಿ ಆಯೋಗವು ಶಿಕ್ಷಣದ ವ್ಯಾಪಕತೆ ಹಾಗೂ ಅಭಿವೃದ್ಧಿಗಾಗಿ ಕೈಗೊಳ್ಳುವ ಸಾಮಾನ್ಯ ಕಾರ್ಯಕ್ರಮಗಳಲ್ಲಿ ಎಲ್ಲ ಹಂತಗಳಲ್ಲಿಯೂ ಎಲ್ಲ ಕ್ಷೇತ್ರಗಳಲ್ಲಿಯೂ ಹೆಣ್ಣು ಮಕ್ಕಳ ಶಿಕ್ಷಣವು ಅವಿಭಾಜ್ಯ ಅಂಗವಾಗಬೇಕೆಂದು ಒತ್ತಿ ಹೇಳಿದೆ. ವಿಶೇಷ ಯೋಜನೆಗಳು ಹಾಗೂ ವಿಶೇಷ ಕಾರ್ಯಯಂತ್ರಗಳ ಮೂಲಕ ಈಗಿರುವ ಸಾಧ್ಯವಾದಷ್ಟು ಬೇಗನೆ ನಿವಾರಿಸಬೇಕೆಂದೂ ಹೇಳಿದೆ.
7. 1986 ರ ರಾಷ್ಟ್ರೀಯ ಶಿಕ್ಷಣ ನೀತಿಯು ಶಿಕ್ಷಣವನ್ನು ಸ್ತ್ರೀಯರ ಸ್ಥಾನಮಾನ ಹೆಚ್ಚಿಸಲು ಮತ್ತು ಸ್ತ್ರೀ ಸಬಲೀಕರಣಕ್ಕಾಗಿ ಸಮಾನತೆಗಾಗಿ ಶಿಕ್ಷಣವನ್ನು ಒತ್ತಿ ಹೇಳಿದೆ. ಮಹಿಳಾ ಅಧ್ಯಯನವನ್ನು ಪ್ರೋತ್ಸಾಹಿಸುವುದು, ಅನಕ್ಷರತೆಯ ನಿರ್ಮೂಲನ ಮತ್ತು ತಾಂತ್ರಿಕ ಹಾಗೂ ಔದ್ಯೋಗಿಕ ಶಿಕ್ಷಣದಲ್ಲಿ ಮಹಿಳೆಯರ ಸಹಭಾಗಿತ್ವಗಳೂ ಅವಶ್ಯವಾಗಿವೆ.

- ರಾಜ್ಯ ಶಿಕ್ಷಣ ನಿದೇಶನಾಲಯಗಳಲ್ಲಿ ಹೆಣ್ಣು ಮಕ್ಕಳ ಶಿಕ್ಷಣ ಕಾರ್ಯಕ್ರಮಗಳನ್ನು ನೋಡಿಕೊಳ್ಳಲು ಪ್ರತ್ಯೇಕ ವಿಭಾಗಗಳು.
- ಹೆಣ್ಣು ಮಕ್ಕಳಿಗಾಗಿ ಪಾಲಿಟೆಕ್ನಿಕ್‌ಗಳ ಸ್ಥಾಪನೆ ಹಾಗೂ ಸಂಕ್ಷಿಪ್ತಗೊಳಿಸಿದ ಕೋರ್ಸ್‌ಗಳು.
- ಮಹಿಳಾ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸ್ವಯಂಸೇವಾ ಶಿಕ್ಷಣ ಸಂಸ್ಥೆಗಳಿಗೆ ಸಹಾಯ.
- ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಕಿಯರಿಗೆ ವಾಸಕ್ಕಾಗಿ ಗೃಹ ನಿರ್ಮಾಣ, ಹೆಣ್ಣು ಮಕ್ಕಳಿಗೆ ಹಾಸ್ಟೆಲ್‌ಗಳು.

- ಹೆಣ್ಣು ಮಕ್ಕಳ ಶಿಕ್ಷಣದ ಸಮಸ್ಯೆಗಳನ್ನು ಕಾರ್ಯಕ್ರಮಗಳನ್ನು ಚರ್ಚಿಸಲು ಬೇರೆ ಬೇರೆ ರಾಜ್ಯಗಳಲ್ಲಿ ವಿಚಾರಗೋಷ್ಠಿಗಳು.

## ಶಿಕ್ಷಣ ಸಂಸ್ಥೆಗಳ ಪಾತ್ರ

ಮೂರನೆಯ ಸಹಸ್ರಮಾನವನ್ನು ಮಹಿಳೆಯರ ಸಹಸ್ರಮಾನವೆಂದು ಹೇಳಲಾಗುತ್ತಿದೆ. 21ನೇ ಶತಮಾನದ ಹೋರಾಟಗಳು ಬಹಳ ತೀವ್ರ ಹೋರಾಟಗಳಾಗಿದ್ದು ಅವು ಸೃಷ್ಟಿಯನ್ನು ಸಂರಕ್ಷಿಸುವ ಎಂದರೆ ಅರಣ್ಯ ರಕ್ಷಣೆ, ಮಾಲಿನ್ಯದ ವಿರುದ್ದ ಹೋರಾಟ, ಭ್ರಷ್ಟಾಚಾರದಿಂದ ಮಾನವ ಸಮುದಾಯವನ್ನು ಸಂರಕ್ಷಿಸುವುದು ಹಿಂಸೆ ಹಾಗೂ ಅನ್ಯಾಯ ಅತ್ಯಾಚಾರಗಳ ವಿರುದ್ದ ಹೋರಾಟ ಇತ್ಯಾದಿಗಳಾಗಿವೆ. ಮನುಷ್ಯರು ಮಾನವೀಯತೆ ಮತ್ತು ಇತರರಿಗೆ ಸ್ಪಂದಿಸುವ ಗುಣಗಳನ್ನು ಬೆಳೆಸಿಕೊಳ್ಳಬೇಕು. ಸೃಷ್ಟಿಯ ನೋವನ್ನು ಅರಿತಿರುವ ಮಾನವೀಯ ಸಾಮರ್ಥ್ಯಗಳಿಂದ ತುಂಬಿರುವ ಸಂವೇದನಾ ಶೀಲತೆಯುಳ್ಳ ಮಹಿಳೆಯರು ಮಾತ್ರವೇ ಮಾನವ ಸನ್ನಿವೇಶಗಳನ್ನು ನಿರ್ವಹಿಸುವ ಹಾಗೂ ರಾಷ್ಟ್ರದ ಅಭಿವೃದ್ದಿಗಾಗಿ ಕೆಲಸ ಮಾಡುವ ಸಾಮರ್ಥ್ಯ ಹೊಂದಿರುತ್ತಾರೆ.ಬಾಲಕ, ಬಾಲಕಿಯರ ಶಾಲೆಗಳೆರಡೂ ಸಹ ಶಿಕ್ಷಣ ಸಂಸ್ಥೆಗಳನ್ನು ಕೇವಲ ಸಾಕ್ಷರತೆ ಬೆಳೆಸುವ ಕೇಂದ್ರಗಳನ್ನಾಗಿಸಿದೆ.ಮಾನವ ಸಬಲೀಕರಣ ಅದರಲ್ಲಿಯೂ ಹೆಣ್ಣು ಮಕ್ಕಳ ಸಬಲೀಕರಣಕ್ಕಾಗಿ ಶ್ರಮಿಸುವ ಕೇಂದ್ರಗಳನ್ನಾಗಿಸಬೇಕು ಇದನ್ನು ಸಾಧಿಸಲು ಈ ಮಾರ್ಗಗಳನ್ನು ಅನುಸರಿಸಬೇಕಾಗಿದೆ.

- ಹೆಣ್ಣು ಮಕ್ಕಳು ಸ್ವ ಪರಿಕಲ್ಪನೆ ಹಾಗೂ ಆತ್ಮವಿಶ್ವಾಗಳನ್ನು ಹೆಚ್ಚಿಸಿಕೊಳ್ಳುವ ಅವಕಾಶಗಳನ್ನು ಒದಗಿಸುವುದು ಇಂತಹ ಸಾಮರ್ಥ್ಯಗಳುಳ್ಳ ಧನಾತ್ಮಕ ಮನೋಭಾವಗಳುಳ್ಳ ಮತ್ತು ವ್ಯಕ್ತಿಗಳು ತಮ್ಮ ಗುರಿಗಳನ್ನು ಸಾಧಿಸಲು ಸಮರ್ಥರಾಗಿರುತ್ತಾರೆ. ಆದರೆ, ದೈನ್ಯತೆಯ ಮನೋಭಾವವಿದ್ದು ಕೆಳಮಟ್ಟದ ಸ್ವ ಬಿಂಬ ಕಲ್ಪನೆ ಇರುವವರು ಜೀವನದಲ್ಲಿ ಸಫಲರಾಗುವುದಿಲ್ಲ. ಮಹಿಳೆಯನ್ನೇ ಬೇರ್ಪಡಿಸುವ ರೂಢಿಗಳು, ಸಂಪ್ರದಾಯಗಳು ಹಾಗೂ ಮಹಿಳೆಯರ ಶೋಷಣೆ ಅವರನ್ನು ಋಣಾತ್ಮಕ ಗುಣಗಳಿರುವಂತೆ ತೋರಿಸುವುದು. – ಇವೆಲ್ಲವೂ ಸ್ತ್ರೀಯರ ಆತ್ಮವಿಶ್ವಾಸ ಕುಗ್ಗಿಸಿ ಅವರ ಸ್ವ ಪರಿಕಲ್ಪನೆಯನ್ನು ತಗ್ಗಿಸಿವೆ.
- ಸಾಮರ್ಥ್ಯವಿಲ್ಲದಿರುವಿಕೆ ಹಾಗೂ ಕೀಳೆಂಬ ಭಾವನೆಗಳ ವಿರುದ್ದ ಸ್ತ್ರೀಯರು ಹೋರಾಡಬೇಕು. ನಮ್ಮ ವಿದ್ಯಾರ್ಥಿನಿಯರಿಗೆ ಸ್ವತಂತ್ರವಾಗಿ ಆಲೋಚಿಸುವ ತಮ್ಮ ಜೀವನದ ಬಗ್ಗೆ ತಾವೇ ವೈಯಕ್ತಿಕ ನಿರ್ಣಯ ಕೈಗೊಳ್ಳುವ ಸಾಮರ್ಥ್ಯಗಳೆಂಬ ಅಸ್ತ್ರಗಳನ್ನು ಒದಗಿಸಬೇಕು. ನಮ್ಮ ಮಾನವ ಸಂಪನ್ಮೂಲದ ಶೇ. 50 ಭಾಗವಾದ ಮಹಿಳೆಯರಲ್ಲಿ ನಾಯಕತ್ವದ ಸಾಮರ್ಥ್ಯ ಬೆಳೆಸಿ ಸಮಾಜಕ್ಕೆ ಮಹತ್ವದ ಕೊಡುಗೆ ನೀಡುವಂತೆ ಮಾಡಬೇಕು.
- ಮಹಿಳೆಯರು ಸ್ವಾವಲಂಬಿಗಳೂ ಸ್ವಾಯತ್ತತೆಯುಳ್ಳವರು, ಆರ್ಥಿಕವಾಗಿ ಸ್ವತಂತ್ರರೂ ಆಗಿರಬೇಕೆಂಬ ಅರಿವನ್ನು ಮೂಡಿಸುವದು ಶಿಕ್ಷಣ ಸಂಸ್ಥೆಗಳ ಜವಾಬ್ದಾರಿಯಾಗಿದೆ. ವಿಶ್ವ ಸಂಸ್ಥೆಯ ಅಂಕಿಅಂಶಗಳ ಪ್ರಕಾರ ಪ್ರಪಂಚದಲ್ಲಿ ಮಾಡಲ್ಪಡುವ ಕೆಲಸದ ಗಂಟೆಗಳಲ್ಲಿ ಮೂರನೆಯ ಎರಡರಷ್ಟರನ್ನು ಮಹಿಳೆಯರು ಮಾಡುತ್ತಾರೆ. ಆದರೆ ವಿಶ್ವದ ಆದಾಯದ 1/10 ರಷ್ಟರನ್ನು ಮಾತ್ರ ಪಡರಯುತ್ತಾರೆ ಹಾಗೂ 1/100 ರಷ್ಟು ಆಸ್ತಿಗೆ ಮಾತ್ರ ಒಡತಿಯರಾಗಿರುತ್ತಾರೆ. ಇದಕ್ಕೆ ಕಾರಣ ಬಹಳ ಸರಳವಾಗಿದೆ. ಜೀವನದ ಪ್ರತಿ ವಿಷಯದ ವ್ಯಾಖ್ಯೆ ಹಾಗೂ ಪರಿಕಲ್ಪನೆಗಳು ಪುರುಷರ ದೃಷ್ಟಿಕೋನದಿಂದಲೇ ಸೃಷ್ಟಿಸಲ್ಪಟ್ಟಿವೆ ಪುರುಷ ವೈದ್ಯರು ಸ್ತ್ರೀಯರ ಶರೀರ ಮತ್ತು ಕಾಹಿಲೆಗಲನ್ನು ವ್ಯಾಖ್ಯಾನಿಸಿತ್ತಾರೆ. ಪುರುಷ ಮನೋವಿಜ್ಞಾನಿಗಳು ಸ್ತ್ರೀಯರ

ಮನೋವಿಜ್ಞಾನ ಏನೆಂದು ಹೇಳುತ್ತಾರೆ, ಪುರುಷ ಅರ್ಥಶಾಸ್ತ್ರಜ್ಞರು ಕೆಲಸ ಎಂದರೇನೆಂದು ಹೇಳುತ್ತಾರೆ– ಇದರ ಪರಿಣಾಮವಾಗಿ ಮಹಿಳೆಯರು ಮಡುವ ಕೆಲಸ ಕೆಲಸವೂ ಅಲ್ಲ. ಅದಕ್ಕೆ ಬೆಲೆಯೂ ಇಲ್ಲವಾಗಿದೆ. ಇದನ್ನು ಸರಿಪಡಿಸಲು ಶಿಕ್ಷಣದಿಂದ ಮಾತ್ತರನೇ ಸಾಧ್ಯ. ಆದ್ದರಿಂದ ಶಿಕ್ಷಣ ಸಂಸ್ಥೆಗಳು ಈ ಪ್ರೋತ್ಸಾಹಕ ಕ್ರಮಕೈಗೊಳ್ಳಬೇಕು.

- ನಮ್ಮ ಸಮಾಜದಲ್ಲಿ ಮುಂದುವರೆದಿರುವ ಲಿಂಗ ತಾರತಮ್ಯದಿಂದ ದೂರ ಸರಿದು ಸ್ತ್ರೀ ಹಾಗೂ ಪುರುಷ ಗುಣಗಳನ್ನು ಪುನಃ ವ್ಯಾಖ್ಯೆ ಮಾಡಲು ಶಿಕ್ಷಣ ಸಹಾಯ ಮಾಡಬೇಕು. ಶಿಕ್ಷಣವು ಮಹಿಳೆಯನ್ನು ಕೆಳಗಿನ ಮಟ್ಟದಿಂದ ಮೇಲೆತ್ತಿ ಬಾಲಕ, ಬಾಲಕಿಯರಿಬ್ಬರಲ್ಲೂ ಪೋಷಿಸುವ ಕಾಳಜಿ ವಹಿಸುವ  ನಮ್ರತೆಯಿಂದ ವರ್ತಿಸುವ ಗುಣಗಳನ್ನು ಉತ್ತೇಜಿಸಬೇಕಲ್ಲದೆ ಧೈರ್ಯ ಮತ್ತು ಸ್ವಾತಂತ್ರ್ಯಗಳನ್ನೂ ಜೊತೆಗೆ ಎಲ್ಲ ಧನಾತ್ಮಕ ಗುಣಗಳನ್ನು ಉತ್ತೇಜಿಸಬೇಕು. ಏಕೆಂದರೆ ಬಾಲಕ ಬಾಲಕೆಯರ ನಡುವಿನ ವ್ಯತ್ಯಾಸ ಮುಖ್ಯವಾಗಿ ಜೈವಿಕವೇ ವಿನಃ ಮನೋವೈಜ್ಞಾನಿಕ ಅಥವಾ ಸಮಾಜಿಕವಲ್ಲ
- ಶಿಕ್ಷಣ ಮತ್ತು ಜ್ಞಾನಗಳ ಈವರೆಗೆ ಮಹಿಳೆಯರನ್ನು ದುರ್ಬಲರನ್ನಾಗಿಸುವ ಸಾಧನೆಗಳೇ ಆಗಿವೆ. ಆದ್ದರಿಂದ ಶಿಕ್ಷಣ ಸಂಸ್ಥೆ ಒಂದು ಧನಾತ್ಮಕ ವಾತಾವರಣ ನಿರ್ಮಿಸಿ ಮಹಿಳೆಯರು ಆತ್ಮಪ್ರತಿಷ್ಠೆ ಬೆಳೆಸಿಕೊಳ್ಳಲು ಮಾನವರಾಗಿ ತಮ್ಮ ಸಾಮರ್ಥ್ಯಗಳನ್ನು ಪೂರ್ಣವಾಗಿ ಅಭಿವೃದ್ದಿ ಪಡಿಸಿಕೊಳ್ಳಲು ತಮ್ಮ ಜೀವನವನ್ನು ತಮ್ಮ ಹತೋಟಿಗೆ ತಂದುಕೊಳ್ಳಲು ಅಗತ್ಯವಾದ ವಿಶ್ಲೇಷಣಾ ಕೌಶಲಗಳನ್ನು ಬೆಳೆಸಿಕೊಳ್ಳಲು ಸಹಾಯ ಮಾಡಬೇಕಾಗಿದೆ.

# ಅಧ್ಯಾಯ:3


## ಅಧ್ಯಯನದ ಫಲಶೃತಿಗಳು

**ಶಿಕ್ಷಣ ಇಲಾಖೆಯ ಶಿಕ್ಷಕರು ಅಧಿಕಾರಿಗಳಲ್ಲಿರುವ ಲಿಂಗ ಸಂವೇದನಾತ್ಮಕ ಜ್ಞಾನವನ್ನು ಹಾಗೂ ಅವರ ಮನೋಧೋರಣೆಗಳನ್ನು ಶಿವಮೊಗ್ಗ ಜಿಲ್ಲೆಯ ಆಯ್ದ ಪ್ರತಿದರ್ಶಚಯನ ಆಧರಿಸಿ ವಿಶ್ಲೇಷಣೆಗೆ ಒಳಪಡಿಸಿದೆ.**

**ದತ್ತಾಂಶ ವಿಶ್ಲೇಷಣೆ ನಕ್ಷೆಯಲ್ಲಿ ಪ್ರತಿನಿಧಿಸಿರುವುದು:**


**ಕೋಷ್ಟಕ : 1**

| ತಾಲ್ಲೂಕು | | ಶಿವಮೊಗ್ಗ | ಭದಾವತಿ | ಶಿಕಾರಿಪುರ | ಸೊರಬ | ತೀರ್ಥಹಳ್ಳಿ | ಸಾಗರ | ಹೊಸನಗರ | ಒಟ್ಟು |
|---|---|---|---|---|---|---|---|---|---|
| | ಶೇಕಡ | 33.00 | 18.00 | 5.00 | 15.00 | 12.00 | 6.00 | 11.00 | 100 |



## ಕೋಷ್ಟಕ : 2

| ಸಂಸ್ಥೆಗಳು | ಡಿಡಿಪಿಐ (ಆಡಳಿತ) | ಡಿಡಿಪಿಐ (ಅಭಿವೃದ್ಧಿ) | ಬಿಇಓ | ಬಿಆರ್‌ಸಿ | ಸಿಆರ್‌ಸಿ | ಶಾಲೆಗಳು | ಒಟ್ಟು |
|---|---|---|---|---|---|---|---|
| | 0.63 | 2.5 | 2.5 | 11.00 | 19.00 | 64.37 | 100 |




**ಕೋಷ್ಟಕ : 3**

| ಲಿಂಗ | ಪುರುಷರು | ಮಹಿಳೆಯರು | ಒಟ್ಟು |
|---|---|---|---|
| | 54.00 | 46.00 | 100 |




## ಕೋಷ್ಟಕ : 4

| ಲಿಂಗ ಸಂವೇದನೆ | ತರಬೇತಿಯಾದವರು | ತರಬೇತಿಯಾಗದವರು | ಖಚಿತ ಮಾಹಿತಿ ನೀಡದವರು | ಒಟ್ಟು |
|---|---|---|---|---|
| ಸಂಬಂಧಿಸಿದಂತಹ ತರಬೇತಿ | 16.25 | 63.75 | 20 | 100 |




**ಕೋಷ್ಟಕ : 5**

| | ಗಂಡು | ಹೆಣ್ಣು |
|---|---|---|
| ಅಸಮಾನತೆ ಅನುಭವಿಸಿದವರು | 45.76 | 54.24 |





**ಕೋಷ್ಟಕ : 6**

| | ಗಂಡು | ಹೆಣ್ಣು |
|---|---|---|
| ಸಮಾನತೆ ಅನುಭವಿಸಿದವರು | 59.41 | 40.59 |




**ಕೋಷ್ಟಕ : 07**

| ಶಾಲೆಗಳು ಬಾಲಕ ಮತ್ತು ಬಾಲಕಿಯರ ವ್ಯಕ್ತಿತ್ವ ವಿಕಸನಕ್ಕೆ ಅವಕಾಶ ನೀಡುತ್ತಿದೆಯೇ? | | |
|---|---|---|
| **ಪುರುಷರು** | ಹೌದು | 95.41 |
| | ಇಲ್ಲ | 04.59 |
| **ಮಹಿಳೆಯರು** | ಹೌದು | 95.72 |
| | ಇಲ್ಲ | 04.28 |
| | ಒಟ್ಟು | 100.00 |




**ಕೋಷ್ಟಕ : 8**

| ಲಿಂಗ ಸಮಾನತೆಗೆ ವೈಯಕ್ತಿಕ ಪ್ರಯತ್ನ ಮಾಡಿದವರು | |
|---|---|
| ಪುರುಷರು | 54.38 |
| ಮಹಿಳೆಯರು | 45.62 |
| ಒಟ್ಟು | 100.00 |



**ಕೋಷ್ಟಕ: 9**


| ಲಿಂಗ ಸಮಾನತೆಗಾಗಿ ನಿರ್ವಹಿಸುವ ಪ್ರಯತ್ನಗಳಿಗೆ ಅಡಚಣೆಗಳಿವೆಯೆ? | | |
|---|---|---|
| **ಪುರುಷರು** | ಹೌದು | 86.00 |
| | ಇಲ್ಲ | 14.00 |
| **ಮಹಿಳೆಯರು** | ಹೌದು | 97.00 |
| | ಇಲ್ಲ | 3.00 |
| | ಒಟ್ಟು | 100.00 |




:


## ಕೋಷ್ಟಕ : 10

| ಪೋಷಕರು ಶಿಕ್ಷಕರಿಗೆ ಲಿಂಗ ಸಂವೇದನಾತ್ಮಕ ಜಾಗೃತಿಯನ್ನು ಮೂಡಿಸುವ ಅವಶ್ಯಕತೆ ಇದೆಯೆ? | | |
|---|---|---|
| **ಪುರುಷರು** | ಹೌದು | 86.00 |
| | ಇಲ್ಲ | 14.00 |
| **ಮಹಿಳೆಯರು** | ಹೌದು | 97.00 |
| | ಇಲ್ಲ | 3.00 |
| | ಒಟ್ಟು | 100.00 |



## ಕೋಷ್ಟಕ : 11

| ಲಿಂಗ ಸಂವೇದನಾತ್ಮಕ ತರಬೇತಿಗಳು ಆಲೋಚನೆಗಳನ್ನು ಪ್ರಭಾವಿಸುತ್ತದೆ | | |
|---|---|---|
| **ಪುರುಷರು** | ಹೌದು | 51.00 |
| | ಇಲ್ಲ | 10.00 |
| **ಮಹಿಳೆಯರು** | ಹೌದು | 31.00 |
| | ಇಲ್ಲ | 08.00 |
| | ಒಟ್ಟು | 100.00 |



## ದತ್ತಾಂಶದ ಗುಣಾತ್ಮಕ ವಿಶ್ಲೇಷಣೆ:

ಶಿವಮೊಗ್ಗ ಜಿಲ್ಲೆಯ ಜಿಲ್ಲಾ ಹಂತ ಏಳು ತಾಲ್ಲೂಕು ಕ್ಲಸ್ಟರ್ ಅಧಿಕಾರಿಗಳು ಹಾಗೂ ಪ್ರಾಥಮಿಕ ಪ್ರೌಡಶಾಲೆಯ ಮುಖ್ಯ ಸಹಶಿಕ್ಷಕರು ಈ ಅಧ್ಯಯನದಲ್ಲಿ ಭಾಗವಹಿಸಿರುತಾರೆ.ಇವರಲ್ಲಿ ಶಾಲೆ ಮತ್ತು ಸಿಆರ್‌ಸಿಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಅಭಿಪ್ರಾಯ ಸೂಚಿಸಿರುತ್ತಾರೆ.ಶೇಕಡ 54 ಪುರುಷರು 45 ರಷ್ಟು ಮಹಿಳೆಯರು ಈ ಅಧ್ಯಯನದಲ್ಲಿ ಪಾಲ್ಗೊಂಡಿದ್ದಾರೆ.ಇವರಲ್ಲಿ ಶೇಕಡ 16 ಲಿಂಗ ಸಂವೇದನಾ ತರಬೇತಿ ಹೊಂದಿದವರಿದ್ದು ಶೇ 63.75 ಅಧಿಕೃತ ತರಬೇತಿಯನ್ನು ಪಡೆದಿರುವುದಿಲ್ಲ. ಉಳಿದ ಶೇ 20 ರಷ್ಟು ವ್ಯಕ್ತಿಗಳು ಖಚಿತ ಮಾಹಿತಿ ನೀಡಿರುವುದಿಲ್ಲ.

## ಸಂಶೋಧನಾ ಪ್ರಶ್ನೆವಾರು ದತ್ತಾಂಶ ವಿಶ್ಲೇಷಣೆ:

**ಲಿಂಗ ಸಂವೇದನೆ ಎಂದಾದ ಮನಸ್ಸಿಗೆ ಬಂದ ಭಾವನೆಗಳು:**

ಗಂಡು ಹೆಣ್ಣು ಚಿತ್ರಣ ಹಾಗೂ ಭಾವನೆಗೆ ಸಂಬಂಧಿಸಿದೆ.ಗಂಡು ಹೆಣ್ಣು ಎಂಬ ಕಾರಣ ವ್ಯತ್ಯಾಸದಿಂದ ಹೆಣ್ಣು ಅನುಭವಿಸುವ ಯಾತನೆಗಳು,ಭೇದ ಭಾವವಿಲ್ಲದೆ ಸೃಷ್ಟಿಯ ಸಹಜ ಮಾನವರಾಗಿ ನೋಡುವ ದೃಷ್ಟಿಕೋನ.ಲಿಂಗಾನುಪಾತ, ಅಸಮಾನತೆ, ತಾರತಮ್ಯ,ನಾನು ಹೆಚ್ಚು ನೀನು ಕಡಿಮೆ ಎನ್ನುವ ಗಂಡಿನ ಭಾವನೆಗಳು.ಪುರುಷ ಮಹಿಳೆಯರುಗಳಲ್ಲಿನ ವಿಭಿನ್ನ ಸಾಮರ್ಥ್ಯ ಹೊರತಾಗಿಯೂ ಇರುವ ಅಂತರಗಳು.ಭಿನ್ನ ಮಾನಸಿಕ ಸಾಮರ್ಥ್ಯಗಳು, ವಿವಿಧ ಕ್ಷೇತ್ರಗಳಲ್ಲಿ ಇರುವ ಅವಕಾಶಗಳು, ಸ್ವತಂತ್ರ್ಯಗಳು, ಅಂತರಗಳು ಎನ್ನುವ ಭಾವನೆಗಳು ಲಿಂಗ ಸಂವೇದನೆ ಪದವನ್ನು ಪರಿಭಾವಿಸದಾಗ ಮೂಡುವ ಮಾನಸಿಕ ನಕಾಶೆಯಾಗಿದೆ.

### 1.ಶಿಕ್ಷಕರು ಅಧಿಕಾರಿಗಳು ಹಂಚಿಕೊಂಡಿರುವ ಲಿಂಗಾಧಾರಿತ ಅಸಮಾನತೆಯನ್ನು ಅನುಭವಗಳು:

ಲಿಂಗಸಂವೇದನೆಯ ಒಂದು ಆಯಾಮವಾಗಿ ವೈಯಕ್ತಿಕವಾಗಿ ಅಸಮಾನತೆಯನ್ನು ಅನುಭವಿಸಿರುವಿರಾ ಪ್ರಶ್ನೆಗೆ ಶೇಕಡ 46 ಪುರುಷರು ಹಾಗೂ 54 ರಷ್ಟು ಮಹಿಳೆಯರು ಹೌದು ಎಂದು ಪ್ರತಿಕಿಯಿಸಿದ್ದಾರೆ. ಪುರುಷರಲ್ಲಿಯೂ ಜೆಂಡರ್ ಆಯಾಮ ಹೊರತುಪಡಿಸಿ ಜಾತಿ ವರ್ಗ ಭೇದದ ಪ್ರಶ್ನೆಗಳನ್ನು ಎತ್ತಿ ಪ್ರತಿಕ್ರಿಯಿಸಿದ್ದಾರೆ.

ಇದರೊಂದಿಗೆ 59 ಪುರುಷರು ಹಾಗೂ 40 ರಷ್ಟು ಮಹಿಳೆಯರು ತಾವು ಅಸಮಾನತೆ ಅನುಭವಿಸಿರುವುದಿಲ್ಲ ಎಂದೂ ಪ್ರತಿಕ್ರಿಯಿಸಿದ್ದಾರೆ.ಇದಕ್ಕೆ ಸಮರ್ಥನೆಯಾಗಿ ಕೆಲವು ಮಹಿಳೆಯರು ಪೋಷಕರ ಮನೋಧೋರಣೆ ಮತ್ತು ನೀಡಿದ ಸಹಕಾರ ಪಡೆದ ಶಿಕ್ಷಣದಿಂದ ಸಾಧ್ಯವಾಗಿದೆ ಎಂದು ತಿಳಿಸಿರುತ್ತಾರೆ.

**ಪುರುಷ ಹಾಗೂ ಮಹಿಳೆಯರು ಹೊಂದಿರುವ ಸ್ವಯಂ ಸ್ಕೀಮವನ್ನು ಗಮನಿಸಿದಾಗ ಸೆಕ್ ಟೈಪಿಂಗ್ (ಗಂಡು ಹೆಣ್ಣಾಗಿ ಯೋಚಿಸುವಿಕೆ) ಕಂಡುಬಂದಿದೆ.**

**ಕೆಲವು ಆಯ್ದ ಅಭಿಪ್ರಾಯ:**

**ಮಹಿಳೆಯರು ಮತ್ತು ಪುರುಷರಲ್ಲಿರುವ ಸ್ವಯಂ ಸ್ಕೀಮಾಗಳು:**

**ಪುರುಷರು:**

ಪುರುಷರು ನೀಡಿರುವ ಪ್ರತಿಕ್ರಿಯೆಗಳು ಹೀಗಿವೆ?ಎಲ್ಲಾ ಕ್ಷೇತ್ರದಲ್ಲೂ ಸಮಾನತೆ ಸಾಧ್ಯವಿಲ್ಲ, ಸಾಧ್ಯವಿರುವೆಡೆ ಮಾತ್ರ ಅವಕಾಶ ನೀಡಬಹುದು ಅಲ್ಲದೆ ಗಂಡು ಮಾಡಬಹುದಾದ ಕಾರ್ಯ ಹೆಣ್ಣು ಮಕ್ಕಳು ಮಾಡಲು ಸಾಧ್ಯವಿಲ್ಲ. ಅವಕಾಶಗಳು ಎಂಬ ಪ್ರಶ್ನೆಗೆ ಈಗಾಗಲೇ ಇರುವ ಅವಕಾಶಗಳು ಕೊಡಬಹುದಾದ ಅವಕಾಶಗಳಿಗೆ ಸಂಬಂಧಿಸಿದ ತರಬೇತಿ ನೀಡಿದರೆ ಹಾಗೂ ಸಮರ್ಪಕ ಸಂವಹನದೊಂದಿಗೆ ಅಸಮಾನತೆ ನೀಗಿಸಬಹುದು ಎಂಬ ನಿಲುವಿದೆ.ಯಾವ ಕ್ಷೇತ್ರದಲ್ಲಿ ಪರುಷ ಮಹಿಳೆಯರ ಸಾಧನೆ ಎಷ್ಟಿದೆ? ತಿಳಿಯ ಬಯಸುವುದಾಗಿ ತಿಳಿಸಿರುತ್ತಾರೆ

**ಮಹಿಳೆಯರು:**

**ಮಹಿಳೆಯರು**ಯಾವುದೇ ಕಾರಣಕ್ಕೂ ಜನರು ನೋಡುವ ದೃಷ್ಟಿಕೋನ ಮತ್ತು ಮನಸ್ಥಿತಿಯನ್ನು ಬದಲಾಯಿಸಲು ಸಾಧ್ಯವಿಲ್ಲ. ಇದರೊಂದಿಗೆ ಕ್ರೀಡಾ ಕೂಟ ಸಾರ್ವಜನಿಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಹಿಂಜರಿಕೆ, ಹೀಗೆ ಮಾಡಬಹುದೆ, ಹೊರಗೆ ಹೋಗಬಹುದೆ?ಪ್ರಶ್ನೆಗಳು ಕಾಡಿವೆ?ತಡೆದಿವೆ?ಬೇಸರವಾಗುತ್ತಿತ್ತು, ಹೀಗೇಕೆ?ಎಂಬ ಪ್ರಶ್ನೆ ಮನಸ್ಸಿನಲ್ಲಿ ಏಳುತ್ತಿತ್ತು.ಸಮಾಜ ರಾತ್ರಿ ಹೊತ್ತು ಹೊರಹೋಗದಂತೆ ತಡೆಯುತ್ತದೆ.ಅಡುಗೆ ಕೆಲಸಗಳಲ್ಲಿ ಹೆಚ್ಚು ತೊಡಗಿಸುವಂತೆ ಸೂಚಿಸುವುದನ್ನು ಹಂಚಿಕೊಂಡಿದ್ದಾರೆ.ಇದರೊಂದಿಗೆ ಕೆಲವು ಶಿಕ್ಷಕಿಯರು ಮಹಿಳಾ ಅಧಿಕಾರಿಗಳು ಹೆಣ್ಣು ಎಂದು ಹೆಚ್ಚಿನ ಅವಧಿಯ ಕೆಲಸದ ಹೊರೆಯ ವಿನಾಯ್ತಿಯನ್ನು ಪಡೆದಿಲ್ಲ ಹಾಗು ಅದಕ್ಕೆ ಇಚ್ಚಿಸುವುದೂ ಇಲ್ಲ ಎಂಬ ಅನಿಸಿಕೆ ವ್ಯಕ್ತಿಪಡಿಸಿದ್ದಾರೆ.

ಇದರೊಂದಿಗೆ ಶಿಕ್ಷಕರು ಬಾಲಕಿಯರ ಮೇಲೆ ಮೃದು ಧೋರಣೆ ಹಾಗೂ ಪೋಷಕರು ಹೆಚ್ಚಿನ ಗಮನ ನೀಡಬೇಕು ಅವಕಾಶ ಸಿಕ್ಕದ್ದರಿಂದಲೇ ಪ್ರಸ್ತುತ ಮಹಿಳಾ ಸಾಧಕಿಯರಿರುವುದು ಸಾಧ್ಯವಾಗಿದೆ ಅಂತಹ ಅವಕಾಶ ಒದಗಿಸಲು ತಿಳಿಸಿದ್ದಾರೆ.

ಪುರುಷರ ರಕ್ತದ ಕಣ ಕಣದಲ್ಲೂ ಮೇಲು ಎಂಬ ಭಾವನೆ ಇದೆ ಎಂಬ ಆಕ್ಷೇಪವನ್ನೂ ಹಾಗೂ ಜವಾಬ್ದಾರಿಯುತ ಕೆಲಸ ಬಾಲಕರಿಗೆ ನೀಡುತ್ತಾರೆ. ಇದರೊಂದಿಗೆ ಬಾಲಕಿಯರಿಗೆ ಕ್ರೀಡೆ, ಹಾಸ್ಟೆಲ್ ಸೇರುವಿಕೆ, ಬಸ್ಸುನಲ್ಲಿ ತಿರುಗಾಡಲು ನಿರಾಕರಿಸುವುದನ್ನು  ಕ್ರಮೇಣ ಒಪ್ಪಿಕೊಳ್ಳುವುದನ್ನು ಸ್ಮರಿಸುತ್ತಾರೆ ಒಟ್ಟಾರೆ ಕಿಶೋರಾವಸ್ಥೆಯ ನಂತರ ಗಂಡಿನಷ್ಟು ಸ್ವಾತಂತ್ರ್ಯ ಹೆಣ್ಣಿಗಿಲ್ಲದಿರುವುದು ಇದರೊಂದಿಗೆ ಹೆಣ್ಣು ಮಗಳಿಗೆ ಸಿಗುವಷ್ಟು ಸ್ವಾತಂತ್ರ್ಯ ಆಕೆ ಹೆಂಡತಿ, ಸೊಸೆಯಾದಾಗ  ಸಿಗುವುದಿಲ್ಲ ಎಂಬ ಅಭಿಪ್ರಾಯಗಳನ್ನು ಹಂಚಿಕೊಂಡಿರುತ್ತಾರೆ.ಕೆಲವು ಮಹಿಳೆಯರು ಅವರ ಜೀವನದ ಕಹಿ ನೆನಪುಗಳನ್ನು ಹಂಚಿಕೊಳ್ಳುತ್ತಾರೆ; ನಾನು ಹುಟ್ಟಿ 15 ದಿನದ ನಂತರ ನನ್ನ ತಂದೆ ನನ್ನನ್ನು ನೋಡಿದ್ದು? ಹೆಣ್ಣು ಶಿಶು ಜನನದ ನಂತರದ ಸಮಾಜದ ಧೋರಣೆಗಳನ್ನು ಹೊರಹಾಕಿದ್ದಾರೆ. ಜೀವನ ನಿರ್ವಹಣೆಗೆ ಉದ್ಯೋಗ ಆದರೆ ಒತ್ತಡವನ್ನು ನಿರ್ವಹಣೆಯ ಪ್ರಶ್ನೆಗಳನ್ನು ಎತ್ತಿದ್ದಾರೆ, ಉದ್ಯೋಗ, ಶಿಕ್ಷಣದ ಅವಕಾಶಗಳು ಮತ್ತು ಕುಟುಂಬದ ನಿರ್ವಹಣೆ ಹೇಗೆ? ಹೆಣ್ಣು ಮಕ್ಕಳಿಗೆ ಸಮಯದ ಚೌಕಟ್ಟು ಇದೆ ಸಾಧನೆಗೆ ಇರುವ ಸವಾಲಿನ ಪ್ರಶ್ನೆಗಳನ್ನು ಎತ್ತಿದ್ದಾರೆ. ಕೆಲವು ಸಮಸ್ಯೆಗಳಿಗೆ ಪ್ರತಿಕ್ರಿಯಿಸುತ್ತಾ; ಹೆಚ್ಚಿನ ಮಾಹಿತಿ ದೊರೆತರೆ ಸಂಕುಚಿತ ಭಾವನೆ ದೂರವಾಗುತ್ತದೆ ಕೆಲವು ಶಿಕ್ಷಕರು ಪ್ರಸ್ತುತ ಸಮಾಜದಲ್ಲಿನ ಸಮೂಹ ಮಾದ್ಯಮದಲ್ಲಿ ಭಿತ್ತರಗೊಳ್ಳುವ ಘಟನೆಗಳಿಗೆ ಹೀಗೆ

ಪ್ರತಿಕ್ರಿಯಿಸುತ್ತಾರೆ, ಹಿಂದಿನ ಕಾಲದಲ್ಲಿದ್ದಂತೆ ಮನೆಗಷ್ಟೇ ಸೀಮಿತ ವಿದ್ದರೆ ಈಗಿರುವ ಅತ್ಯಾಚಾರ ಸಮಸ್ಯೆಯನ್ನು ನೀಗಿಸಬಹುದೆಯೋ?ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

## 2. ಲಿಂಗಾಧಾರಿತ ಸಮಾನತೆಯ ಪ್ರಯತ್ನಗಳಿಗೆ ಇರುವ ಅಡೆತಡೆಗಳು:

ಅನಕ್ಷರತೆ, ಮೂಢನಂಬಿಕೆ, ಸ್ತ್ರೀ ನಾಲ್ಕು ಗೋಡೆಗೆ ಸೀಮಿತ ಎಂಬ ಮೌಢ್ಯದ ಜಿಡ್ಡುಗಟ್ಟಿದ ಮನೋಭಾವನೆ. ಬಾಲಕಿಯರು ಬೇರೆ ಮನೆಗೆ ಹೋಗುವವರು ಎಂಬ ಭಾವನೆಯೊಂದಿಗೆ ಬಾಲಕರಿಗೆ ಇವರು ಸಮಾನರಲ್ಲ ಎಂಬ ಆಲೋಚನೆಯನ್ನು ಹೊಂದಿದ್ದಾರೆ. ಸಮೂಹ ಮಾಧ್ಯಮಗಳು ಬಾಲಕಿಯ ಅಸಹಾಯಕತೆಯನ್ನು ವೈಭವೀಕರಿಸಲ್ಪಟ್ಟ ದೃಶ್ಯಗಳ್ನು ಪ್ರಸಾರ ಮಾಡುತ್ತಿರುವುದು ಪೋಷಕರು ಮತ್ತು ಬಾಲಕಿಯರಿಗೆ ಆತ್ಮ ವಿಶ್ವಾಸವನ್ನು ತಗ್ಗಿಸುತ್ತಿದೆ ಎಂಬ ವಿಚಾರವನ್ನು ಹಲವು ಬಾರಿ ಪ್ರಸ್ಥಾಪಿಸಿರುತ್ತಾರೆ.ಅನುಭವ ಹಂಚಿಕೆಯಲ್ಲಿ ಜಿಲ್ಲಾ ಹಂತದ ಕೆಲವು ಅಧಿಕಾರಿಗಳು ಸಂವಾದದಲ್ಲಿ ಮಕ್ಕಳನ್ನು ಕುರಿತು ಪೋಷಕರ ಸುರಕ್ಷತಾ ಮನೋಭಾವನೆಯುಬಾಲಕಿಯರಿಗೆ ಹೆಚ್ಚಿನ ಶೈಕ್ಷಣಿಕ ಅವಕಾಶ ನೀಡಲು ಪೋಷಕರು ಹಿಂಜರಿಯಲು ಮುಖ್ಯ ಕಾರಣವೆಂದು ತಿಳಿಸುತ್ತಾರೆ.ಬಾಲಕಿಯರ ಬಗ್ಗೆ ಇರುವ ತಾತ್ಸಾರ ಮೌಢ್ಯ ಆಚಾರಗಳು, ಬಾಲಕ ಬಾಲಕಿಯರ ದೈಹಿಕ ಶಕ್ತಿ ಮನೋಭಾವನೆಯಲ್ಲಿ ವ್ಯತ್ಯಾಸಗಳಿವೆ, ಸಮಾಜದ ದೃಷ್ಟಿಕೋನ ಮತ್ತು ಪೋಷಕರ ಅಭಿಪ್ರಾಯಗಳು, ಸಂಪ್ರದಾಯಗಳು, ಸಹೋದ್ಯೋಗಿಗಳು ಸಹಕರಿಸದಿರುವುದು, ಸಂಘ ಸಂಸ್ಥೆಗಳು ಮಧ್ಯ ಪ್ರವೇಶಿಸುವುದು, ಲೋಕ ರೂಢಿಗಳು ಮೂಢ ನಂಬಿಕೆ ಪದ್ಧತಿ ಸಂಪ್ರದಾಯಗಳು, ಕೆಲವು ವಿಚಾರಗಳಲ್ಲಿ ಹೆಣ್ಣು ಮಕ್ಕಳು ಧೈರ್ಯದಿಂದ ಮುನ್ನುಗ್ಗುವುದು ಕಷ್ಟಸಾಧ್ಯ, ಶೈ.ಪ್ರವಾಸ ಕ್ರೀಡೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮುಕ್ತವಾಗಿ ಭಾಗವಹಿಸಲು ಪೋಷಕರಿಂದ ಅಸಮ್ಮತಿ, ಧರ್ಮವೇ ಕೆಲವು ನಿರ್ಬಂಧ ಹೇರಿರುವುದು,ಪುರುಷ ಪ್ರಧಾನ ಸಮಾಜದಲ್ಲಿ ಮನೋಧೋರಣೆ, ಪೋಷಕರು ಮಕ್ಕಳಲ್ಲಿ ಅಜ್ಞಾನ, ವಿಚಾರ ವಿನಿಮಯದ ಕೊರತೆ,ಹೆಣ್ಣು ಮಕ್ಕಳು ಮನೆಯಲ್ಲಿ ಅನುಭವಿಸುವ ತೊಂದರೆಗಳು, ಹೆಣ್ಣು ಮಕ್ಕಳಿಗೆ ಅವರ ಬಗ್ಗೆ ನಂಬಿಕೆ ಇಲ್ಲದಿರುವುದು,ತಿಳುವಳಿಕೆ ಮಾಹಿತಿಯ ಕೊರತೆ,ಬಾಲಕರಷ್ಟು ಸ್ವಾತಂತ್ರ್ಯ ಹೆಣ್ಣು ಮಕ್ಕಳಿಗಿಲ್ಲದಿರುವುದು, ಸಾಹಸ ಕಾರ್ಯಕ್ಕೆ ಹೆಣ್ಣು ಮಕ್ಕಳಿಗೆ ಅವಕಾಶವಿರುವುದಿಲ್ಲ, ಪತ್ರಿಕೆ ಮುದ್ರಿತ ವಿಚಾರಗಳಿಂದ ಪೋಷಕರಿಗೆ ಹೆಣ್ಣು ಮಕ್ಕಳ ರಕ್ಷಣೆಯ ಆತಂಕ, ಮೌಢ್ಯ ಸಂಕುಚಿತ ಭಾವನೆಅಬಲೆ ಅಸಮರ್ಥಳು ಎಂಬುದು, ಆಕೆ ಪ್ರಶ್ನಿಸದಿರುವುದು,ಧರ್ಮ ದ್ವಿತೀಯ ದರ್ಜೆ ನೀಡಿರುವುದು. ಬಾಲಕಿಯರು ಋತುಮತಿಯಾದ ಮೇಲೆ ಮುಕ್ತವಾಗಿ ಬೆರೆಯಲು ಪೋಷಕರ ಅಭಿಪ್ರೇರಣೆಯ ಕೊರತೆ ಹಾಗೂ ಇದೇ ಮುಂದುವರಿಯುವುದು.ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಇರುವ ಕಂದಾಚಾರಗಳುಆರ್ಥಿಕರಾಜಕೀಯ ದೃಷ್ಟಿಕೋನಸಮಾಜದಲ್ಲಿ ಬದಲಾಗಬೇಕಿದೆ ಎಂಬ ನಿಲುವುಗಳನ್ನು ಹೊಂದಿದ್ದಾರೆ.

## 3. ಲಿಂಗಾಧಾರಿತ ಅಸಮಾನತೆಯ ಅಡಚಣೆಯನ್ನು ನಿಭಾಯಿಸುವ ತಂತ್ರಗಳು:

ಪ್ರಥಮತ: ಮನಸ್ಥಿತಿ ಬದಲಾಯಿಸಿಕೊಳ್ಳುವುದು, ಇದಕ್ಕಾಗಿ ಎಲ್ಲರೂ ಸಾಕ್ಷರರಾಗಬೇಕು.ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಿಕೊಳ್ಳುವುದು ಬಹು ಮುಖ್ಯ.ವಿಶೇಷ ಸರ್ಕಾರಿ ಸೌಲಭ್ಯ ಒದಗಿಸುವುದು, ಮೀಸಲಾತಿ, ಹೆಣ್ಣು ಮಕ್ಕಳಲ್ಲಿರುವ ಹೆದರಿಕೆ ನಾಚಿಕೆ ಅಧೈರ್ಯ ಇವು ಸಮಾಜದಲ್ಲಿರುವ ಸನ್ನಿವೇಶದಿಂದ ಸೃಷ್ಟಿಯಾದವುಗಳು ಅವುಗಳನ್ನು ಮೆಟ್ಟಿನಿಲ್ಲುವಂತಹ ಪ್ರೋತ್ಸಾಹ ಭರವಸೆ ಉತ್ಸಾಹ ಧೈರ್ಯ ತುಂಬುವುದು. ದೃಢ ಸಂಕಲ್ಪ ಮಾಡುವುದನ್ನು ಕಲಿಸುವುದು.ತಾತ್ಸಾರವನ್ನು ವಿರೋಧಿಸುವ ಮೆಟ್ಟಿ ನಿಲ್ಲುವ ಗುಣವನ್ನು ಅವರಲ್ಲಿ ಬೆಳೆಸುವುದು.ಮಕ್ಕಳಿರುವಾಗಲೇ ಬಾಲಕ ಬಾಲಕಿಯರಿಬ್ಬರೂ ಸಮಾನರೆಂಬ ಭಾವನೆಯನ್ನು

ಮಕ್ಕಳಿರುವಾಗಲೇ ಬೆಳೆಸುವುದು.ಎಲ್ಲಾ ಚಟುವಟಿಕೆಗಳಲ್ಲೂ ಭಾಗವಹಿಸಲು ಅವಕಾಶ ಇಬ್ಬರೂ ಸಮಾನವಾಗಿ ನೀಡುವುದು.ಅವಶ್ಯಕತೆ ಇದ್ದರೆ ತರಬೇತಿಯನ್ನು ನೀಡುವುದು.ಮಕ್ಕಳಿಗೆ ತಮಗೆ ಸಿಕ್ಕ ವೇದಿಕೆಯನ್ನು ಸೂಕ್ತವಾಗಿ ಬಳಸಿಕೊಳ್ಳುವುದನ್ನು ಕಲಿಸುವುದು.ಮಹಿಳಾ ಸಾಧಕಿಯರ ಪರಿಚಯದೊಂದಿಗೆ, ಬಾಲಕಿಯರಿಗೂ ತಾವು ಸಾಧಿಸಬಲ್ಲೇವು ಎಂಬ ಭರವಸೆಯೊಂದಿಗೆ ಬೆಳೆಸುವುದು.ಸಮಾಜದಲ್ಲಿ ಸಾಕಷ್ಟು ಅವಕಾಶಗಳನ್ನು ಇಬ್ಬರೂ ಮಕ್ಕಳಿಗೆ ಒದಗಿಸುವುದು ನಂತರ ಶಾಲೆ ವ್ಯವಸ್ಥೆಗೆ ಬಂದ ನಂತರ ಶಿಕ್ಷಕರು ಅವರ ಧೋರಣೆಗಳನ್ನು ಗಟ್ಟಿಗೊಳಿಸುವಂತಹ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಂಡು ಸಂಪೋಷಿಸುವಂತಾಗಬೇಕು.ಯಾವ ವಿಷಯವಾದರೂ ಸಹ ಪರಾಮರ್ಶಿಸಿ ಒಪ್ಪಿಕೊಳ್ಳುವಂತಹ ಮನಸ್ಥಿತಿ ಶಾಲೆಯು ಹುಟ್ಟು ಹಾಕಬೇಕು. ವಿರೋಧಿಸುವ ಮನಗಳಿಗೆ ತಿಳಿ ಹೇಳಿ ಬದಲಾದ ಸಮಾಜಿಕ ವ್ಯವಸ್ಥೆಯ ಪರಿಚಯ ಮಾಡಿಕೊಡುವುದು. ಸಮಸ್ಯೆಗಳನ್ನು ಸಂವಹನದ ಮೂಲಕ ಪರಿಹರಿಸುವುದು.ಶಿಕ್ಷಣ, ಸಮುದಾಯ ಸದಸ್ಯರಿಗೆ ಜಾಗೃತಿ, ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ, ಧೋರಣೆಯಲ್ಲಿನ ಬದಲಾವಣೆಯನ್ನು ಮನೆಯಿಂದಲೇ ಆರಂಭಿಸಬೇಕು, ಶಾಲೆ ಮನೆಯೆರಡನ್ನೂ, ಮಕ್ಕಳನ್ನು ಸಮಾನರಾಗಿಕಾಣುವುದು.ಪಠ್ಯ ಸಹ ಪಠ್ಯದಲ್ಲಿ ಸಮಾನತೆ ಬಿಂಬಿಸುವ ಚಟುವಟಿಕೆಗಳಿರಬೇಕು.ಎಲ್ಲಾ ರಂಗದಲ್ಲೂ ಮಹಿಳೆಯರ ಸಾಧನೆಯನ್ನು ಪ್ರಚುರಪಡಿಸುವುದು.

ಈ ಮೇಲ್ಕಂಡ ತಂತ್ರಗಳೊಂದಿಗೆ ನಮ್ಮನ್ನು ಬೌದ್ಧಿಕ ಚಿಂತನೆಗೊಳಪಡಿಸಿಕೊಳ್ಳಬೇಕಿದೆ.ಧನಾತ್ಮಕ ಮನೋಭಾವನೆಗಳು, ಶಿಕ್ಷಣ, ಹೆಚ್ಚಿನ ಅವಕಾಶಗಳು, ವೈಜ್ಞಾನಿಕ ಮನೋಭಾವನೆಗಳು. ಧರ್ಮದ ಉನ್ನತ ನಾಯಕರುಗಳುಮಹಿಳೆ ಪುರುಷರಿಗೆ ಚಿಂತನೆಗೆ ಒಳಪಡಿಸುವಂತಹ ಉಪನ್ಯಾಸಗಳನ್ನು ನೀಡುವುದು.ದೃಷ್ಟಿಕೋನ ಬದಲಿಸುವ ಜಾಗೃತಿಗಳು, ಮಾಹಿತಿಗಳು, ತರಬೇತಿಗಳು ಅತ್ಯಗತ್ಯ.ಈ ಕಾರ್ಯಕ್ಕೆ ಎನ್‌ಜಿಓ ಸ್ಥಳೀಯ ಸಂಘಟನೆಗಳನ್ನು ಸಮರ್ಥವಾಗಿ ಬಳಸಿಕೊಳ್ಳಬಹುದು.ಶಾಲಾ ಮಕ್ಕಳ ದೃಷ್ಟಿಕೋನವನ್ನು ಶಿಕ್ಷಕರು ಬದಲಿಸಿದರೆ ಆ ಮಕ್ಕಳು ಅವರ ಪೋಷಕರುಗಳಲ್ಲಿರುವ ಮನೋಭಾವನೆಯನ್ನು ವಿಮರ್ಶಿಸಲು ಪ್ರೇರೇಪಿಸಬಹುದು. ತಂದೆ ತಾಯಿಗಳಿಗೆ ಆಪ್ತ ಸಮಾಲೋಚನೆ, ಅಲ್ಲದೆ ಮಹಿಳೆಯರಿಗೆ ಸ್ವ ಪರಿಕಲ್ಪನೆ ಮೂಡಿಸಲು ಆಪ್ತ ಸಮಾಲೋಚನೆಗಳು, ಪ್ರತ್ಯೇಕವಾಗಿ ಕೌನ್ಸಿಲಿಂಗ್, ಅಭಿಪ್ರಾಯ ಹಂಚಿಕೆಗೆ ಮುಕ್ತ ಅವಕಾಶಗಳು,ವಿದ್ಯಾರ್ಥಿ ಪೋಷಕರು ಶಿಕ್ಷಕರು ಈ ಮೂರು ವ್ಯಕ್ತಿಗಳಿಗೂ ಲಿಂಗ ಸಮಾನತೆಯ ಸಂವಾದಗಳನ್ನು ಏರ್ಪಡಿಸಬೇಕು.ಇವರಿಗೆ ತಾರತಮ್ಯದಿಂದಾಗುವ ತೊಂದರೆಗಳು ಇದರ ಪರಿಣಾಮದ ತಿಳುವಳಿಕೆ ನೀಡಬೇಕು.

ಸಮೂಹ ಮಾಧ್ಯಮಗಳು ಹೆಣ್ಣು ಮಕ್ಕಳು ಪೋಷಕರು ಸಮಾಜದ ಆತ್ಮ ಸ್ಥೈರ್ಯ ಕುಗ್ಗಿಸುವಂತಹ ಸನ್ನಿವೇಶಗಳನ್ನು ಬಿತ್ತರಿಸದಂತೆ ಸೆನ್ಸಾರ್ ವ್ಯವಸ್ಥೆ ತುರ್ತಾಗಿ ಅವಶ್ಯಕವಾಗಿದೆ.ತಪ್ಪು ಮಾಡಿದವರನ್ನು ಕಠಿಣ ಶಿಕ್ಷೆಗೆ ಒಳಪಡಿಸುವಂತಹ ಹಾಗೂ ಸಾಮಾಜಿಕ ಅವಹೇಳನ ಎಂಬ ಸಂದೇಶ ನೀಡುವ ವಿಷಯವನ್ನು ತಪ್ಪದೇ ಮಾಧ್ಯಮಗಳು ಚರ್ಚಿಸಬೇಕು ಇಡೀ ವ್ಯವಸ್ಥೆಯ ಅಲೋಚನೆ ಬದಲಾಗಬೇಕಿದೆ

ಸಾಮಾಜಿಕ ಅರಿವಿನ ಕಾರ್ಯಕ್ರಮಗಳನ್ನು ಹೆಚ್ಚೆಚ್ಚು ಆಯೋಜಿಸುವುದು ಶಾಲೆಯ ಎಸ್ ಡಿ ಎಂಸಿ ಸ್ಥಳೀಯ ಸಂಸ್ಥೆ ಒಳಗೊಂಡಂತೆ ಎಲ್ಲಾ ಜನಪ್ರತಿನಿಧಿಕ ಸಂಸ್ಥೆಗಳು ಸರ್ಕಾರಿ ಸಂಸ್ಥೆಗಳು ಈ ಕೆಲಸಕ್ಕೆ ಉತ್ತರದಾಯಿಗಳಾಬೇಕು

ದೃಷ್ಟಿಕೋನ ಮಾರ್ಪಡಿಸುವ ಶಿಸ್ತಿನ ಜ್ಞಾನ ಸಂವೇದನೆಗಳನ್ನು ಸಂವೇಗಾತ್ಮಕವಾಗಿ ಭಾವಿಸದೆ ಬೌದ್ಧಿಕ ಚಿಂತನೆಗೊಳಪಡಿಸಬೇಕು.ಹೆಣ್ಣು ಗಂಡಿಗೆ ಪ್ರತ್ಯೇಕ ಕೌನ್ಸಿಲಿಂಗ್‌ಅಭಿಪ್ರಾಯ ಹಂಚಿಕೊಳ್ಳುವ ಮುಕ್ತ ಅವಕಾಶಮಾರ್ಗದರ್ಶನ ಆಪ್ತ ಸಲಹೆ ಘಟಕ ಸ್ಥಾಪಿಸಿ ಸಹಾಯ ನೀಡುವುದುಎಲ್ಲಾ ಚಟುವಟಿಕೆಯಲ್ಲಿ

ಇಬ್ಬರನ್ನು ಸಮಾನವಾಗಿ ತೊಡಗಿಸುವುದುಕೌಟುಂಬಿಕ ಮತ್ತು ಶಿಕ್ಷಣ ಎರಡು ವ್ಯಕ್ತಿತ್ವ ವಿಕಸನಕ್ಕೆ ಅವಕಾಶ ನೀಡುವುದು.

## 4. ಲಿಂಗ ಸಮಾನತೆಗಾಗಿ ವ್ಯಕ್ತಿಗತ ಪ್ರಯತ್ನಗಳು:

ಮಹಿಳೆಯರು ಮತ್ತು ಪುರುಷರು ವ್ಯಕ್ತಿಗತವಾಗಿ ನಿರ್ವಹಿಸಿರುವ ಪ್ರಯತ್ನಗಳನ್ನು ಪ್ರತ್ಯೇಕವಾಗಿ ವಿಶ್ಲೇಷಿಸಲಾಗಿದೆ

**ಮಹಿಳೆಯರು:**

**ವೈಯಕ್ತಿಕವಾಗಿ:** ಮಹಿಳೆ ಕಾರಣ ನೀಡದೆ ವೃತ್ತಿಕಾರ್ಯ ನಿರ್ವಹಣೆ ಮಾಡುತ್ತಿದ್ದೇನೆ. ಬೇರೆ ಸ್ಥಳಗಳಿಗೆ ಪುರುಷರಂತೆ ಮನೆಯವರ ಸಹಕಾರದೊಂದಿಗೆ ಒಬ್ಬಳೇ ಹೋಗಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ ಎಂಬ ಪ್ರತಿಕ್ರಿಯೆ ನೀಡಿದ್ದಾರೆ.ಅಲ್ಲದೆ ಹೆಚ್ಚುವರಿ ಹೊರೆ ಹೆಣ್ಣು ಎಂಬ ಕಾರಣಕ್ಕೆ ನಿರಾಕರಿಸದೆ ಹೆಚ್ಚು ಅವಧಿಯನ್ನು ಗೃಹ ಕಾರ್ಯ ನಂತರವೂ ನಿರ್ವಹಿಸಿದ್ದೇನೆ.

**ಸಾಮಾಜಿಕ ವ್ಯವಸ್ಥೆ ಸುಧಾರಣೆಗಾಗಿ**: ಭೇದ ಭಾವ ವಿಲ್ಲದೆ ಕೆಲಸ ಹಂಚಿಕೆ,ಸಭೆ ಸಮಾರಂಭದಲ್ಲಿ ಮಕ್ಕಳಿಗೆ ಸಮಾನವಾಗಿ ಜವಾಬ್ದಾರಿ ಹಂಚಿದ್ದೇನೆ. ವೇದಿಕೆಯಲ್ಲಿ ಮಾತನಾಡುವುದು, ಪುರುಷ ಶಿಕ್ಷಕರಂತೆ ತೊಡಗಿಸಿಕೊಂಡಿದ್ದೇನೆ,ಆಟ ಕಬ್ಬಡ್ಡಿ ವಾಲಿಬಾಲ್ ಆಟವನ್ನು ಕಲಿಸಿದ್ದೇನೆ. ತಾರತಮ್ಯವನ್ನು ಖಂಡಿಸಿದ್ದೇನೆ. ಸಹೋದ್ಯೋಗಿಗಳಿಗೆ ವಿದ್ಯಾರ್ಥಿನಿಯರಿಗೆ ಸಲಹೆ ಸೂಚನೆ ನೀಡಿ ಜಾಗೃತಿಗೊಳಿಸಿದ್ದೇನೆ.

**ಪುರುಷರು:**

**ಸಾಮಾಜಿಕ ವ್ಯವಸ್ಥೆ ಸುಧಾರಣೆಗಾಗಿ**: ಗಂಡು ಹೆಣ್ಣು ನಡುವಿನ ತಾರತಮ್ಯಕ್ಕೆ ತಿಳಿ ಹೇಳಿ ಸರಿಪಡಿಸುತ್ತೇನೆ. ಯೋಗ ವ್ಯಾಯಾಮ ಕ್ರೀಡೆ ಶಾಲಾ ಸಂಸತ್ತು ರಚನೆಯಲ್ಲಿ ಸಮಾನ ಅವಕಾಶ ಕಲಪಿಸಿರುತ್ತೇನೆ. ಸಹೋದ್ಯೋಗಿಗಳು ಮತ್ತು ಪೋಷಕರು ಹೊಂದಿರುವ ಪೂರ್ವಗ್ರಹಭರಿತ ಆಲೋಚನೆಗಳಿಗೆ ಸಲಹೆಯನ್ನು ನೀಡಿರುತ್ತೇನೆ. ಮಕ್ಕಳಿಗೆ ಸಮಾನ ಮಾನ್ಯತೆ ಹಾಗೂ ಅವಕಾಶವನ್ನು ನೀಡುತ್ತೇನೆ ಎಂಬ ಅನಿಸಿಕೆ ವ್ಯಕ್ತಪಡಿಸಿರುತ್ತಾರೆ. ಪ್ರೌಢಶಾಲೆಯ ಬಹಳಷ್ಟು ಶಿಕ್ಷಕರು ಹೀಗೆ ಪ್ರತಿಕ್ರಿಯಿಸಿದ್ದಾರೆ.8ನೇ ತರಗತಿಗೆ ಶಾಲೆ ಬಿಡುವ ಬಾಲಕಿಯರು ಹಾಗೂ ಪೋಷಕರ ಮನ ಒಲಿಸಿ ವಿದ್ಯಾಭ್ಯಾಸ ಮುಂದುವರೆಸಲು ಸದಾ ಪ್ರಯತ್ನಿಸಿರುವುದನ್ನು ಸ್ಮರಿಸಿದ್ದಾರೆ.

ಶಾಲಾ ಸನ್ನಿವೇಶದಲ್ಲಿ ಅವಕಾಶಗಳು ಮತ್ತು ತರಗತಿ ಪ್ರಕ್ರಿಯೆಯಲ್ಲಿ ಲಿಂಗ ಅಸಮಾನತೆ ಚರ್ಚೆ ಬಂದಾಗ ಶಿಕ್ಷಕರು ಹಾಗೂ ಅಧಿಕಾರಿಗಳು ಕೆಲವು ಸನ್ನಿವೇಶಗಳನ್ನು ಪಟ್ಟೀಕರಿಸಿದ್ದಾರೆ:

ಗುಂಪು ಚಟುವಟಿಕೆಯಲ್ಲಿ ಸಮಾನ ಅವಕಾಶ, ದಿನಾಚರಣೆ ಸಮಾರಂಭದ ಭಾಷಣದಲ್ಲಿ ವಿಷಯ ಪ್ರಸ್ತಾಪಿಸಿರುವುದಾಗಿ ಪ್ರತಿಕ್ರಿಯಿಸಿದ್ದಾರೆ.ಹೆಣ್ಣು ಮಕ್ಕಳ ಕೀಳರಿಮೆ ಕಡಿಮೆ ಮಾಡಿ ಆತ್ಮಸ್ಥೈರ್ಯ ತುಂಬಿರುವುದು, ಬಾಲಕಿ ಹಾಗೂ ಮಹಿಳೆಯರಿಗೆ ಇರುವ ವಿಶೇಷ ಸೌಲಭ್ಯಗಳನ್ನು ಧನಾತ್ಮಕ ಪರಿಭಾವಿಸಿ ಮಾತನಾಡುತ್ತಿರುವುದು, ಬಾಲಕಿಯರಿಗೆ ಸಾಮರ್ಥ್ಯವಿದ್ದಾಗಲೂ ಪೋಷಕರ ವಿರೋಧವನ್ನು ಸಲಹೆ ನೀಡಿ ಸರಿಪಡಿಸಿರುವುದನ್ನು ಸ್ಮರಿಸಿದ್ದಾರೆ.

## 5. ಶಾಲೆಯಲ್ಲಿ ಬಾಲಕ ಬಾಲಕಿಯರಿಬ್ಬರ ವ್ಯಕ್ತಿತ್ವ ವಿಕಸನಕ್ಕೆ ಅವಕಾಶ ನೀಡುತ್ತಿರುವ ಕ್ಷೇತ್ರಗಳು:

ವ್ಯಕ್ತಿಗತ ಪ್ರಯತ್ನದಲ್ಲಿಯೇ ಶಾಲೆಯಲ್ಲಿ ಬಾಲಕ ಬಾಲಕಿಯರಿಗೆ ವ್ಯಕ್ತಿತ್ವ ವಿಕಸನಕ್ಕೆ ಅವಕಾಶ ನೀಡುತ್ತಿರುವುದನ್ನು ಸ್ಪಷ್ಟಪಡಿಸಿರುವುದಲ್ಲದೆ, ಪ್ರತ್ಯೇಕವಾಗಿಯೂ ಕೇಳಲ್ಪಟ್ಟ ಪ್ರಶ್ನೆಗೆ ಪ್ರತಿಕ್ರಿಯಿಸಿದ್ದಾರೆ.ಶಾಲೆಯಲ್ಲಿ ಬಾಲಕ ಬಾಲಕಿಯರಿಬ್ಬರ ವ್ಯಕ್ತಿತ್ವ ವಿಕಸನಕ್ಕೆ ಅವಕಾಶ ನೀಡಲಾಗುತ್ತಿದ್ದೆಯೇ? ಪ್ರಶ್ನೆಗೆಶೇಕಡ 80 ರಷ್ಟು ಸಮಾನ ಅವಕಾಶವಿರುವುದಾಗಿ ಹಾಗೂ ಶೇಕಡ 20ರಷ್ಟು ಪೋಷಕರು, ಶಿಕ್ಷಕರು, ಸಮಾಜದ ಮನೋಧೋರಣೆ ಋಣಾತ್ಮಕವಾಗಿದೆ. ಎಂಬ ನಿಲುವನ್ನು ವ್ಯಕ್ತಪಡಿಸಿದ್ದಾರೆ.ದೇಹ, ಬುದ್ದಿ, ಮನಸ್ಸು ವಿಕಸನಕ್ಕೆ ಸಮಾನ ಅವಕಾಶ ನೀಡಲು ಸಂಪನ್ಮೂಲ ವ್ಯಕ್ತಿಗಳಿಂದ ವ್ಯಕ್ತಿತ್ವ ವಿಕಸನಕ್ಕೆ ವೃತ್ತಿ ಮಾರ್ಗದರ್ಶನ ಹಾಗೂ  ಆಪ್ತ ಸಲಹೆಗೆ ಒಳಪಡಿಸುವುದು ಮತ್ತು ಶೈ.ಮನೋವಿಜ್ಞಾನ ಅನ್ವಯಿಸಿಕೊಂಡು ಮಕ್ಕಳನ್ನು ಹೆಚ್ಚು ಅರ್ಥೈಸಿಕೊಳ್ಳುವುದು.ಪ್ರತಿಭಾ ಕಾರಂಜಿಯಲ್ಲಿ ಹೆಚ್ಚಿನ ಭಾಗವಹಿಸುವಿಕೆಗೆ ಅವಕಾಶ ಕಲ್ಪಿಸಲಾಗಿದೆ. ಮೀನಾಕಾರ್ಯಕ್ರಮ, ವಿಶೇಷ ಪ್ರೋತ್ಸಾಹಧನಗಳು; ವಿದ್ಯಾರ್ಥಿವೇತನ, ಮೀಸಲಾತಿ, ಶುಲ್ಕ ವಿನಾಯಿತಿ, ಶಾಲೆಯ ಚಟುವಟಿಕೆಗಳಲ್ಲಿ ಸಮಾನ ಅವಕಾಶ ನೀಡುತ್ತಿರುವುದು.ತರಗತಿ ಪ್ರಕ್ರಿಯೆಯಲ್ಲಿ ಸಮಾನ ಭಾಗವಹಿಸುವ ಅವಕಾಶಗಳು, ಆಟಗಳನ್ನು ಹೆಣ್ಣು ಗಂಡು ಎಂದು ವರ್ಗೀಕರಿಸದೆ; ಎಲ್ಲಾ ಆಟ ಎಲ್ಲರಿಗೂ ಆಡಲು ಅವಕಾಶ ನೀಡುತ್ತಿರುವುದನ್ನು ಸ್ಮರಿಸಿದ್ದಾರೆ.

ಮಕ್ಕಳಿಗೆ ಶಾಲಾ ಸಂಘಟನಾ ಕಾರ್ಯಗಳಲ್ಲಿ ತೊಡಗಿಸುವುದು. ತರಗತಿ ಪ್ರಕ್ರಿಯೆಯಲ್ಲಿ ಅವಕಾಶ ನೀಡಿಕೆ,ಸ್ಕೌಟ್ಸ್ ಗೈಡ್ ಎನ್‌ಸಿಸಿ  ಎನ್‌ಎಸ್‌ಎಸ್ ಕ್ರೀಡೆ ಯೋಗ ಕರಾಟೆ ಸಮವಸ್ತ್ರಗಳು,  ಶಾಲೆ ಮಂತ್ರಿ ಮಂಡಲ, ಹಿರೇಮಣಿ ನೇಮಕ, ಬಾಲಕಿಯರೇ ಇರುವ  ಶಾಲೆಗಳಲ್ಲಿ  ಎಲ್ಲಾ ಕೆಲಸಗಳನ್ನು; ಉದಾ: ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಪಥ ಸಂಚಲನೆ ಬಾವುಟ ಸಿದ್ಧಪಡಿಸುವುದರಿಂದ ಆರಂಭಿಸಿ ಎಲ್ಲಾ ಕಾರ್ಯಗಳನ್ನು  ಹೆಣ್ಣು ಮಕ್ಕಳೇ ನಿರ್ವಹಿಸುತ್ತಾರೆ. ಸಹ ಶಿಕ್ಷಣ ವ್ಯವಸ್ಥೆಯಲ್ಲೂ ಸಮಾನ ಕಾರ್ಯ ನಿರ್ವಹಣೆಯು ಕೆಲವು ಶಾಲೆಗಳಲ್ಲಿ ಇರುವುದನ್ನು ತಿಳಿಸಿದ್ದಾರೆ. ಆದರೆ ಸೂಕ್ಮ ಹಗುರ ಕೆಲಸ ಹೆಣ್ಣು ಮಕ್ಕಳಿಗೂ; ಭಾರ ತ್ರಾಸದಾಯಕ ಕೆಲಸ ಗಂಡು ಮಕ್ಕಳಿಗೂ ಹಂಚಿಕೆ ಮಾಡುವುದು ಪ್ರಸ್ತುತವೂ ಶಾಲೆಗಳಲ್ಲಿರುವುದನ್ನು ಸ್ಮರಿಸಿದ್ದಾರೆ.

## 6. ಪೋಷಕರು ಶಿಕ್ಷಕರು ಅಧಿಕಾರಿಗಳಿಗೆ ಲಿಂಗ ಸಮಾನತೆಯ ಅರಿವಿನ ಅಗತ್ಯತೆಗಳು:

ಮಹಿಳೆ ಪುರುಷರು ಮಾನವ ಜನಾಂಗದ ಉಳಿವಿಗೆ ಅಗತ್ಯವಾದ ಸ್ತಂಭಗಳು.ಇವರಿಂದಲೇ ಸಮಾಜದ ಸ್ವಾಸ್ಥ್ಯ ಉಳಿವಿಗೆ ಸಂತುಲಿತ ಜೀವನಕ್ಕೆ ಆಧಾರಗಳು.ಈ ಕೊಂಡಿಯನ್ನು ಸೇರಿಸುವ ಬಹುಮುಖ್ಯ ಸೂತ್ರದಾರರೆಂದರೆ, ಪೋಷಕರು ಶಿಕ್ಷಕರು ಅಧಿಕಾರಿಗಳು ಇವರನ್ನುಜಾಗೃತ ಗೊಳಿಸದ ಹೊರತು ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಅಸಾಧ್ಯ ಮನುಕುಲದ ಉನ್ನತಿ ಕಲ್ಪಿಸಲಾಗದು. ಆದ್ದರಿಂದ ಈ ವ್ಯವಸ್ಥೆಯಲ್ಲಿರುವ ವ್ಯಕ್ತಿಗಳು ಹೊಂದಿರುವ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಲು, ಪೋಷಕರೂ ಆಲೋಚಿಸುವಂತಹ ಸನ್ನಿವೇಶ ಉಂಟು ಮಾಡಲು, ಅವರ ಮನಸ್ಥಿತಿ ತಿಳಿಯಲು, ಮಾನವ ಸಂಪನ್ಮೂಲ ಸಮರ್ಪಕವಾಗಿ ಬಳಸಿಕೊಳ್ಳಲು, ಪೋಷಕರಲ್ಲಿ ಹೆಣ್ಣು ಕೀಳು ಗಂಡು ಮೇಲು ಎಂಬ ಭಾವನೆ ಇರುವುದನ್ನು ಸರಿಪಡಿಸುವುದು ಅತೀ ಅಗತ್ಯವಾಗಿದೆ. ಅಲ್ಲದೆಹೆಣ್ಣು ಮನೆಗಷ್ಟೇ ಸೀಮಿತ,ಸಮಾನ ಅವಕಾಶದಿಂದ ಆಕೆ ಬಹಳಷ್ಟು ಸಾಧಿಸಬಲ್ಲಳು ಎಂದು ಮನವರಿಕೆ ಮಾಡಲು ಸರ್ಕಾರದ ಪ್ರೋತ್ಸಾಹಕಗಳನ್ನು ಪರಿಚಯ ಮಾಡಲು, ಸಮಾನ ನಿರ್ವಹಣಾ ಸಾಮರ್ಥ್ಯಗಳು, ಕೊಟ್ಟವರ ಮನೆಗೆ ಹೋಗುವವಳು ಭಾವನೆ ಬದಲಾಯಿಸಲು,ವಯೋಮಾನಕ್ಕೆ

ಅನುಗುಣ ಸಾಮರ್ಥ್ಯವನ್ನು ಮನವರಿಕೆ ಮಾಡಲು,ವಿದ್ಯೆ ಎಂಬುದು ಸಂಪತ್ತು ಅದನ್ನು ಹಂಚಿಕೆ ಮಾಡುವ ಸಂದರ್ಭದಲ್ಲಿ ಬಾಲಕ ಬಾಲಕಿಯರಿಬ್ಬರ ಅಭಿಪ್ರಾಯಗಳಿಗೆ ಮನ್ನಣೆ ನೀಡಲು,ಬಾಲಕಿಯರಿಗೆ ಹಾಜರಾತಿ ಉತ್ತಮ ಪಡಿಸಲು ಇರುವ ಪ್ರೋತ್ಸಾಹಕಗಳನ್ನು ಪರಿಚಯಿಸಲು ಸಪಾತ್ರರಿಗೆ ಒದಗಿಸಲು, ಮಕ್ಕಳನ್ನು ಹೇಗೆ ಬೆಳೆಸಬಹುದೆಂದು ಪೋಷಕರಿಗೆ ಮನವರಿಕೆ ಮಾಡಲು ಸಮಾನ ಹಕ್ಕು ಸ್ವಾತಂತ್ಯ ಹೊಂದಿರುವುದನ್ನು ಮನವರಿಕೆ ಮಾಡಲು ಸಂಪ್ರದಾಯ ಹೆಸರಿನಲ್ಲಿರುವ ಆಚರಣೆಗಳನ್ನು ಪರಾಮರ್ಶೆಗೆ ಒಳಪಡಿಸಲು, ಗ್ರಾಮೀಣ ಭಾಗದಲ್ಲಿ ಉದಾಸೀನತೆ ಇದೆ  ಎಂಬ ಅವರ ನಿಲುವಿಗೆ ಅದರ ದುಷ್ಪರಿಣಾಮವನ್ನು ತಿಳಿಸಲು, ಹಲವು ದಶಕಗಳಿಂದ ಇರುವ ಮೂಡನಂಬಿಕೆ ಹೊಡೆದು ಹಾಕಿ ಹೊಸ ಆಲೋಚನೆಯನ್ನು ತುಂಬಲು, ಬಹಳಷ್ಟು ಪೋಷಕರು ಕೆಲಸವನ್ನು ಗಂಡು ಹೆಣ್ಣು ಎಂದು ಪ್ರತ್ಯೇಕಿಸಿ ನೋಡುತ್ತಾರೆ ಅವರ ಮನಸ್ಥಿತಿಯನ್ನು ಮಾರ್ಪಡಿಸಿಕೊಳ್ಳಲು ವಿಚಾರಪಡತೆಯನ್ನು ಹುಟ್ಟು ಹಾಕಲ ಅಗತ್ಯವಾಗಿದೆ.

7. **ಲಿಂಗ ಸಂವೇದನಾತ್ಮಕ ಜಾಗೃತಿಗಳು ಆಲೋಚನೆಯನ್ನು ಪ್ರಭಾವಿಸುತ್ತವೆಯೆ?**
   **ಅಭಿಪ್ರಾಯಗಳು:**

ಲಿಂಗ ಸಂವೇದನಾತ್ಮಕ ಜಾಗೃತಿಗಳು ಆಲೋಚನೆಯನ್ನು ಪ್ರಭಾವಿಸುತ್ತವೆಯೆ? ಎಂಬ ಪ್ರಶ್ನೆಗೆ ಬಹತೇಕ ಪ್ರತಿದರ್ಶಿಗಳು ಹೀಗೆ ಪ್ರತಿಕ್ರಿಯಿಸಿದ್ದಾರೆ.ಇದುವರೆಗೂ ತರಬೇತಿಯಿಂದಲೇ ತಮ್ಮಗೆ ಹೆಚ್ಚಿನ ಮಾಹಿತಿ ಲಭ್ಯವಾಗಿರುವುದನ್ನು ಸ್ಮರಿಸಿದ್ದಾರೆ. ಲಿಂಗ ಸಂವೇದನೆಯ ಆಶಯ, ನೆರವು, ಕಾನೂನು ಅರಿವು ಮೂಡಿಸಲು ಏಕಮಾತ್ರ ದಾರಿಯಾಗಿ ತರಬೇತಿಗಳಿರುವುದನ್ನು ಸ್ಮರಿಸಿದ್ದಾರೆ. ಈ ಮಾದರಿಯ ತರಬೇತಿಗಳನ್ನು ಗ್ರಾಮ ಸಭೆ ಎಸ್ ಡಿಎಂಸಿಯವರಿಗೂ ನೀಡಲು ಸಲಹೆಯನ್ನು ನೀಡಿದ್ದಾರೆ.ನಕಾರಾತ್ಮಕ ಚಿಂತನೆಗಳನ್ನು ದೂರ ಮಾಡಿ ಹೊಸ  ವಿಚಾರಗಳು ಪ್ರಭಾವಿಸಲು ಮನಸ್ಸಿನಲ್ಲಿ ಮೂಡಿದ ವಿಚಾರಗಳನ್ನು ಸಾಮೂಹಿಕವಾಗಿ ಚರ್ಚಿಸಲು ಚಿಂತನೆಯ ಓರೆಗೆ ಹಚ್ಚಲು ಆಲೋಚನೆಗಳನ್ನು ಸಕಾರಾತ್ಮಕ ಧನಾತ್ಮಕವಾಗಿ ಯೋಚನೆಗೆ ಪ್ರೇರಣೆ ನೀಡಿ, ಸಮಾಜ ಅಭಿವೃದ್ಧಿಗೆ ಅವಕಾಶಕಲ್ಪಿಸಲು, ಸ್ವ ಅವಲೋಕಿಸಲು ವಿವೇಚಿಸಲು,ಲಿಂಗ ಸಂವೇದನೆ ಸದಾ ಜಾಗೃತ ಸ್ಥಿತಿಯಲ್ಲಿದ್ದರೆ ಮಾತ್ರ ಸಾಧ್ಯ. ಲಿಂಗ ಸಂವೇದನೆಗಳಿಂದ ಲಿಂಗ ಸಮಾನತೆಯ ಭಾವನೆಯುವಿಕಸನವಾಗುತ್ತದೆ. ಇದಕ್ಕಾಗಿ ಕ್ರಮಬದ್ದ ವಿಚಾರ ವಿನಿಮಯದ ಅಗತ್ಯವಿದೆ, ಅದು ಜಾಗೃತಿಯಿಂದ ಲಭಿಸುತ್ತದೆ, ಅರಿವಿನ ಕೊರತೆ, ತಪ್ಪು ಗ್ರಹಿಕೆಯಿಂದಿರುವ ವ್ಯಕ್ತಿಗಳಿಗೆ, ನಡೆನುಡಿ ತಿದ್ದಿಕೊಳ್ಳಲು ಸಹಕಾರಿ. ಮಾಹಿತಿ ಹಂಚಿಕೆಯಿಂದ ಮನೋಧೋರಣೆ ನಿಧಾನಗತಿಯಲ್ಲಿ ಬದಲಾವಣೆ ಸಾಧ್ಯತೆ, ಹೆಚ್ಚೆಚ್ಚುಪೂರ್ವಗ್ರಹ ಪೀಡಿತ ಮಾನಸಿಕ ಸ್ಥಿತಿ ಬದಲಾಯಿಸಲು,ಪುಷ್ಟಿ, ಮುನ್ನೆಚ್ಚರಿಕೆ ನೀಡಲು, ಸಾಧನೆ ಸಾಧಕರ ಸಾಮರ್ಥ್ಯ ಅರಿಯಲು ಅವಕಾಶ ನೀಡುತ್ತದೆ. ತರಬೇತಿಯಲ್ಲಿ ಚರ್ಚಿತ ಅಂಶಗಳನ್ನು ತರಗತಿಯಲ್ಲಿ ಅಳವಡಿಸಲು ಸಾಧ್ಯವಿದೆ ಎಂದು ಬಹು ಸಂಖ್ಯೆಯ ಶಿಕ್ಷಕರು ಮತ್ತು ಅಧಿಕಾರಿಗಳು ಪ್ರತಿಕ್ರಿಯಿಸಿದ್ದಾರೆ.

## 8. ಲಿಂಗ ಸಂವೇದನಾ ತರಬೇತಿಗೆ ಹೆಚ್ಚಿನ ಮಾಹಿತಿ ಬೇಕೆನಿಸುವ ಕ್ಷೇತ್ರಗಳು:

ಲಿಂಗ ಸಂವೇದನಾ ತರಬೇತಿಗೆ ಹೆಚ್ಚಿನ ಮಾಹಿತಿ ಬೇಕೆನಿಸುವ ಕ್ಷೇತ್ರಗಳನ್ನು ತರಬೇತಿ ಅಗತ್ಯತೆಯನ್ನು ತಿಳಿದುಕೊಳ್ಳಲು ಪ್ರಶ್ನೆಯನ್ನು ಎತ್ತಲಾಗಿತ್ತು ಇದಕ್ಕೆ ಪ್ರತಿಕ್ರಿಯೆಯಾಗಿ ಬಹಳಷ್ಟು ಶಿಕ್ಷಕರು ಮತ್ತು ಅಧಿಕಾರಿಗಳು ಈ ಕೆಳಕಾಣಿಸಿದ ಕ್ಷೇತ್ರಗಳನ್ನು ಪಟ್ಟೀಕರಿಸಿದ್ದಾರೆ.

ಹದಿಹರೆಯದಲ್ಲಾಗುವ ಪ್ರತ್ಯೇಕತೆಯ ಬದಲಾವಣೆಗಳು

ಗಂಡು ಹೆಣ್ಣಿನ ದೈಹಿಕ ಮಾನಸಿಕ ಶಕ್ತಿಗಳು

ಹದಿ ಹರೆಯದಲ್ಲಿ ಎದುರಿಸುವ ಸಮಸ್ಯೆ ಯಾತನೆ ಅದನ್ನು ನಿಭಾಯಿಸುವ ಕ್ರಮಗಳು

ಪೋಷಕರು ಹಾಗೂ ಸಮಾಜದ ಮನ ಪರಿವರ್ತಿಸುವುದು ಹೇಗೇ? ತರಬೇತಿ.

ಋತುಮತಿಯಾದ ನಂತರ ಶಾಲೆ ಬಿಡಿಸುವುದು ತಪ್ಪಿಸುವಂತಹ ತರಬೇತಿ

ಸ್ತ್ರೀ ಪುರುಷರಲ್ಲಿರುವ ಹಿಂಜರಿಕೆ ಕೀಳರಿಮೆ ಬೇದಭಾವ ಭಾವನೆ ತೊಡೆದು ಹಾಕುವುದು ಹೇಗೆ?

ಗಂಡು ಹೆಣ್ಣಿನ ಮನೋಭಾವ ಚಿಂತನೆಯಲ್ಲಿರುವ ವ್ಯತ್ಯಾಸದ ಮಾಹಿತಿ

ಲಿಂಗ ಸಂವೇದನೆಯ ತಾತ್ವಿಕತೆ ಮನೋವೈಜ್ಞಾನಿಕತೆ ಮತ್ತು ಪರಿಸರ

ಸಮಾಜದ ಸಮತೋಲನಕ್ಕೆ ಗಂಡು ಹೆಣ್ಣು ಇಬ್ಬರೂ ಸಮಾಜದ ಆರೋಗ್ಯಕ್ಕೆ ಅವಶ್ಯಕವೇ?

ಶೈಕ್ಷಣಿಕ ಅವಕಾಶಗಳ ಮಾಹಿತಿ

ಪೋಷಕರು ಸ್ವ ಅವಲೋಕಿಸುವಂತಹ ತರಬೇತಿ

ವೈಯಕ್ತಿಕವಾಗಿ ಸನ್ನಿವೇಶ ಎದುರಿಸುವ ಬಗೆ

ಹೆಣ್ಣು ಗಂಡು ಆಗಿ ವಿಕಸನವಾಗುವ ಪ್ರಕ್ರಿಯೆಯನ್ನು ತಿಳಿಯಬೇಕಿದೆ

ಅಸಮಾನತೆಯ ಅಂಕಿ ಅಂಶಗಳು ಮಾಹಿತಿ

ವಯೋಮಾನದವರಿಗೆ ತಕ್ಕಂತೆ ಮಾಹಿತಿ ತರಬೇತಿ ನೀಡಬೇಕು

ಲಿಂಗ ಸಂವೇದನಾ ವಿಷಯ ತಜ್ಞರಿಂದ ಮಾಹಿತಿ

ವಿಶೇಷ ಸಾಧನೆ ಗೈದ ವ್ಯಕ್ತಿಗಳ ಪರಿಚಯ

ಲಿಂಗ ಸಂವೇದನೆಯ ತೊಂದರೆಗಳು ಅನಾಹುತಗಳು ಮಾಹಿತಿ

ಲಿಂಗ ಸಮಾನತೆಯಿಂದ ಆಗಬಹುದಾದ ಅನುಕೂಲತೆಗಳು

ಸರ್ಕಾರದ ವಿಭಿನ್ನ ಯೋಜನೆಗಳು ಕಾನೂನುಗಳು ಪೋಷಕರಿಗೆ ತಿಳಿ ಹೇಳಬಹುದಾದ ಬಗೆಯ ಮಾಹಿತಿ

ಲಿಂಗ ಸಂವೇದನಾತ್ಮಕ ಆಡಳಿತ ನಿರ್ವಹಣೆಯ ಕೌಶಲಗಳು

ಲಿಂಗ ಸಂವೇದನೆಗಳು ವ್ಯಕ್ತಿತ್ವದ ಮೇಲೆ ಹೇಗೆ ಪ್ರಭಾವಿಸುತ್ತವೆ?

ಸಮಾನತೆ ಸಾಧಿಸುವ ಮಾರ್ಗೋಪಾಯಗಳು

ಲಿಂಗ ಸಂವೇಗನಾತ್ಮಕ ಜ್ಞಾನ ಕೌಶಲಗಳು

ಹೆಣ್ಣು ಭ್ರೂಣ ಹತ್ಯೆ

ಜೆಂಡರ್ ಸ್ಕೀಮಾ ಕಡಿಮೆಗೊಳಿಸುವ ಮಾರ್ಗಗಳು

ವಯಸ್ಸಿಗೆ ತಕ್ಕಂತೆ ಮಕ್ಕಳಲ್ಲಿ ಮೂಡಿಸಬಹುದಾದ ಭಾವನೆಗಳ ಮಾಹಿತಿ

## ಅಧ್ಯಾಯ 4 ಕೇಸ್ ಸ್ಟಡಿಸ್ ವಿಮರ್ಶೆ:

ಕಲಿಕೆಯು ಪಾಲಕರು ಮಕ್ಕಳೊಂದಿಗೆ ಮಾತನಾಡುವಾಗ, ಮಕ್ಕಳು ಒಟ್ಟಾಗಿ ಆಟವಾಡುವಾಗ ಮತ್ತು ಶಿಕ್ಷಕರು ಕಲಿಕಾರ್ಥಿಗಳಿಗೆ ಸಹಾಯ ನೀಡಿದಾಗ, ಘಟಿಸುತ್ತದೆ. ನಾವೂ ಗ್ರಂಥಾಲಯದಲ್ಲಿ ಕುಳಿತಿರುವಾಗ ಅಥವಾ ಯಾವುದೇ ಕಾದಂಬರಿಯನ್ನು ಓದುತ್ತಿರುವಾಗ, ನಾವೂ ಪುಸ್ತಕದಲ್ಲಿರುವ ಪಾತ್ರಗಳು, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭಗಳೊಂದಿಗೆ ಅನ್ಯೋನ್ಯಕ್ರಿಯೆ ಮಾಡುತ್ತೇವೆ. ಹಾಗೆಯೇ ಹಲವು ಸಂಶೋಧನೆಗಳೂ ಸಹ ಕಲಿಕೆಯು ಸಾಮಾಜಿಕ ಪರಿಸರದಿಂದ ಪ್ರಭಾವಿತವಾಗಿರುತ್ತಾರೆ ಮತ್ತು ಮಕ್ಕಳು ತಮ್ಮ ಪರಿಸರದಲ್ಲಿ ಏನನ್ನು ವೀಕ್ಷಿಸುತ್ತಾರೆ ಮತ್ತು ವ್ಯಕ್ತಿಗಳೂ ಹಾಗೂ ವಸ್ತುಗಳೊಂದಿಗಿನ ಅನ್ಯೋನ್ಯಕ್ರಿಯೆಗಳನ್ನು ಆಧರಿಸಿ ತಮ್ಮ ಜ್ಞಾನವನ್ನು ತಾವೇ ಸ್ವಯಂ ನಿರ್ಮಿಸಿಕೊಳ್ಳುತ್ತಾರೆ ಎಂಬುದನ್ನು ಧೃಡಪಡಿಸಿವೆ.

ಕಲಿಕೆ ಹಾಗೂ ವಿಮರ್ಶೆಗೆ ಅವಕಾಶವಿರುವ ಸಾಮಾನ್ಯ ವಿಷಯಗಳು ತರಬೇತಿಯಲ್ಲಿ ಹೆಣ್ಣು ಮಕ್ಕಳ ಶಿಕ್ಷಣ ವಿಷಯದಡಿಯಲ್ಲಿ ನಿರ್ವಹಣೆಯ ವಿಮರ್ಶೆ.

ಅಸಮಾನತೆ ತೊಡೆದು ಹಾಕಲು ತಾತ್ಕಲಿಕ ಪರಿಹಾರವಾಗಿ ಮೀಸಲಾತಿ,ಕಾನೂನುಗಳು,ಅರಿವು ಕಾರ್ಯಕ್ರಮಗಳಿದ್ದರೆ,ಶಾಶ್ವತ ಪರಿಹಾರವೆಂದರೆ ಮನೋಧೋರಣೆಯನ್ನು ಬದಲಿಸಲು ಸಾಧ್ಯವಿರುವ ಶಿಕ್ಷಣ ದಿಂದ ಮಾತ್ರ ಸಾಧ್ಯವಿದೆ. ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರತರಿಗೆ ಸಾಮಾನ್ಯವಿಷಯಗಳು ತರಬೇತಿಯಲ್ಲಿ ಲಿಂಗಸಂವೇದನೆ ಪುನಶ್ಚೇತನ ಕಾರ್ಯಗಾರಕ್ಕೆ ಬಳಸಲು ಸಿದ್ದಪಡಿಸಿದ ಪ್ರಶ್ನಾವಳಿ.

**ಹೆಸರು ಮತ್ತು ವಿಳಾಸ :** **ದಿನಾಂಕ** :

| ಕ್ರ.ಸಂ | ಮಾನಕಗಳು | ಸಂಪೂರ್ಣ ಒಪ್ಪಿಗೆ | ಒಪ್ಪಿಗೆ ಇಲ್ಲ |
|---|---|---|---|
| 1 | ಮಹಿಳೆಯರು ಎಲ್ಲಾ ಕೆಲಸಗಳನ್ನು ನಿರ್ವಹಿಸಬಲ್ಲರು | | |
| 2 | ತಾರತಮ್ಯಕ್ಕೆ ಒಳಗಾಗುವವರ ಬಗ್ಗೆ ಅನುಕಂಪವಿದೆ | | |
| 3 | ಖಇಘ ಮತ್ತು ಉಇಃಆಇಖ ಪರಿಕಲ್ಪನೆಗಳ ವ್ಯತ್ಯಾಸವನ್ನು ತಿಳಿದಿದ್ದೇನೆ | | |
| 4 | ಆಸ್ತಿ, ಸಂಪತ್ತು ಮತ್ತು ಅಧಿಕಾರಗಳಲ್ಲಿ ಹೆಣ್ಣು ಸಮಪಾಲು ಹೊಂದುವುದು ನಮಗೆ ತೃಪ್ತಿಯಿದೆ. | | |
| 5 | ಗ್ರಾಮೀಣ ಪ್ರದೇಶದಲ್ಲಿ ಗಂಡು ಹೆಣ್ಣಿನ ಅಸಮಾನತೆ ಇರುವುದನ್ನು ನಾನು ಗಮನಿಸುತ್ತೇನೆ. | | |
| 6 | ನಾನು ಗ್ರಾಮೀಣರಲ್ಲಿರುವ ಅಸಮಾನತೆಯ ಮನೋಭಾವನೆಯನ್ನು ಹೋಗಲಾಡಿಸಲು ಪ್ರೇರೇಪಿಸುತ್ತೇನೆ. | | |
| 7 | ಸಂಪ್ರದಾಯಶೀಲತೆ ಮತ್ತು ರೂಢಿಯಲ್ಲಿರುವ ಆಚಾರ ವಿಚಾರವನ್ನು ಸಮಕಾಲೀನವಾಗಿ ಖಂಡಿಸಲು ಸಾಧ್ಯವಿದೆ. | | |
| 8 | ನಾನು ಪುರುಷ ಹಾಗೂ ಮಹಿಳೆಯರು ಸಮಾನರೆಂದು ಭಾವಿಸಿ ಅದಂರಂತೆಯೇ ನಡೆಯುತ್ತೇನೆ. | | |
| 9 | ಹೆಣ್ಣು, ಗಂಡಿನಂತೆ ನಗರ ಬದುಕಿನಲ್ಲಿ ಉದ್ಯೋಗದಲ್ಲಿ ತೊಡಗಿಕೊಂಡಿರುವುದು ನನಗೆ ಸಮ್ಮತವಿದೆ. | | |
| 10 | ಆತ್ಮರಕ್ಷಣೆ ತಂತ್ರಗಳನ್ನು ಕಲಿಯುವಲ್ಲಿ ಸಮಾನ ಅವಕಾಶಗಳನ್ನು ಒದಗಿಸಿ ಪ್ರೋತ್ಸಾಹ ನೀಡುತ್ತೇನೆ. | | |

**ಕ್ರಿಯಾ ಪದಗಳು:** ಅನುಕಂಪವಿದೆ ತೃಪ್ತಿಯಿದೆ ಅಸಮಾನತೆ ಗಮನಿಸುತ್ತೇನೆ ಸಮ್ಮತವಿದೆ ಖಂಡಿಸಲು ಸಾಧ್ಯವಿದೆಗ್ರಾಮೀಣ ಪ್ರದೇಶದಲ್ಲಿ ಮಾತ್ರ ಅಸಮಾನತೆ ಇದೆ ಎಂಬ ಸಂದೇಶವನ್ನು ಸಾರುತ್ತಿದೆ.

ಆಯ್ಕೆಗಳು: **ಸಂಪೂರ್ಣ ಒಪ್ಪಿಗೆ, ಒಪ್ಪಿಗೆ ಇಲ್ಲ.**

ಈ ಮಾದರಿಯ ಕಾರ್ಯಾಗಾರಗಳು ಫಲಾನುಭವಿಗಳನ್ನು ಸ್ವ ಅವಲೋಕಿಸಿಕೊಂಡು ಪರಿಹಾರಕ್ಕಾಗಿ ಶಿಕ್ಷಣದ ಮೂಲಕ ಕಾರ್ಯತಂತ್ರಗಳನ್ನು ರೂಪಿಸಿಕೊಂಡು ಸಮರೋಪಾದಿಯಲ್ಲಿ ಅನುಷ್ಟಾನಗೊಳಿಸಲು ಸಾಧ್ಯವಿಲ್ಲ. ಕೇವಲ ಹಾಸ್ಯಭರಿತ ಚರ್ಚೆಯಾಗಿ ಉಳಿಯುತ್ತದೆ.

**ಸಾಹಿತ್ಯ ತರಬೇತಿ ವಿನ್ಯಾಸ ರಚಿಸುವಾಗ ಎಚ್ಚರಿಕೆ ವಹಿಸುವುದು ಬಹು ಮುಖ್ಯವಾಗಿದೆ.**

# ಅಧ್ಯಾಯ:5

## ಒಳನೋಟಗಳು ಸಲಹೆಗಳು ಮತ್ತು ಮುಂದಿನ ಅಧ್ಯಯನ ಕ್ಷೇತ್ರಗಳು:

### ಶಾಲೆಗಳಲ್ಲಿ ಹೆಣ್ಣು ಮಕ್ಕಳ ಶಿಕ್ಷಣ ಹೀಗಿರಲಿ ಶಿಕ್ಷಣ ವ್ಯವಸ್ಥೆಯಲ್ಲಿರುವ ಪ್ರಸ್ತುತ ಆಲೋಚನೆಗಳು:

ಬಹುಪಾಲು ಜನ ಲಿಂಗತ್ವ (ಜೆಂಡರ್)ವೆಂಬುದನ್ನು ಹೆಣ್ಣು ಮಕ್ಕಳಿಗೆ ಮಾತ್ರ ಸಂಬಂಧಿಸಿದ ವಿಷಯವೆಂದು ಹಾಗೂ ಲಿಂಗತ್ವದ ಬಗ್ಗೆ ಮಹಿಳೆಯರೇ ಧ್ವನಿಯೆತ್ತಬೇಕು ಮತ್ತು ಪುರುಷರು ಈ ಕುರಿತು ಹೆಚ್ಚು ಮಾತನಾಡುವಷ್ಟು ಪ್ರಮುಖ ವಿಷಯವಿಲ್ಲವೆಂದು ಭಾವಿಸಿದ್ದಾರೆ. ಆದರೆ ಲಿಂಗತ್ವವೆಂಬುದು ಪುರುಷ ಮತ್ತು ಸ್ತ್ರೀ ಇಬ್ಬರಿಗೂ ಸಂಬಂಧಿಸಿದ ವಿಷಯವಾಗಿದೆ. ಪುರುಷ ಹಾಗೂ ಸ್ತ್ರೀ ಎನ್ನುವುದು ಜೈವಿಕವಾದರೆ, ಲಿಂಗತ್ವವೆಂಬುದು ಪುರುಷ ಮತ್ತು ಸ್ತ್ರೀಯರ ಕುರಿತಾಗಿ ಸಾಮಾಜಿಕವಾಗಿ ಕಟ್ಟಿಕೊಂಡ ವ್ಯಾಖ್ಯೆಯಾಗಿದೆ. ಸಮಾಜದ ವಿವಿಧ ಸನ್ನಿವೇಶಗಳಲ್ಲಿ ಪುರುಷರು ಮತ್ತು ಸ್ತ್ರೀಯರು ಖಾಸಗಿಯಾಗಿ ಮತ್ತು ಸಾರ್ವಜನಿಕವಾಗಿ ನಿರ್ವಹಿಸುವ ವಿವಿಧ ಕಾರ್ಯ, ಜವಾಬ್ದಾರಿ ಹಾಗೂ ಪಾತ್ರಗಳನ್ನು ಲಿಂಗತ್ವವೆನ್ನಬಹುದು.ಪುರುಷರು ಮತ್ತು ಮಹಿಳೆಯರ ಸ್ಥಾನಮಾನಗಳು, ಸಮಾಜದಲ್ಲಿ ಅವರಿಬ್ಬರನ್ನು ಪರಿಗಣಿಸುವ ರೀತಿಗಳು ಸಮಾನವಾಗಿವೆಯೆ?ಅಥವಾ ತಾರತಮ್ಯ ಅಥವಾ ಅಸಮಾನತೆಗಳಿಂದ ಕೂಡಿವೆಯೇ ಎಂಬಿತ್ಯಾದಿ ಅಂಶಗಳನ್ನು ಲಿಂಗತ್ವವು ವಿಶ್ಲೇಷಣೆಗೊಳಪಡಿಸುತ್ತದೆ. ಪುರುಷ ಮತ್ತು ಸ್ತ್ರೀಯರಿಬ್ಬರ ಸ್ಥಾನಮಾನಗಳು ಸಮನಾಗಿರುವಂತೆ ಗಮನಿಸಬೇಕಾಗುತ್ತದೆ.ನಮ್ಮ ಭಾರತೀಯ ಸಮಾಜದಲ್ಲಿ ಚಾರಿತ್ರಿಕವಾಗಿ ಮಹಿಳೆಯರು ಸಮಾನ ಹಕ್ಕು, ಅವಕಾಶ, ಸ್ವಾತಂತ್ರ್ಯಗಳಿಂದ ವಂಚಿತರಾಗಿದ್ದು, ಅದನ್ನು ಸರದೂಗಿಸಲು ಅಗತ್ಯವಾದ ಕಾನೂನು ಹಾಗೂ ಇತರೆ ಅರಿವು/ಜಾಗೃತಿಗಳನ್ನು ಮೂಡಿಸುವ ಕ್ರಮಗಳನ್ನು ಕೈಗೊಳ್ಳುವ ಅಗತ್ಯತೆಯಿದೆ.

ಈ ಕಾರ್ಯಕ್ರಮಗಳ ಜೊತೆ ಹೆಣ್ಣುಮಕ್ಕಳು ಸಶಕ್ತರಾಗಲು ಇರುವ ಏಕೈಕ ಪರಿಹಾರವೆಂದರೆ ಹೆಣ್ಣುಮಕ್ಕಳಲ್ಲಿ ಜಾಗೃತಿಯುಂಟು ಮಾಡುವುದಾಗಿದೆ.ಇದಕ್ಕಾಗಿ ವಿಮರ್ಶಾತ್ಮಕ ಬೋಧನಾ ಕ್ರಮವನ್ನು (ಅಡಿಣುಣುಛಿಚಿಟ ಕಜಜಂಂಂಥಿ) ಶಾಲೆಯಲ್ಲಿ ಶಿಕ್ಷಕರು ಅಳವಡಿಸಿಕೊಳ್ಳಬಹುದು.ಆದ್ದರಿಂದ ವಿಮರ್ಶಾತ್ಮಕ ಸ್ತ್ರೀ ಬೋಧನಾ ಕ್ರಮವನ್ನು (Crtitical Feminist Pedogogy) ಅಳವಡಿಸಿಕೊಂಡಲ್ಲಿ ಹೆಣ್ಣುಮಕ್ಕಳಲ್ಲಿ ಅಗತ್ಯ ಜಾಗೃತಿಯುಂಟಾಗಿ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಸ್ವಪ್ರೇರಣೆಯಿಂದ ಅಗತ್ಯ ಶ್ರಮವಹಿಸಲು ಸಾಧ್ಯವಾಗುತ್ತದೆಂದು ತಜ್ಞರು ಅಭಿಪ್ರಾಯಪಡುತ್ತಾರೆ.

ಹೆಣ್ಣುಮಕ್ಕಳಿಗೆ ಅವರಿರುವ ಸ್ಥಿತಿಗತಿ, ಸಾಮಾಜಿಕ ಸನ್ನಿವೇಶ, ಅವರು ಶಿಕ್ಷಣ ಪಡೆಯಲು, ಗಂಡುಮಕ್ಕಳಿಗೆ ಸಮಾನವಾಗಿ ಸೌಲಭ್ಯಗಳನ್ನು ಹೊಂದಲು ಅನುಭವಿಸುತ್ತಿರುವ ಅಡ್ಡಿ ಆತಂಕಗಳ ಕುರಿತಂತೆ ಪ್ರಶ್ನೆಗಳನ್ನು ಕೇಳುತ್ತಾ ಹೋಗಬೇಕು. ಹೆಣ್ಣುಮಕ್ಕಳಿಗೆ ಪ್ರಶ್ನೆಗಳನ್ನು ಕೇಳುವ ಮುಂಚೆ ಅವರು ಯಾವುದೇ ರೀತಿಯ ಭಯವಿಲ್ಲದೇ ಉತ್ತರಿಸಲು ಸಾಧ್ಯವಾಗುವಂತಹ ವಾತಾವರಣವನ್ನು ಸೃಷ್ಟಿಸಬೇಕು. ಹೆಣ್ಣುಮಕ್ಕಳು ಪ್ರಶ್ನೆಗಳಿಗೆ ಉತ್ತರಿಸುತ್ತಾ, ತಮ್ಮ ಸ್ಥಿತಿಗತಿಗಳ ಬಗ್ಗೆ ವಿಮರ್ಶಾತ್ಮಕವಾಗಿ ಆಲೋಚಿಸಲು ತೊಡಗುತ್ತಾರೆ. ಅವರ ವೈಯಕ್ತಿಕ ಸಮಸ್ಯೆಗಳು, ಅನುಭವಗಳನ್ನು ಅವರಿರುವ ಸಾಮಾಜಿಕ ಸನ್ನಿವೇಶಗಳಿಗೆ ಯಶಸ್ವಿಯಾಗಿ ಸಂಪರ್ಕ ಕಲ್ಪಿಸಿಕೊಂಡು ವಿಮರ್ಶೆ ಮಾಡುವುದರ ಮೂಲಕ ತಾವಿರುವ ಸ್ಥಿತಿ–ಗತಿಗಳಿಂದ ಹೊರಬಂದು, ಸಶಕ್ತರಾಗಲು ಪ್ರಯತ್ನಗಳನ್ನು ಆರಂಭಿಸುತ್ತಾರೆ.ಎಷ್ಟೋ ವೇಳೆ ತೊಂದರೆಯಲ್ಲಿರುವವರಿಗೆ ತಾವು ಎದುರಿಸುತ್ತಿರುವುದು ಸಮಸ್ಯೆ ಎಂಬ ತಿಳುವಳಿಕೆಯೇ ಇರುವುದಿಲ್ಲ. 'ನಾನು ಇಂತಹ ಸಮಸ್ಯೆಯಲ್ಲಿದ್ದೇನೆ' ಎಂಬ ಜಾಗೃತಿಯೇ ಬದಲಾವಣೆ ಹೊಂದುವ ಆರಂಭಿಕ ಹೆಜ್ಜೆಯಾಗುತ್ತದೆ.ತಾನು ಸಮಸ್ಯೆಯೊಳಗೆ ಸಿಲುಕಿದ್ದೇನೆ ಅಥವಾ ತೊಂದರೆ

ಎದುರಿಸುತ್ತಿದ್ದೇನೆಂಬ ಅರಿವಿಲ್ಲದಿದ್ದಲ್ಲಿ ಅದರಿಂದ ಆಚೆ ಬರುವ ಯೋಚನೆ ಮಾಡುವುದೂ ಸಹ ಅಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಶಿಕ್ಷಕರು ಹೆಣ್ಣುಮಕ್ಕಳ ಕುರಿತಂತೆ ಕೇಳಲಾಗುವ ಪ್ರಶ್ನೆಗಳು ಅವರಲ್ಲಿ ಜಾಗೃತಿಯುಂಟು ಮಾಡಲು ಕಾರಣವಾಗುತ್ತದೆ. ಶಿಕ್ಷಕರು ಕೇಳುವ ಪ್ರಶ್ನೆಗಳು ಉದಾಹರಣೆಗೆ ಈ ರೀತಿಯಿರಬಹುದು; 'ಜೀವನದಲ್ಲಿ ನಿನ್ನ ಗುರಿಯೇನು?', ಆ ಗುರಿ ಸಾಧನಗೆ ನೀನು ಪಡೆಯಬೇಕಾದ ವಿದ್ಯಾಭ್ಯಾಸವೇನು?', 'ಆ ವಿದ್ಯಾಭ್ಯಾಸವನ್ನು ಹೊಂದಲು ಕುಟುಂಬದಲ್ಲಿ ಅನುಕೂಲ ಅಥವಾ ಅನಾನುಕೂಲಗಳಿವೆಯೇ?', 'ಅನಾನುಕೂಲಗಳಿದ್ದಲ್ಲಿ ವಿದ್ಯಾಭ್ಯಾಸ ಪೂರೈಸಲು ಏನು ಮಾಡುವೆ?', 'ನಿಮ್ಮ ತಾಯಿ ಪಡೆದಿರುವ ವಿದ್ಯಾಭ್ಯಾಸವೆಷ್ಟು?', 'ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸದ ಮಹತ್ವವೇನು?', 'ನಿನಗೆ ನಿನ್ನ ಇಷ್ಟದ ಆಟವಾಡಲು ಅವಕಾಶವಿದೆಯೇ?.......ಈ ರೀತಿಯ ಪ್ರಶ್ನೆಗಳಿಗೆ ಹೆಣ್ಣುಮಕ್ಕಳು ಸಾವಧಾನವಾಗಿ, ಆಲೋಚಿಸಿ ಉತ್ತರಿಸುವಂತೆ ಶಿಕ್ಷಕರು ಪ್ರೇರೇಪಿಸಬೇಕು. ಇದರ ಜೊತೆ ಹೆಣ್ಣುಮಕ್ಕಳ ರಕ್ಷಣೆ ಹಾಗೂ ಬೆಂಬಲಕ್ಕಾಗಿ ಇರುವ ಸರ್ಕಾರಿ ಇಲಾಖೆ, ಸ್ವಯಂ ಸೇವಾ ಸಂಸ್ಥೆಗಳು, ಅವರ ದೂರವಾಣಿ ಸಂಖ್ಯೆ, ಮಕ್ಕಳ/ಹೆಣ್ಣುಮಕ್ಕಳ ಸಹಾಯವಾಣಿ ವಿವರ, ಆಪತ್ತು, ತೊಂದರೆ ಅಥವಾ ಶೋಷಣೆಗೊಳಗಾಬಹುದಾದ ಸನ್ನಿವೇಶ ಎದುರಿಸುವ ವಿಧಾನ ಇತ್ಯಾದಿ ಅಂಶಗಳ ಕುರಿತಂತೆ ಮಾಹಿತಿಯನ್ನು ನೀಡಬೇಕು. ಹೆಣ್ಣುಮಕ್ಕಳ ಶಿಕ್ಷಣಕ್ಕೆ ವಿವಿಧೆಡೆ ಇರುವ ಸೌಲಭ್ಯ ಹಾಗೂ ಅನುಕೂಲಗಳ ಮಾಹಿತಿ ತಿಳಿಸುವುದರ ಜೊತೆ ಹೆಣ್ಣುಮಕ್ಕಳಿಗೆ ಸಂಬಂಧಿಸಿದಂತೆ ಇರುವ ಕಾನೂನಿನ ಮಾಹಿತಿಗಳನ್ನು ತಿಳಿಸಿಕೊಡುವುದೂ ಸಹ ಪರಿಣಾಮ ಕಾರಿಯಾಗುತ್ತದೆ. ಈ ನಿಟ್ಟಿನಲ್ಲಿ ಶಿಕ್ಷಕರು ಪ್ರಯತ್ನಪಟ್ಟಲ್ಲಿ ಹೆಣ್ಣುಮಕ್ಕಳ ಸಬಲೀಕರಣಕ್ಕೆ ಇಂಬು ಕೊಟ್ಟಂತಾಗುತ್ತದೆ.*

*ಸಾಮಾನ್ಯ ವಿಷಯಗಳು ತರಬೇತಿಯಲ್ಲಿ ಹೆಣ್ಣು ಮಕ್ಕಳ ಶಿಕ್ಷಣ ಕುರಿತ ತರಬೇತಿ ಸಾಹಿತ್ಯದಲ್ಲಿನ ಚರ್ಚೆಯ ಆಯ್ದ ಭಾಗ

## ಒಳನೋಟಗಳು:

**'ಲಿಂಗ:** ಮಾನವ ಜೀವಿಯು ಸೃಷ್ಟಿಯ ಎಲ್ಲಾ ಜೀವಿಗಳಂತೆ ಜೈವಿಕವಾಗಿ ಗಂಡು ಹೆಣ್ಣು ಎಂದು ವರ್ಗೀಕರಿಸಲಾಗಿದೆ. ಲಿಂಗ ಎಂಬ ಪದವನ್ನು ,(ex) ಈ 2 ಜೀವಿಗಳಲ್ಲಿನ ಜೈವಿಕ ವ್ಯತ್ಯಾಸಗಳನ್ನು ಗುರುತಿಸಲು ಬಳಸುವ ಪದವಾಗಿದೆ. ಸೃಷ್ಟಿಯಲ್ಲೆ ಈ ವ್ಯತ್ಯಾಸಗಳಿದ್ದು ನಿರ್ದಿಷ್ಟ ಜೈವಿಕ ಪಾತ್ರ ನಿರ್ವಹಿಸಲು ಸಹಾಯಕವಾಗಿವೆ. ಇದು ಸೃಷ್ಟಿಯ ಅನನ್ಯ ವಿಷಯವಾಗಿದೆ.ಇದರಿಂದಾಗಿ ಜೈವಿಕ ಚಕ್ರ ಅನೂಚಾನವಾಗಿ ಮುಂದುವರಿಯಲು ಸಹಾಯಕವಾಗಿದೆ.ಆದರೆ ಈ ಜೈವಿಕ ವ್ಯತ್ಯಾಸ ಕಾಲ ಕ್ರಮೇಣ ಇನ್ನೊಂದು ಸಾಮಾಜಿಕ ಪಾತ್ರ ನಿರ್ವಹಣೆಯ ವ್ಯತ್ಯಾಸಕ್ಕೆ ಕಾರಣೀಭೂತವಾಗಿದೆ ಹೀಗೆ ಇನ್ನೊಂದು ಪರಿಕಲ್ಪನೆ ಲಿಂಗಾಧಾರಿತ ಭೇದವನ್ನು ಸೂಚಿಸುತ್ತದೆ.

**ಜೆಂಡರ್:** (sex based difference) ಲಿಂಗಾಧಾರಿತ ಭೇದ ಅಥವಾ **'ಜೆಂಡರ್'**ಎಂಬುದು ದೈಹಿಕ ವ್ಯತ್ಯಾಸವನ್ನಾಧರಿ ಸಮಾಜ ನಿರ್ಧರಿಸಿದ ಮೌಲ್ಯ ಅಥವಾ ಲಿಂಗಾಧಾರಿತ ಪಾತ್ರ ನಿರ್ವಹಣೆಯ ಸೂಚಿಯಾಗಿದೆ. ಇದೊಂದು ಅಲಿಖಿತ ಮೌಲ್ಯವಾಗಿದ್ದು ಸಂಸ್ಕೃತಿಯಲ್ಲಿ ಪದ್ಧತಿ, ಸಂಪ್ರದಾಯ, ಲೋಕರೂಢಿ ಎಂಬ ಹೆಸರಿನಲ್ಲಿ ಹಿರಿಯರಿಂದ ಕಿರಿಯರಿಗೆ ವರ್ಗಾಯಿಸಲ್ಪಡುತ್ತಿದೆ ಈ ವ್ಯವಸ್ಥೆಯಿಂದ ಕೇವಲ ಪುರುಷ ವರ್ಗದ ಹಿತವನ್ನು ಕಾಪಾಡಲಾಗಿದ್ದು ಸ್ತ್ರೀಯರು ಕಡೆಗಣಿಸಲ್ಪಟ್ಟಿದ್ದಾರೆ. (ಡಿ ಎಸ್ ಇ ಆರ್ ಟಿ ಬೆಂಗಳೂರು "ಜೆಂಡರ್ ವಿಷಯಗಳು" ಸಂಪನ್ಮೂಲ ಪುಸ್ತಕ)

**ಲಿಂಗ ಸಂವೇದನೆ**: ಲಿಂಗ ಸಮಾನತೆಯ ಜ್ಞಾನದಿಂದ ಮನೋಧೋರಣೆಯಲ್ಲಾಗುವ ಬದಲಾವಣೆಯನ್ನು ಸೂಚಿಸುತ್ತದೆ.

ಪ್ರಸ್ತುತ ಅಧ್ಯಯನವು ಶಿಕ್ಷಣ ವ್ಯವಸ್ಥೆಯಲ್ಲಿರುವ ಶಿಕ್ಷಕರು ಅಧಿಕಾರಿಗಳು ತಾವು ಪಡೆದ ಶಿಕ್ಷಣದಲ್ಲಿ ಹಾಗೂ ಇಲಾಖೆಯ ಹಲವು ಕಾರ್ಯಕ್ರಮಗಳಲ್ಲಿ ಈ ಬಗೆಯ ಸಂವೇದನಾಶೀಲತೆಯನ್ನು ಪಡೆಯಲು ಸಾಧ್ಯವಾಗಿದೆ ಇವರು ಪಠ್ಯ ವಿಷಯ ಸಂವಹನದಲ್ಲಿ ಸಂವೇದನಾತ್ಮಕ ಆಯಾಮದಲ್ಲಿ ವಿಮರ್ಶಾತ್ಮಕ ಶಿಕ್ಷಣ ಕ್ರಮವನ್ನು ಅಳವಡಿಸಿಕೊಂಡು ವಿದ್ಯಾರ್ಥಿಗಳು ಮತ್ತು ಸಮಾಜಕ್ಕೆ ಸಂಪನ್ಮೂಲ ಬೆಂಬಲವನ್ನು ವಾಸ್ತವಿಕ ನೆಲೆಯಲ್ಲಿ ನೀಡಬೇಕಾಗಿದೆ. ಈ ಜವಾಬ್ದಾರಿ ನಿರ್ವಹಿಸುವವರು ಶಿಕ್ಷಕರು ಮಾರ್ಗದರ್ಶಿ ಅಧಿಕಾರಿಗಳಾಗಿದ್ದಾರೆ. ಇವರಿಬ್ಬರೂ ಮುಂದಿನ ನಡೆಗೆ ವಾಸ್ತವಿಕತೆಯನ್ನು ತಿಳಿಯುವ ಹಲವಾರು ಪ್ರಯತ್ನಗಳನ್ನು ನಿರ್ವಹಿಸಬೇಕಿದೆ.(ಎನ್ ಸಿಎಫ್ ಟಿಇ 2009 ಪುಟ ಸಂಖ್ಯೆ 31–32)ಅಲ್ಲದೆ ಲಿಂಗಾಧಾರಿತ ಅಸಮಾನತೆ ಅಡಚಣೆ ನಿಭಾಯಿಸುವ ತಂತ್ರಗಳಾಗಿ ಪಠ್ಯ ಸಹಪಠ್ಯದಲ್ಲಿ ಸಮಾನತೆ ಬಿಂಬಿಸುವ ಚಟುವಟಿಕೆಗಳನ್ನು ರೂಪಿಸಬೇಕಿದೆ ಮತ್ತು ಎಲ್ಲಾ ರಂಗದಲ್ಲೂ ಮಹಿಳೆಯರ ಸಾಧನೆಯನ್ನು ಪ್ರಚುರಪಡಿಸುವುದು. ಮಾನವ ಸಂಪನ್ಮೂಲವಾದ ಮಹಿಳೆಯ ಸ್ಥಿತಿಗತಿ ವ್ಯವಸ್ಥೆ ಸುಧಾರಣೆಯನ್ನು ವಿಮರ್ಶಾತ್ಮಕ ಶಿಕ್ಷಣ ಶಾಸ್ತ್ರದ ಮೂಲಕ ಬೌದ್ಧಿಕ ಚಿಂತನೆಗೊಳಪಡಿಸುವುದು ಈ ಮಾದರಿಯ ಧನಾತ್ಮಕ ಮನೋಭಾವನೆಯನ್ನು ಶಿಕ್ಷಣದಿಂದಲೇ ಹುಟ್ಟು ಹಾಕಬೇಕಿದೆ.

**ಶಿಕ್ಷಣದಿಂದಲೇ ಸಬಲತೆ:** ಸಬಲತೆಯನ್ನು ಜೀವನದ ಪರಿಪೂರ್ಣಜ್ಞಾನ ಹೊಂದಿ ನಿರ್ಣಯ ಕೈಗೊಳ್ಳಬಹುದಾದ ಸ್ಥಿತಿ ಎಂದು ಭಾವಿಸಿದರೆ ಶಿಕ್ಷಣ ಪ್ರಕ್ರಿಯೆ * ಪಾಲ್ಗೊಳ್ಳುವಿಕೆ * ಕಲಿಕೆ =(ಜಾಗೃತಿ, ಜ್ಞಾನ, ಅರ್ಥಮಾಡಿಕೊಳ್ಳುವುದು, ಅವಧಾನ, ವರ್ತನಾ ಬದಲಾವಣೆ) * ಸಾಧನೆ=

(ಗುಣಾತ್ಮಕ, ಪರಿಮಾಣಾತ್ಮಕ) * ಭವಿಷ್ಯ ಜೀವನದ ಆಯ್ಕೆ = (ಉನ್ನತ ವ್ಯಾಸಂಗ, ಉದ್ಯೋಗ, ಸಾಮಾಜಿಕ) * ಭವಿಷ್ಯ ಜೀವನದಲ್ಲಿ ಪ್ರಗತಿ * ಆರ್ಥಿಕ ಸ್ವಾವಲಂಬನೆ * ವೈಯಕ್ತಿಕ * ಸ್ವನಿರ್ಧಾರ * ಸಬಲತೆ.(ಬಿಂಬ ತರಬೇತುದಾರರ ಸಂಪನ್ಮೂಲ ಕೈಪಿಡಿ (2010) ಬೆಂಗಳೂರು : ಡಿಎಸ್‌ಇಆರ್‌ಟಿ ಪುಟ ಸಂಖ್ಯೆ 54)

ಜೆಂಡರ್ ಸಬಲೀಕರಣ ಮಾಪಕವು ಮಹಿಳೆಯರ ಪಾರ್ಲಿಮೆಂಟರಿ ಪ್ರತಿನಿಧಿತ್ವ ವೃತ್ತಿಪರತೆ ಆಡಳಿತಾತ್ಮಕ ಸ್ಥಾನಗಳಲ್ಲಿ ಅವರ ಪಾಲು ಶ್ರಮಿಕ ಬಲದಲ್ಲಿ ಕ್ರಿಯಾಶೀಲ ಭಾಗವಹಿಸುವಿಕೆ ರಾಷ್ಟ್ರೀಯ ಆದಾಯದಲ್ಲಿನ ಪಾಲನ್ನು ಅಳತೆ ಮಾಡುತ್ತದೆ.(ತರಬೇತುದಾರರ ಸಂಪನ್ಮೂಲ ಕೈಪಿಡಿ ಬೆಂಗಳೂರು : ಡಿಎಸ್‌ಇಆರ್‌ಟಿ ಪುಟ ಸಂಖ್ಯೆ 4)

ಜೆಂಡರ್ ಸಾಮಾಜೀಕರಣವು ಹೆಣ್ಣು ಗಂಡು ಜೈವಿಕ ವ್ಯತ್ಯಾಸವನ್ನೆ ಮುಖ್ಯ ತಳಪಾಯವಾಗಿಟ್ಟುಕೊಂಡು ಅವರ ವ್ಯಕ್ತಿತ್ವ ಆಲೋಚನೆ ಮತ್ತು ಪ್ರವೃತ್ತಿಯನ್ನು ಪ್ರಭಾವಿಸುತ್ತಿರುವುದನ್ನು ಕಾಣಬಹುದು. ನಿಟ್ಟಿನಲ್ಲಿ ಸ್ಯಾಂಡ್ರ ಬೆಮ್ (ಜೆಂಡರ್ ಅಸ್ಕಿಮ್ಯಾಟಿಕ್ ಸೊಸೈಟಿ) ಸ್ತ್ರೀ ಪುರುಷ ಪ್ರತ್ಯೇಕತೆಯನ್ನು ವ್ಯವಸ್ಥಿತ ಚೌಕಟ್ಟಿನಲ್ಲಿ ಮುಂದುವರೆಸುವುದರ ವಿರುದ್ಧ ಜಾಗೃತಿಯ ಅವಶ್ಯಕತೆಯನ್ನು ತಿಳಿಸುತ್ತಾರೆ. ವಿಶೇಷವಾಗಿ ಶಾಲೆ ಪಠ್ಯಕ್ರಮದಲ್ಲಿ ಈ ತಪ್ಪಾಗದಂತೆ ಎಚ್ಚರಿಕೆ ವಹಿಸಲು ಕರೆ ನೀಡಿದ್ದಾರೆ.ಒಂದೇ ಜೆಂಡರ್‌ಗೆ ಪ್ರಾಮುಖ್ಯತೆ ನೀಡುವುದು ಸಮಾಜದ ಮೇಲೆ ಋಣಾತ್ಮಕ ಪ್ರಭಾವವನ್ನು ಬೀರುವುದನ್ನು ತಿಳಿಸುತ್ತಾರೆ.ಜೆಂಡರ್ ಸ್ಕೀಮಾಕ್ಕೆ ಕಡಿಮೆ ಮಹತ್ವ ನೀಡಲು ತಿಳಿಸುತ್ತಾರೆ.

ಇದಲ್ಲದೆ ಭವಿಷ್ಯದಲ್ಲಿ ಈ ಲಿಂಗಾಧಾರಿತ ವ್ಯತ್ಯಾಸಗಳನ್ನು ಒಡೆದು ನೋಡುವ ಹಾಗೂ ಪ್ರಶ್ನಿಸಿ ಪರಾಮರ್ಶಿಸುವ ದೃಷ್ಟಿಕೋನವನ್ನು ಮಕ್ಕಳಲ್ಲಿ ಬೆಳೆಸಬೇಕಿದೆ.ಇದಕ್ಕೆ ವಿಮರ್ಶಾತ್ಮಕ ಶಿಕ್ಷಣ ಕ್ರಮವನ್ನು ಪ್ರತಿ ವಿಷಯ ಚಿಂತನೆಗಳಲ್ಲಿ ಹುಟ್ಟು ಹಾಕಬೇಕಿದೆ.ಈ ನಿಟ್ಟಿನಲ್ಲಿ ಶಾಲಾ ವ್ಯವಸ್ಥೆ ಸುಧಾರಣೆಯಾಗಬೇಕಿದೆ.ಆ ನಿಟ್ಟಿನಲ್ಲಿ ಶೈಕ್ಷಣಿಕ ವ್ಯವಸ್ಥೆಯಲ್ಲಿರುವ ಶಿಕ್ಷಕರು ಮತ್ತು ಅಧಿಕಾರಿಗಳು ತಮ್ಮ ದೃಷ್ಟಿಕೋನವನ್ನು ಮರು ಚಿಂತನೆಗೆ ಒಳಪಡಿಸಬೇಕಿದೆ.ಈ ಮಾದರಿಯ ಸಂಶೋದನೆಗಳು ಹೆಚ್ಚು ಬೆಳಕನ್ನು ಚೆಲ್ಲಿ ನೀತಿ ನಿರೂಪಕರಿಗೆ ಅನುಷ್ಟಾನಗೊಳಿಸುವವರಿಗೆ ದಾರಿದೀಪವಾಗುತ್ತದೆ. ಆಗ ನಾವು Convention on the Elimination of all forms of Dscrimination against women (CEDAW) 9 ನೇ ಜುಲೈ 1993 ರಂದು ಭಾರತ ಸರ್ಕಾರ ಮಹಿಳೆಯ ರಹಿತ ರಕ್ಷಿಸಲು ಬದ್ದವೆಂದು ಒಪ್ಪಿಗೆ ಸೂಚಿಸಿ ಸಂಯುಕ್ತ ರಾಷ್ಟ್ರಕ್ಕೆ 4 ವರ್ಷಕ್ಕೊಮ್ಮೆ ಸಲ್ಲಿಸುತ್ತಿರುವ ವರದಿಯಲ್ಲಿ ಧನಾತ್ಮಕ ಬೆಳವಣಿಗೆಯನ್ನು ಸೂಚಿಸಲು ಸಾಧ್ಯ.

## ಸಲಹಾತ್ಮಕ ಚಿಂತನೆಗಳು

1. **ಜಿಲ್ಲಾ ನಿರ್ಧಿಷ್ಟ ಇಲಾಖೆಯಾಗಿ ಜೆಂಡರ್ ಅಧ್ಯಯನ ವಿಭಾಗ ಸ್ಥಾಪನೆ:**

ಜಿಲ್ಲಾ ನಿರ್ಧಿಷ್ಟ ಇಲಾಖೆಯನ್ನು ಸ್ಥಾಪಿಸಲು ಪ್ರತಿ ಜಿಲ್ಲೆಯ ಡಯಟ್‌ಗಳಿಗೆ ಅವಕಾಶವಿರುವುದರಿಂದ ಹೆಣ್ಣು ಮಕ್ಕಳ ಸಮಸ್ಯೆಗಳು ನಿವಾರಣಾ ತಂತ್ರಗಳು ಸಲಹೆ ಮಾರ್ಗದರ್ಶನ ಶಾಖೆಯಾಗಿ ಹೆಣ್ಣು ಮಕ್ಕಳ ಶಿಕ್ಷಣ ವಿಭಾಗವನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಡ್ಡಾಯವಾಗಿ ಮೊದಲ ಆದ್ಯತೆ ನೀಡಿ ಇಲಾಖೆಯನ್ನು ಸ್ಥಾಪಿಸಬೇಕಿದೆ ಎಂಬ ಸಲಹೆಯನ್ನು ಅಧ್ಯಯನದಲ್ಲಿ ನೀಡಲಾಗಿತ್ತು ಆದರೆ ಅಧ್ಯನದ ಫಲಶೃತಿಯನ್ನು ಜಿಲ್ಲಾ ಹಂತದಲ್ಲಿ ವಿಚಾರ ಸಂಕಿರಣದಲ್ಲಿ ಮಂಡಿಸಿದಾಗ ಹೆಣ್ಣು ಮಕ್ಕಳ ಶಿಕ್ಷಣ ವ್ಯಾಪ್ತಿ ಮೀರಿದ ಅಧ್ಯಯನಕ್ಕೆ ಅವಕಾಶವಿರುವ ಜೆಂಡರ್ ಅಧ್ಯಯನ ವಿಭಾಗವನ್ನು ಸ್ಥಾಪಿಸುವುದು ಹೆಚ್ಚು ಸೂಕ್ತವೆಂದು ಸಂವಾದದ ನಂತರ

**2.ವಿಮರ್ಶಾತ್ಮಕ ಶಿಕ್ಷಣ ಶಾಸ್ತ್ರ:**

ಶಾಲಾ ಸನ್ನಿವೇಶಗಳು ಹಾಗೂ ತರಗತಿ ಪ್ರಕ್ರಿಯೆಯಲ್ಲಿ ವಿಮರ್ಶಾತ್ಮಕ ಶಿಕ್ಷಣ ಶಾಸ್ತ್ರವನ್ನು ಬಳಸುವುದು ಉತ್ತಮ ಮಾರ್ಗೋಪಾಯವಾಗಿದೆ.ಪಠ್ಯಪುಸ್ತಕಗಳು, ತರಗತಿ ಸಂವಹನ, ಪಠ್ಯ ಸಹಪಠ್ಯ ಪ್ರಕ್ರಿಯೆಗಳು, ಇಲಾಖೆಯ ಎಲ್ಲಾ ಮೌಲ್ಯಾಂಕನಗಳು, ವೃತ್ತಿಪರ ಬೆಳವಣಿಗೆಯ ಎಲ್ಲಾ ತರಬೇತಿ ಕಾರ್ಯಾಗಾರಗಳು, ಸಂವಾದಗಳು, ಜೆಂಡರ್ ಕಣ್ಣಲೆಯಲ್ಲಿ ವಿಮರ್ಶಾತ್ಮಕ ಶಿಕ್ಷಣ ಶಾಸ್ತ್ರದ ನೆಲೆಯಲ್ಲಿಯೇ ನಿರ್ವಹಿಸಬೇಕಿದೆ.

**ಶಿಕ್ಷಕರು ಅಧಿಕಾರಿಗಳಿಗೆ ಅಗತ್ಯವಿರುವಲಿಂಗ ಸಂವೇದನಾ ತರಬೇತಿ ಅವಶ್ಯಕತೆಗಳು:**

ಇಲಾಖೆಯವತಿಯಿಂದ ಶಿವಮೊಗ್ಗ ಡಯಟ್ ಈ ಕೆಳಕಂಡ ತರಬೇತಿಗಳನ್ನು ಆಯೋಜಿಸಬಹುದಾಗಿದೆ: ಲಿಂಗ ಸಂವೇದನಾಶೀಲ ದೃಷ್ಟಿಕೋನ ಹೊಂದಲು ಹೆಚ್ಚಿನ ಮಾಹಿತಿ ಅಗತ್ಯವಿರುವಂತಹ ಈ ಕೆಳಕಂಡಕ್ಷೇತ್ರಗಳನ್ನು ಶಿಕ್ಷಕರು ಅಧಿಕಾರಿಗಳು ಗುರುತಿಸಿದ್ದಾರೆ.

ಹದಿಹರೆಯದಲ್ಲಾಗುವ ಪ್ರತ್ಯೇಕತೆಯ ಬದಲಾವಣೆಗಳು

ಗಂಡು ಹೆಣ್ಣಿನ ದೈಹಿಕ ಮಾನಸಿಕ ಶಕ್ತಿ ಸಾಮರ್ಥ್ಯವಾಗಿ ನಿರ್ವಹಿಸುವ ಕಾರ್ಯಗಳು

ಹದಿಹರೆಯದಲ್ಲಿ ಎದುರಿಸುವ ಸಮಸ್ಯೆ ಯಾತನೆ ಅದನ್ನು ನಿಭಾಯಿಸುವ ಕ್ರಮಗಳು

ಋತುಮತಿಯಾದ ನಂತರ ಶಾಲೆ ಬಿಡಿಸುವುದು ತಪ್ಪಿಸುವಂತಹ ಪ್ಯಾನಲ್ ಚರ್ಚೆಗಳು.

ಪೋಷಕರು ಹಾಗೂ ಸಮಾಜದ ಮನಪರಿವರ್ತಿಸುವುದು ಹೇಗೆ? ಕಾರ್ಯಾಗಾರಗಳು ತಾತ್ಕಾಲಿಕವಾಗಿ ಅವರಲ್ಲಿರುವ ಹಿಂಜರಿಕೆ ಕೀಳರಿಮೆ ಬೇದಭಾವ ಭಾವನೆ ತೊಡೆದುಹಾಕುವುದು ಹೇಗೆ?

ಗಂಡು ಹೆಣ್ಣಿನ ಮನೋಭಾವ ಚಿಂತನೆಯಲ್ಲಿರುವ ವ್ಯತ್ಯಾಸ ಮಾಹಿತಿ.

ಲಿಂಗ ಸಂವೇದನೆಯ ತಾತ್ವಿಕತೆ ಮನೋವೈಜ್ಞಾನಿಕತೆ ಮತ್ತು ಸಂಸ್ಕೃತಿ ಆಯಾಮಗಳು.

ಸಮಾಜದ ಸಮತೋಲನಕ್ಕೆ ಗಂಡು ಹೆಣ್ಣು ಇಬ್ಬರೂ ಅವಶ್ಯಕ ಈ ಅವಶ್ಯಕತೆ ಪ್ರಸ್ತುತ ಪಡಿಸುವ ಸಾಹಿತ್ಯಗಳು.

**ಶೈಕ್ಷಣಿಕ ಅವಕಾಶಗಳು ಮಾಹಿತಿ**

ಪೋಷಕರು ಸ್ವ ಅವಲೋಕಿಸುವಂತಹ ತರಬೇತಿ

ಹೆಣ್ಣು ಗಂಡು ಆಗಿ ವಿಕಸನವಾಗುವ ಪ್ರಕ್ರಿಯೆ ಪರಿಚಯ.

ವೈಯಕ್ತಿಕವಾಗಿ ಸನ್ನಿವೇಶ ಎದುರಿಸುವ ಬಗೆಗಳು ತೊಂದರೆಗಳು ಅನಾಹುತಗಳೂ ಮಾಹಿತಿ.

ಅಸಮಾನತೆಯನ್ನು ತಿಳಿಯಪಡಿಸುವ ಅಂಕಿಅಂಶಗಳನ್ನು ತಿಳಿಯಪಡಿಸುವ ಮಾಹಿತಿಗಳು.

ಲಿಂಗ ಸಂವೇದನಾ ವಿಷಯ ತಜ್ಞರಿಂದ ಪರಿಕಲ್ಪನೆ ಸ್ಪಷ್ಟತೆ.

ವಿಶೀಷ ಸಾಧನೆಗೆ ವ್ಯಕ್ತಿಗಳ ಪರಿಚಯ.

ಲಿಂಗ ಸಮಾನತೆಯಿಂದ ಆಗಬಹುದಾದ ಅನುಕೂಲತೆಗಳು

ಸರ್ಕಾರದ ವಿಭಿನ್ನ ಯೋಜನೆಗಳು ಕಾನೂನುಗಳು

ಪೋಷಕರಿಗೆ ತಿಳಿಹೇಳಬಹುದಾದ ಬಗೆಯ ಮಾಹಿತಿ.

ಜೆಂಡಲೆನ್ಸ್ ನಲ್ಲಿ ಆಡಳಿತ ನಿರ್ವಹಣೆಯ ಕೌಶಲಗಳು.

ಲಿಂಗ ಸಂವೇದನೆಗಳು ವ್ಯಕ್ತಿತ್ವದ ಮೇಲೆ ಹೇಗೆ ಪ್ರಭಾವಿಸುತ್ತವೆ?

ಸಮಾನತೆ ಸಾಧಿಸುವ ಮಾರ್ಗೋಪಾಯಗಳು.

ಜ್ಞಾನ ಕೌಶಲ ಅಗತ್ಯವಾದ ಮಾಹಿತಿಗಳು.

ಜೆಂಡರ್ ಸ್ಕೀಮಾ ಕಡಿಮೆಗಳಿಸುವ ಮಾರ್ಗಗಳು

ವಯಸ್ಸಿಗೆ ತಕ್ಕಂತೆ ಮೂಡಿಸಬಹುದಾದ ಭಾವನೆಗಳ ಮಾಹಿತಿಯನ್ನು ಕೋರಿರುತ್ತಾರೆ.

ವ್ಯಕ್ತಿಗತ ಮತ್ತು ಕುಟುಂಬ ಸುಧಾರಣೆ:

ಜ್ಞಾನಕ್ಕೆ ಮುಕ್ತ ಅವಕಾಶವನ್ನು ಕುಟುಂಬ ಮತ್ತು ಶಾಲೆ ಒದಗಿಸಬೇಕು ಮಕ್ಕಳು ವಿಶೇಷವಾಗಿ ಬಾಲಕಿಯರ ಸ್ವಯಂ ಜೆಂಡರ್ ಸ್ಕೀಮಾವನ್ನು ಮಾರ್ಪಡಿಸಲು ಆಪ್ತ ಸಮಾಲೋಚನೆಯೊಂದಿಗೆ ಶಿಕ್ಷಣ ವೃತ್ತಿ ಉದ್ಯೋಗ ಮಾರ್ಗದರ್ಶನ ನೀಡಬೇಕು.

**ಶಾಲಾ ವ್ಯವಸ್ಥೆ ಸುಧಾರಣೆ:**

ಲಿಂಗ ಸಂವೇದನೆ ಪರಿಕಲ್ಪನೆಯು ಲಿಂಗವೆಂಬುದು ಹುಟ್ಟಿನಿಂದ ಬಂದದ್ದು ಮಹಿಳೆ ಪುರುಷರ ನಡುವಿನ ಜೈವಿಕ ವ್ಯತ್ಯಾಸ ಮಾತ್ರವಾಗಿದೆ ಜೆಂಡರ್ ಎಂಬುದು ಲಿಂಗಾಧರಿತ ಭೇದ ಸಂಸ್ಕೃತಿಯ ಸೃಷ್ಟಿ ಮನೋಧೋರಣೆ ಬದಲಾವಣೆಯಿಂದ ಮಾರ್ಪಡಿಸಬಹುದಾಗಿದೆ ಎಂಬ ಅರಿವನ್ನು ಶಿಕ್ಷಕರು ಅಧಿಕಾರಿಗಳು ಹೊಂದಬೇಕಿದೆ. ಮಕ್ಕಳು ಪೋಷಕರು ಗಳಲ್ಲಿರುವ ಧೋರಣೆಗಳನ್ನು ಮಾರ್ಪಡಿಸುವ ಕಾರ್ಯ ಇನ್ನೂ ನಿರ್ವಹಿಸಬೇಕಿದೆ.ಈ ನಿಟ್ಟಿನಲ್ಲಿ ಇಲಾಖೆಯು ಶಿಕ್ಷಣ ಸಂಸ್ಥೆಯ ಗುಣಮಟ್ಟವನ್ನು ಕೆಎಸ್‌ಕ್ಯೂಎಎಸಿ ಪರಿಷತ್ತಿನ

ಮೂಲಕ ಶಾಲೆಯ ಸಮಗ್ರ ಮೌಲ್ಯಾಂಕನ ಮಾಡುವ ಕಾರ್ಯದಲ್ಲಿ ಭೌತಿಕ, ಬೌದ್ಧಿಕ, ನಾವೀನ್ಯಮಯ ಮುಂತಾದ 5 ಕ್ಷೇತ್ರಗಳ ಜೊತೆಗೆ 6 ನೇ ಕ್ಷೇತ್ರವಾಗಿ ಲಿಂಗ ಸಂವೇದನೆಯನ್ನು ಒಂದು ಆಯಾಮವಾಗಿ ಪರಿಗಣಿಸಬಹುದಾಗಿದೆ.ಈ ನಿಟ್ಟಿನಲ್ಲಿ ಸಂಶೋಧನೆಗಳಲ್ಲಿ ನಿರತವಾಗಿದ್ದರೆ ಈ ಬಗೆಯ ಕೊರತೆಗಳನ್ನು ಗಮನಿಸಿ ಪ್ರಚುರಪಡಿಸಲು ಸಾಧ್ಯವಿದೆ.

**ಸಾಮಾಜಿಕ ವ್ಯವಸ್ಥೆ ಸುಧಾರಣೆ:**

ಹೆಚ್ಚಿನ ಶೈಕ್ಷಣಿಕ ಅವಕಾಶವಿದ್ದರೆ ವೈಜ್ಞಾನಿಕ ಮನೋಭಾವ ಹೊಂದಲು ಸಾಧ್ಯ. ಎಲ್ಲಾ ಧರ್ಮದ ಉನ್ನತ ನಾಯಕರು ಸ್ತ್ರೀ ಪುರುಷರಿಗೆ ಉಪನ್ಯಾಸ ನೀಡುವುದು. ಸ್ವ ಪರಿಕಲ್ಪನೆಗಳನ್ನು ದೃಷ್ಟಿಕೋನವನ್ನು ಮಾರ್ಪಡಿಸಿಕೊಳ್ಳಲು ಬದಲಿಸುವ ಅರಿವು ಜಾಗೃತಿ ಕಾರ್ಯಾಕ್ರಮಗಳು (ಎನ್ ಜಿ ಓ ಸ್ಥಳೀಯ ಸಂಘಟನೆಗಳನು ಬಳಸಿಕೊಳ್ಳಬಹುದು) ಮಕ್ಕಳ ದೃಷ್ಟಿಕೋನ ಶಿಕ್ಷಕರು ಬದಲಿಸಿದರೆ ಅವರಿಂದ ಪೋಷಕರಿಗೆ ಅರಿವು ಮೂಡಿಸಲು ಸಾಧ್ಯ ಪೋಷಕರ ಮನೋಧೋರಣೆ ಬದಲಾವಣೆ ಸಾಧ್ಯವಾಗದಿದ್ದರೂ ಮುಂದಿನ ಪೀಳಿಗೆಯನ್ನು ಮಾರ್ಪಡಿಸಲು ಸಹಕಾರಿಯಾಗುತ್ತದೆ. ಇದಲ್ಲದೆ ತಂದೆತಾಯಿಗಳಿಗೆ ಆಪ್ತಸಮಾಲೋಚನೆ ಸ್ತ್ರೀಯರು ಸ್ವಪರಿಕಲ್ಪನೆಯನ್ನು ಬದಲಾಯಿಸಿಕೊಳ್ಳಲು ಆಪ್ತಸಮಾಲೋಚನೆ ಪ್ರತ್ಯೇಕವಾಗಿ ಕೌನ್ಸಿಲಿಂಗ್ ಮುಕ್ತ ಅಭಿಪ್ರಾಯ ಹಂಚಿಕೆ ಅವಕಾಶಗಳನ್ನು ಒದಗಿಸಬೇಕಿದೆ. ಶಿಕ್ಷಣ ಕ್ಷೇತ್ರದಲ್ಲಿರುವ ಶಿಕ್ಷಕರು ಅಧಿಕಾರಿಗಳಿಗೆ ಸಂಪೂರ್ಣ ದೃಷ್ಟಿಕೋನ ಆಲೋಚನೆ ಮಾರ್ಪಡಿಸಿಕೊಳ್ಳುವಂತಹ ಅವಕಾಶವನ್ನು ಮೊದಲು ನೀಡಿ ನಂತರ ಸಮಾಜ ಸುಧಾರಿಸಲು ಕಾರ್ಯತಂತ್ರಗಳನ್ನು ರೂಪಿಸಬೇಕು. ಈ ನಿಟ್ಟಿನಲ್ಲಿ ವಿದ್ಯಾರ್ಥಿ ಪೋಷಕರು ಶಿಕ್ಷಕರು ಸಮುದಾಯಸೇರಿ ಲಿಂಗ ಸಮಾನತೆಯ ಸಂವಾದಗಳನ್ನು ಸಮರೋಪಾದಿಯಲ್ಲಿ ನಿರ್ವಹಿಸಬೇಕು ಇದಕ್ಕಾಗಿ ಸಮೂಹ ಮಾಧ್ಯಮಗಳು ಬುದ್ಧಿಜೀವಿಗಳು ಧರ್ಮಾಧಿಕಾರಿಗಳನ್ನು ಒಳಗೊಂಡ ಪ್ಯಾನಲ್ ಚರ್ಚೆ ನಡೆಸಿ ಸ್ಕಾಂಡಿನೇವಿಯನ್ ರಾಷ್ಟ್ರ ಮಾದರಿಯಲ್ಲಿ ರಾಷ್ಟ್ರೀಯ ನೀತಿಯನ್ನು ರೂಪಿಸಿಕೊಂಡು ವ್ಯವಸ್ಥೆ ಬದಲಾವಣೆ ಸಾಧ್ಯವಿದೆ ಹೀಗೆ ಭೇಟಿ ಬಡಾವೋ ಭೇಟಿ ಬಚಾವೋ ಕಾರ್ಯಕ್ರಮ ಯಶಸ್ವಿಗೊಳಿಸಲು ಸಾಧ್ಯವಿದೆ.

## ಮುಂದಿನ ಅಧ್ಯಯನ ಕ್ಷೇತ್ರಗಳು:

ಮುಂದಿನ ಅಧ್ಯಯನ ಕ್ಷೇತ್ರಗಳಾಗಿ ಸಂಶೋಧಕರು ಈ ಪ್ರಶ್ನಾವಳಿಯನ್ನು ಜಿಲ್ಲೆಯ ಎಲ್ಲಾ ಸರ್ಕಾರಿ ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಯ ಶಿಕ್ಷಕರಿಗೆ ವಿಸ್ತರಿಸಿ ವ್ಯಾಪಕವಾದ ಕ್ಷೇತ್ರ ವಿಸ್ತರಣೆಯಿಂದ ಒಳನೋಟವನ್ನು ಪಡೆಯಲು ಆಸಕ್ತರಾಗಿದ್ದಾರೆ ಅಲ್ಲದೆ ಈಗಾಗಲೇ ಇಲಾಖೆಯು ಈ ವಿಷಯವಾಗಿ ನೀಡಿದ ತರಬೇತಿಯ ಅನುಷ್ಟಾನದಲ್ಲಿರುವ ತೊಡಕನ್ನು ಹಾಗೂ ಪರಿಣಾಮಕಾರತ್ವ ಮೌಲ್ಯಮಾಪನಕ್ಕೆ ಒಳಪಡಿಸಲು ಚಿಂತಿಸಲಾಗಿದೆ. ಇದರೊಂದಿಗೆ ಈ ಕೆಳಕಾಣಿಸಿದ ಕ್ಷೇತ್ರದಲ್ಲಿ ಅಧ್ಯಯನವನ್ನು ಸಹ ಕೈಗೊಳ್ಳಬಹುದಾಗಿದೆ.

ಕಿರಿಯ ಹಿರಿಯ ಪ್ರೌಢ ಹಂತ ಮಕ್ಕಳ ಜೆಂಡರ್ ಆಲೋಚನೆ ವಿಶ್ಲೇಷಣೆ
ಶಿಕ್ಷಕರ ತರಗತಿ ಸಿದ್ಧತೆ ಪಠ್ಯ ಮತ್ತು ಸಹಪಠ್ಯ ಯೋಜನೆ

ಶಾಲಾ ಸನ್ನಿವೇಶದಲ್ಲಿ ಬಾಲಕ ಬಾಲಕಿಯರಿಗೆ ಲಭ್ಯವಾಗುತ್ತಿರುವ ಅವಕಾಶಗಳನ್ನು ವಿಮರ್ಶಿಸುವುದು.

ಪಠ್ಯ ಸಂವಹನದ ಅವಧಿಯಲ್ಲಿನ ತರಗತಿ ಅಂತರ್‌ಕ್ರಿಯೆಯನ್ನು ಜೆಂಡರ್ ದೃಷ್ಟಿಯಿಂದ ವಿಶ್ಲೇಷಿಸುವುದು.

ಲಿಂಗ ಸಂವೇದನಾತ್ಮಕ ಸಮಾಜ ಸೃಜಿಸಲು ಪೋಷಕರು ಎಸ್ ಡಿ ಎಂಸಿ ಅಭಿಪ್ರಾಯ ಸಂಗ್ರಹಣೆ

**ಉಪಸಂಹಾರ:**

ಶಾಲೆ ಸಮಾಜದ ಯಥಾರೂಪಿಯಾದ ಚಿಕ್ಕ ಘಟಕವಾಗಿದ್ದು ಇದು ಸಂಸ್ಕೃತಿಯನ್ನು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ವರ್ಗಾಯಿಸುವ ಗುರುತರವಾದ ಜವಾಬ್ದಾರಿಯನ್ನು ನಿರ್ವಹಿಸುತ್ತದೆ.ಅಲ್ಲದೆ ಸಾಮಾಜಿಕ ಸುಧಾರಣೆ ಹಾಗೂ ಬದಲಾವಣೆಯನ್ನು ಔಪಚಾರಿಕ, ವ್ಯವಸ್ಥಿತವಾಗಿ ತರಲು ಶಾಲೆ ಸಹಕಾರಿಯಾಗಿದೆ.

ಲಿಂಗ ಸಮಾನತೆಗೆ ಸಾಮಾಜಿಕ ಚಲನೆ ಹಾಗೂ ಪರಿವರ್ತನೆಯ ಮಧ್ಯಮವಾದ ಶಿಕ್ಷಣದೆಡೆ ಎಲ್ಲರೂ ಪರಿಹಾರಾತ್ಮಕ ದೃಷ್ಟಿಕೋನದಿಂದ ವೀಕ್ಷಿಸುತ್ತಿದ್ದು ಶಿಕ್ಷಣವು ಭೇದವಿಲ್ಲದೆ ಎಲ್ಲರಿಗೂ ಸಮಾನ ಅವಕಾಶವನ್ನು ಸೈದ್ಧಾಂತಿಕವಾಗಿ ಮಾತ್ರ ನೀಡದೆ ಪ್ರಾಯೋಗಿಕವಾಗಿ ಚಾಲ್ತಿಗೆ ತರಬೇಕಿದೆ.ಈ ನಿಟ್ಟಿನಲ್ಲಿ ಶೈಕ್ಷಣಿಕ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕಿದೆ? ಶಾಲೆಯು ಎಷ್ಟರಮಟ್ಟಿಗೆ ಮಾನವ ಸಂಪನ್ಮೂಲ ವಿಕಾಸಕ್ಕೆ ಶೈಗುರಿ ಉದ್ದೇಶಗಳನ್ನು ರೂಪಿಸಿವೆ ಇದು ಪಠ್ಯಕ್ರಮ (ಪಠ್ಯ ಹಾಗೂ ಸಹ ಪಠ್ಯ) ಪಠ್ಯವಸ್ತುವಿನಲ್ಲಿ ಬಿಂಬಿತವಾಗಿದೆ ಸಂವೇದನಾಶೀಲತೆವಾಗಿದೆ ಎಂಬುದನ್ನು ತಿಳಿಯಬೇಕಿದೆ. ಮಕ್ಕಳ ಸರ್ವತೋಮುಖ ವಿಕಸನಕ್ಕೆ ಅಗತ್ಯವೆಂದು ಶಾಲೆಯು ಭಾವಿಸುವ ಮೂಲಭೂತ ಸೌಲಭ್ಯಗಳು ( ತರಗತಿ, ಕೊಠಡಿಗಳು, ಗ್ರಂಥಾಲಯ, ಆಟದ ಮೈದಾನ ಇತ್ಯಾದಿ ಭೌತಿಕ, ಬೌದ್ಧಿಕ, ಸಂವೇಗಾತ್ಮಕ, ಸಾಮಾಜಿಕ, ನೈತಿಕ, ಆದ್ಯಾತ್ಮಿಕ ಪರಿಸರ, ಮು.ಶಿ,ಶಿಕ್ಷಕರು, ಅಡುಗೆ ಇತರೆ ಸಿಬ್ಬಂದಿ ವ್ಯವಸ್ಥೆ) ಲಿಂಗ ಭೇದವಿಲ್ಲದ ನೀಡುವ ಸಮಾನ ಅವಕಾಶಗಳನ್ನು ತಿಳಿಯಬೇಕಿದೆ.

ಶಾಲಾ ವ್ಯವಸ್ಥೆಯ ಹೃದಯ ಭಾಗವೆಂದರೆ ತರಗತಿ ಕಲಿಕಾ ಪ್ರಕ್ರಿಯೆ ಇಲ್ಲಿ ಮಕ್ಕಳ ಜ್ಞಾನ ಸಂರಚನೆಯಾಗುವ ಬಗೆ, ಶಿಕ್ಷಕರು ನೀಡುವ ಮಾದರಿಗಳ ಪಾತ್ರ ಬಹು ದೊಡ್ಡದು ಇದನ್ನು ತರಗತಿ ಅಂತರ್ ಕ್ರಿಯೆಯಿಂದ ಸಿಗುವಂತದ್ದು, ಇಲ್ಲಿ ಮಕ್ಕಳಿಗೆ ಲಭ್ಯವಾಗುವ ಮಾದರಿಗಳು ಹಾಗೂ ಅವಕಾಶಗಳು ಅವರ ವ್ಯಕ್ತಿತ್ವವನ್ನು ರೂಪಿಸುತ್ತವೆ. ಮಕ್ಕಳು ಧನಾತ್ಮಕ, ಋಣಾತ್ಮಕ ಸ್ವಬಿಂಬ ಮೂಡಿಸಿಕೊಳ್ಳುವಲ್ಲಿ ಇದರ ಪಾತ್ರ ಮಹತ್ತರವಾದದ್ದು. ಕಲಿಕಾ ಪ್ರಕ್ರಿಯೆಯು ಸಾಗುವ ರೀತಿ ಮಕ್ಕಳಿಗೆ ವಹಿಸುವ ಜವಾಬ್ದಾರಿ, ಆಸನ, ಬಳಸುವ ಭಾಷೆ, (ಶಿಕ್ಷೆ,ಸಂವಹನ,ಪ್ರಶಂಶೆ) ತರಗತಿ ಕಲಿಕೆಯಲ್ಲಿ ಸಂದರ್ಭೋಚಿತವಾಗಿ ಉದಾಹರಿಸುವ ಪಾತ್ರಧಾರಿಗಳು ಇವುಗಳು ಮಕ್ಕಳಿಗರಿವಿಲ್ಲದೆ ಅವರ ವ್ಯಕ್ತಿತ್ವವನ್ನು ಪ್ರಭಾವಿಸುತ್ತದೆ ಇದರ ಸಮಗ್ರ ಚಿತ್ರಣ ಶಾಲೆಗಳಲ್ಲಿ ಸಾಮಾಜೀಕರಣ ಹೇಗಿದೆ ಎಂಬುದನ್ನು ಬಿಂಬಿಸುತ್ತದೆ ಹಾಗೂ ಈ ನಿಟ್ಟಿನಲ್ಲಿ ಶಾಲೆ ಹೇಗಿವೆ ಎಂಬುದನ್ನು ತಿಳಿಯುವ ಪ್ರಯತ್ನ ವಾಗಬೇಕಿದೆ.

ಪ್ರಸ್ತುತ ನವ ಜಾಗತೀಕರಣದ ಬದಲಾಗುತ್ತಿರುವ ಸಾಮಾಜಿಕ ಸನ್ನಿವೇಶಕ್ಕೆ ಮಾನವ ಸಂಪನ್ಮೂಲವನ್ನು ವ್ಯವಸ್ಥೆಗೊಳಿಸುತ್ತಿರುವ ಶಾಲೆಯು ಸಮಾಜದಲ್ಲರುವ ಮಾದರಿಗಳನ್ನು ಮೀರಿ ನಿಲ್ಲಬೇಕಾಗುತ್ತದೆ.ಈ ನಿಟ್ಟನಲ್ಲಿ ರಾ.ಚ.ಚೌ, ಪಠ್ಯಕ್ರಮ ಮಾರ್ಗದರ್ಶಕವಾಗಿದೆ. ಅಲ್ಲದೆ ಸಮಾಜದ ಭಾಗವಾದ ಪೋಷಕರಿಗೆ ಉತ್ತರಿಸಬೇಕಾಗುತ್ತದೆ. ನಿಟ್ಟಿನಲ್ಲಿ ಶಾಲೆ ಎಷ್ಟರ ಮಟ್ಟಿಗೆ ಕಾರ್ಯನಿರ್ವಹಿಸುತ್ತಿದೆ. ಎಂಬುದು ಬಹು ಮುಖ್ಯವಾಗಿದೆ ಪ್ರಸುತ 2001 ರ ಜನಗಣತಿ ಆಧಾರಿತ ಪುರುಷರು 52 ಕೋಟಿ,ಸ್ತ್ರೀಯರು 49 ಕೋಟಿ ಒಟ್ಟು 102 ಕೋಟಿ 2011ರ ಜನಗಣತಿ ಪುರುಷರು 62.4ಕೋಟಿ, ಸ್ತ್ರೀಯರು 58.6 ಕೋಟಿ ಒಟ್ಟು 121 ಕೋಟಿ ಜನಸಂಖ್ಯೆ ಡಾ. ರಾಧಾಕೃಷ್ಣನ್ 1949 ವಿಶ್ವ ವಿದ್ಯಾಲಯ ಶಿಕ್ಷಣ ಆಯೋಗದ ಅಧ್ಯಕ್ಷರಾಗಿ ವರದಿ ಸಲ್ಲಿಸುವಾಗ ಆರಂಭದ ನುಡಿಯಲ್ಲೇ ಪ್ರಶ್ನಿಸುತ್ತಿದ್ದಾರೆ 'ಸಮಾಜದ ಯಾವ ಮೌಲ್ಯ ಮತ್ತು ಸಾಂಸ್ಕೃತಿಕ ಬಲ ಮಹಿಳಾ ಸಮುದಾಯದ ವಿರುದ್ದ ಕೆಲಸಮಾಡಿದೆ. ಸುಮಾರುಶೇಕಡ 50 ರಷ್ಟು ಮಾನವ ಸಂಪನ್ಮೂಲವನ್ನು ಹೊರಗಿಟ್ಟು ಸಾ,ರಾ,ಆ (ಉತ್ಪಾದನಾ ಕ್ಷೇತ್ರ) ಶೈ ನೀತಿ ರೂಪಿಸುವುದರಿಂದ ಅಭಿವೃದ್ಧಿ ಸಾಧಿಸುವುದು

ಅಸಾಧ್ಯ.ಶಿಕ್ಷಣ ನೀಡುವಲ್ಲಿ ಸ್ತ್ರೀ, ಪುರುಷರ ಆಯ್ಕೆ ಪ್ರಶ್ನೆ ಬಂದರೆ ನಾನು ಸ್ತ್ರೀಯನ್ನೇ ಆಯ್ಕೆ ಮಾಡುತ್ತೇನೆ ಏಕೆಂದರೆ ಸ್ತ್ರೀ ಕಲಿತರೆ ಅದರ ಲಾಭ ಮುಂದಿನ ಜನಾಂಗಕ್ಕೆ ಲಭಿಸುವ ಸಾಧ್ಯತೆ ಹೆಚ್ಚು.'

ಸ್ತ್ರೀ ಸಾಕ್ಷರತೆ 2001 ರಿಂದ 2011ಕ್ಕೆ ಶೇಕಡ 54ರಿಂದ 65ಕ್ಕೆ ಹೆಚ್ಚಳವಾಗಿದ್ದರೂ (ಪುರುಷ ಸಾಕ್ಷರತೆ ಕ್ರಮವಾಗಿ 75 ಹಾಗೂ 82)ಪುರುಷ ಸ್ತ್ರೀ ಸಾಕ್ಷರತೆಯ ಅಂತರ 2001 ರಲ್ಲಿ 21ರಿಂದ 17ಕ್ಕೆ ತಗ್ಗಿದೆ ಆದರೂ ಮಾನವ ಸಂಪನ್ಮೂಲದ ದೃಷ್ಟಿಕೋನದಲ್ಲಿ ಗಣನೀಯ ಬದಲಾವಣೆ ಅಗತ್ಯವಾಗಿದೆ. ಕರ್ನಾಟಕದ ಪರಿಸ್ಥಿತಿ ಭಿನ್ನವಾಗಿಲ್ಲ. ಲಿಂಗಾನುಪಾತದಲ್ಲೂ 933 ರಿಂದ 940ಕ್ಕೆ ಹೆಚ್ಚಳವಾಗಿದ್ದರೂ ಕೆಲವು ರಾಜ್ಯದಲ್ಲಿ ಶೋಚನೀಯ ಸ್ಥಿತಿಯಲ್ಲಿದೆ.

ವಿಶ್ವದ 1995ರ ಯುಎನ್ ಡಿಪಿ ಫಲಿತಾಂಶದಲ್ಲಿ ಹೆಚ್ ಡಿಐ ಕೆನಡಾ, ಅಮೇರಿಕಾ, ಜಪಾನ್ ಮುಂಚೂಣಿಯಲ್ಲಿದ್ದರೆ, ಜಿಡಿಐ, ಜಿಇಎಂ ಸೀಡನ್,ಫಿನ್ ಲ್ಯಾಂಡ್, ನಾರ್ವೆ, ಡೆನ್ಮಾರ್ಕ್‌ನಂತಹ ಸ್ಕಾಂಡಿನೇವಿಯನ್ ರಾಷ್ಟ್ರಗಳು ಮುಂಚೂಣಿರಲ್ಲಿವೆ ಇದು ಸ್ತ್ರೀ ಪುರುಷರ ನಡುವೆ ಅವಕಾಶ ನೀಡುವ ಅಂತರಗಳು ವಿಶ್ವಮಾನ್ಯ ಸಮಸ್ಯೆಯಾಗಿದೆ. (ಹೆಚ್ ಡಿಐ ಮಾನವಾಭಿವೃದ್ಧಿ ಮಾನಕ)

ಒಂದು ದೇಶದ ಮಾನವ ಸಾಮರ್ಥ್ಯದ ಸರಾಸರಿ ಸಾಧನೆಯನ್ನು ಅಳೆಯುತ್ತದೆ.ಇದಕ್ಕೆ 3 ಸೂಚಕಗಳು ಧೀರ್ಘಾಯುಷ್ಯ ಮತ್ತು ಆರೋಗ್ಯ,ಜ್ಞಾನ ಮತ್ತು ಕೌಶಲ ಹೊಂದಲು ಅವಕಾಶ,ಸಂಪನ್ಮೂಲಗಳ ಮೇಲೆ ಹಿಡಿತ/ಜಿಡಿಐ ಈ ಮಾನಕಗಳಿಗೆ ಸ್ತ್ರೀ ಪುರುಷರ ಸರಾಸರಿ ಅವಕಾಶವನ್ನು ನಿರ್ಧರಿಸುತ್ತದೆ/ಜಿಇಎಂ ಪಾಲಿಮೆಂಟರಿ ಪ್ರತಿನಿಧಿತ್ವ(ರಾಜಕೀಯ),ಉನ್ನತ ಆಡಳಿತ ಹಾಗೂ ನಿರ್ವಹಣೆ ಭಾಗವಹಿಸುವಿಕೆ,ರಾಷ್ಟ್ರೀಯ ಆದಾಯದಲ್ಲಿ ಪಾಲುದರಿಕೆ)

ವಿಶ್ವದ ಸ್ತ್ರೀ ಅಂತರಾಷ್ಟ್ರೀಯ ಹಕ್ಕು ರಕ್ಷಣಾ ಒಪ್ಪಂದರ(ಮಹಿಳೆಯರ ವಿರುದ್ಧ ಎಲ್ಲಾ ಬಗೆಯ ಭೇದ ಭಾವ ತೊಡೆದು ಹಾಕುವ) 3ನೇ ಡಿಸೆಂಬರ್ 1981ಕ್ಕೆ ಜಾರಿಗೆ ಬಂದರೂ ಭಾರತ 09ನೇ ಜುಲೈ 199ಕ್ಕೆ ಸಹಿ ಹಾಕಿ ಒಪ್ಪಿಗೆ ಸೂಚಿಸಿತು ಈಗ ವಿಶ್ವ ಸಂಘಟನೆಗೆ ಸಂರಕ್ಷಣಾ ಖಾತ್ರಿ ವರದಿ 4 ವರ್ಷಕ್ಕೊಮ್ಮೆ ಸಲ್ಲಿಸುತ್ತಿದೆ.ಈ ನಿಟ್ಟಿನಲ್ಲಿ ಸರ್ವ ಶಿಕ್ಷಣ ಅಭಿಯಾನದ ಮದ್ಯವರ್ತನ ಚಟುವಟಿಕೆಯಡಿಯಲ್ಲಿ **ಶಿವಮೊಗ್ಗ ಜಿಲ್ಲೆಯ ಶಿಕ್ಷಕರು ಅಧಿಕಾರಿಗಳಲ್ಲಿರುವ ಮತ್ತು ಲಿಂಗ ಸಂವೇದನೆಯನ್ನು ತಿಳಿಯುವ** ಕಿರು ಪ್ರಯತ್ನ ಒಂದು ಆರಂಭವಾಗಿದೆ.

**ಗ್ರಂಥ ಋಣ :**


**1.** Sandra lipsitz Bem, "**Gender schema theory"**1981, From Wikipedia, the free encyclopedia.

2. Kohlberg's Cognitive-Developmental Theory, Gender typing, From Wikipedia.

3. Rachel Moran by Stanford Univesity "gender clustring in free recall" as a part of senior honour

4. Brenda Girvin by Stanford Univesity "Gender schematic processing of the self concept"

5. Kelly Crisp PaynterLiberty University "GENDER STEREOTYPES AND REPRESENTATION OF FEMALE CHARACTERS IN CHILDREN'S PICTURE BOOKS" EducationLiberty University October, 2011

6.Mohapatra A. K., (2009), Theory of Feminism and Tribal Women: An Empirical Study of Koraput. In: *Some Issues in Women's Studies, and Other Essays* (A.R. Singh and S.A. Singh eds.), *MSM*, 7, Jan - Dec 2009, p80-92.

7. Grounded theoryFrom Wikipedia, the free encyclopedia

8. Carol Lynn Martin1 and Diane Ruble2 Cognitive Perspectives on Gender Development Arizona State University and 2New York University.
9. Catherine Holland, ,St. Mary's College of Maryland, RECOGNIZING THE HIDDEN CURRICULUM OF GENDER ROLES RECGONIZING THE HIDDEN CURRICULUM OF GENDER ROLES Department of Educational Studies United States

**10.** Tribal Research and Cultural Foundation From Wikipedia, the free encyclopedia

11. Saran M. Final Population Totals: A Brochure of Orissa. Orissa: Census of India 2000; 2001.
12. Heywood A. Political Ideologies An Introduction. London: Palgrave Macmillan; 2002. pp. 241–265.
13. gender, nature and nurture Richard A Lippa

14. Dr.Padma sarangapani "**constructing school knowledge**"An ethnography of school knowledge in an Indian village**SAGE**Publications New Delhi.Thousand Oaks.London First published in 2003

15.2001,2011 census report . (d£ÀUÀtw ªÀgÀ¢ CAvÀeÁð®¢AzÀ ¥ÀqÉAiÀÄ¯ÁVzÉ 2001 ಮತ್ತು 2011 census of India From Wikipedia, the free encyclopedia)

16. William J Goode,Paul k hatt **"Methods in Social Research"**

17. ಡಾ.ಎಂ.ಚಂದ್ರ ಪೂಜಾರಿ "**ಸಂಶೋಧನೆ ಏನು? ಏಕೆ? ಹೇಗೆ?**" ಡಾ.ಸುಬ್ಬಣ್ಣ ರೈ ನಿರ್ದೇಶಕರು ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ವಿದ್ಯಾರಣ್ಯ 583276 ದ್ವಿತೀಯ ಮುದ್ರಣ:2011

18. ಡಾ.ಎಂ.ಚಂದ್ರ ಪೂಜಾರಿ "**ಸಂಶೋಧನೆ ಪ್ರಸ್ಥಾವ** "ಡಾ.ಸುಬ್ಬಣ್ಣ ರೈ ನಿರ್ದೇಶಕರು ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ವಿದ್ಯಾರಣ್ಯ 583276 ದ್ವಿತೀಯ ಮುದ್ರಣ:2011

19. ಡಾ.ಎಂ.ಚಂದ್ರ ಪೂಜಾರಿ **"ಪರ್ಯಾಯ ಸಮಾಜ ಜ್ಞಾನ"**ಡಾ.ಸುಬ್ಬಣ್ಣ ರೈ ನಿರ್ದೇಶಕರು ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ವಿದ್ಯಾರಣ್ಯ 583276 2012

20.ಡಾ.ಎಂ.ಚಂದ್ರ ಪೂಜಾರಿ **"ಸಮಾಜ ಸಂಶೋದನೆ"**ಡಾ.ಸುಬ್ಬಣ್ಣ ರೈ ನಿರ್ದೇಶಕರು ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ವಿದ್ಯಾರಣ್ಯ 583276 ದ್ವಿತೀಯ ಮುದ್ರಣ:2011

21. ಡಾ.ಬಿ.ಎನ್ ಸುಮಿತ್ರಾಬಾಯಿ ಪಶ್ಚಿಮದ ಸ್ತ್ರೀವಾದಿ ವಿಮರ್ಶಾ ಪಂಥಗಳು ಸಂಪಾದಕರು: ಡಾ.ವೀರಣ್ಣ ದಂಡೆ,"**ಜಾನಪದ ಶಾಸ್ತ್ರ ಸಿದ್ದಾಂತಗಳು**",ನೆಲೆಮನೆಪ್ರಕಾಶನ ರಂಗನಾಥನಗರ,ಶ್ರೀರಂಗಪಟ್ಟಣ ಮಂಡ್ಯ ಜಿಲ್ಲೆಪ್ರಥಮಮುದ್ರಣ 1999 ಪುಟಸಂಖ್ಯೆ:145 ರಿಂದ 179

22. ಸಂಪಾದಕಿಯರು:ಶ್ರೀಮತಿ ಹೆಚ್ ಎಸ್ ಪಾರ್ವತಿ,ಡಾ. ನಿರುಪಮಾ, **"ಇಪ್ಪತ್ತನೆ ಶತಮಾನದಲ್ಲಿ ಕರ್ನಾಟಕ ಮಹಿಳೆಯರ ಸಾಧನೆ"**, ಆರತಿ ಪಬ್ಲಿಕೇಷನ್ಸ್,248,16ಮತ್ತು 17ನೇ ಕ್ರಾಸ್‌ನಡುವೆ, ಸಂಪಿಗೆ ರಸ್ತೆ,ಮಲ್ಲೇಶ್ವರಂ,ಬೆಂಗಳೂರು–560003 ಪುಟಸಂಖ್ಯೆ 217 ರಿಂದ 223 ಶಿಕ್ಷಣ ಡಾ.ನಿರುಪಮ

23. ಡಾ. ಪ್ರೀತಿಶುಭಚಂದ್ರ **"ಮಹಿಳಾ ಅಧ್ಯಯನದ ತಾತ್ವಿಕಾ ನೆಲೆಗಳು ಹಾಗೂ ಮಹಿಳಾ ಚಳುವಳಿ"** ಪ್ರಕಾಶಕರು ಪ್ರಕಟಣಾ ವಿಭಾಗ,ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ,ಹಂಪಿ ವಿದ್ಯಾರಣ್ಯ 583276 ಪ್ರಥಮ ಮುದ್ರಣ:2002

**24. ಸಂಪಾದಕರು:** ಡಾ.ಸಿ ಡಿ ವೆಂಕಟೇಶ **"ಮಹಿಳಾ ಅಧ್ಯಯನದ ನೆಲೆಗಳು"**ಶ್ರೀಶಿರಡಿ ಸಾಯಿ ಎಂಟರ್ ಪ್ರೈಸಸ್ #58/1, 5ನೇ ಮುಖ್ಯ ರಸ್ತೆ ಕಾಮಾಕ್ಷಿಪಾಳ್ಯ ಹೊಸ ಬಡಾವಣೆ,ಬೆಂಗಳೂರು–560079 ಪ್ರಥಮ ಮುದ್ರಣ:2010

25. .ಡಿ ಎಸ್ ಇ ಆರ್ ಟಿ ಬೆಂಗಳೂರು **"ಬಿಂಬಸಂಪನ್ಮೂಲವ್ಯಕ್ತಿಗಳಸಾಹಿತ್ಯ"**

26. ಡಿ ಎಸ್ ಇ ಆರ್ ಟಿ ಬೆಂಗಳೂರು **"ಬಿಂಬ ಶಿಕ್ಷಕರ ಸಾಹಿತ್ಯ" ಲಾವಣ್ಯ ಮುದ್ರಣ ನಂ.19, 15ನೇ ಕ್ರಾಸ್, ಬನಶಂಕರಿ 1ನೇ ಹಂತ, ಬೆಂಗಳೂರು–50**

27. ಡಿ ಎಸ್ ಇ ಆರ್ ಟಿ ಬೆಂಗಳೂರು **"ಜೆಂಡರ್ ಪ್ರಶಿಕ್ಷಕರ ತರಬೇತಿ ಸಾಹಿತ್ಯ"**

28. ಡಿ ಎಸ್ ಇ ಆರ್ ಟಿ ಬೆಂಗಳೂರು **"ಜೆಂಡರ್ ವಿಷಯಗಳು"ಸಂಪನ್ಮೂಲ ಪುಸ್ತಕ**

**29.** Hoffman, R. M., & Borders, L. D. (2001). Twenty-five years after the Bem Sex-Role Inventory: A reassessment and new issues regarding classification variability. *Measurement and Evaluation in Counseling and Development, 34*, 39-55.

30. Sandra Lipsitz Bem, Gender Schema Theory and Its Implications for Child Development: Raising Gender-Aschematic Children in a Gender-Schematic SocietyAuthor(s): Source: Signs, Vol. 8, No. 4 (Summer, 1983), pp. 598-616Published by: The University of Chicago PressStable URL:

31.Ann oakley ,(1972) *Sex, Gender and Society*. London: Temple Smith. Reprinted with new Introduction, London: Gower, 1985.

32. Piaget, J. (1932). *The moral judgment of the child*. London: Routledge & Kegan Paul.

33. Jean Piagetby Saul McLeod✉published 2009, updated 2012

34. Diane N. Ruble, Lisa J. Taylor, Lisa Cyphers, Faith K. Greulich, Leah E. Lurye and Patrick E. Shrout The Role of Gender Constancy in Early Gender Development *Child Development* , Vol. 78, No. 4 (Jul. - Aug., 2007), pp. 1121-1136

35. Author(s) Ann Sigrid Nihlen and Becky A. Bailey, Children's Display of Gender Schemas through Interaction with Nontraditional Workers, Anthropology & Education Quarterly, Vol. 19, No. 2, Women, Culture, and Education(Jun., 1988), pp. 155-162Published by: Wiley on behalf of the American Anthropological Association.

36**.** Boston and Levy (1991**),**International Journal of Behavioral Development January 2001 25: 7-15

37. Signorella, M. L., & Liben, L. S. (1985). Assessing children's gender-stereotyped attitudes. *Psychological Documents, 15,* 7.(Ms. No. 2685). The measure described in this article is listed in C. A. Beere. (1990). *Gender roles: A handbook of tests and measures* (pp. 228-230).NewYork:Greenwood.

38. Carole A. Beere,Gender Roles: A Handbook of Tests and Measures(Gender-Stereotyped **Attitude Scale)**

39. By Boldizar, Janet P.Assessing sex typing and androgyny in children: The Children's Sex Role Inventory**.**Developmental Psychology, Vol 27(3), May 1991, 505-515.

40. Sokal, Laura; Seifert, Kelvin; Piotrowski, Caroline, Gender Schematic Development within the Family Context,PUB DATE 2001-04-00.

41 H.K. Haeena,*AKSHARA-ARIVU MATHU MAHILE*:MYSORE,sinchu multigraph kuvempu nagar,MYSORE,2011.

42.Author(s): Lisa A. Serbin, Kimberly K. Powlishta, Judith Gulko, Carol Lynn Martin and Marlaine E. Lockheed, The Development of Sex Typing in Middle Childhood Source: Monographs of the Society for Research in Child Development, Vol. 58, No. 2, The (1993)

43. J Gerontol. 1985 May;40(3):336-43. A psychometric study of the Bem Sex Role Inventory with an older adult sample.Windle M, Sinnott JD

44. Jon. B. Ellis Assessing the Current Validity of the Bem Sex-Role Inventory Cheryl L. Holt1*Saint Louis UniversityEast Tenn essee State University*

45. Mary Anne SedneyComments on median split procedures for scoring androgyny measures Sex Roles February 1981, Volume 7, Issue 2, pp 217-222

46.lynn s. liben Rebeca s.bigler, Developmental course of gender differnciation; conceptualizing,measuring,evaluating construct pathways monographs of the society for research in child development serial no 269 vol 67, no 2 (2002) with commentaries by Diane M ruble and caron lynn martin kimberly k powleyshat.

47. Maria Bartini, Gender Role Flexibility in Early Adolescence: Developmental Change in Attitudes, Self-perceptions, and Behaviors Sex RolesAugust 2006, Volume 55, Issue 3-4, pp 233-245

48. Lucette B. Comer and Marvin A. JolsonPerceptions of Gender Stereotypic Behavior: An Exploratory Study of Women in SellingThe Journal of Personal Selling and Sales ManagementVol. 11, No. 1 (Winter, 1991) (pp. 43-59)Page Count: 17

49. Lynn S. Liben and Margaret L. Signorella **Gender-Related Schemata and Constructive Memory in Children** Page [11] of 11-18

50. Frank Taylor Content Analysis and Gender Stereotypes in Children's BooksTeaching SociologyVol. 31, No. 3 (Jul., 2003) (pp. 300-311)Page Count: 12

51. JoAnn Miller and Marilyn Chamberlin Women Are Teachers, Men Are Professors: A Study of Student Perceptions Teaching Sociology Vol. 28, No. 4 (Oct., 2000) (pp. 283-298)Page Count: 16

52. Rebecca S. Bigler The Role of Classification Skill in Moderating Environmental Influences on Children's Gender Stereotyping: A Study of the Functional Use of Gender in the Classroom Child Development Vol. 66, No. 4 (Aug., 1995) (pp. 1072-1087)Page Count: 16

53. Alexa A. Albert and Judith R. Porter Children's Gender-Role Stereotypes: A Sociological Investigation of PsychologicalModels Sociological Forum Vol. 3, No. 2 (Spring, 1988) (pp. 184-210) Page Count: 27

54. Carol Lynn Martin and Jane K. Little The Relation of Gender Understanding to Children's Sex-Typed Preferences and GenderStereotypes Child Development Vol. 61, No. 5 (Oct., 1990) (pp. 1427-1439) Page Count: 13

**ಪ್ರಶ್ನಾವಳಿ**

## ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ

**ಶಿವಮೊಗ್ಗ ಜಿಲ್ಲೆಯ ಶಿಕ್ಷಕರು ಹಾಗೂ ಅಧಿಕಾರಿಗಳಲ್ಲಿರುವ ಶಾಲಾ ಶಿಕ್ಷಣ ಸಂಬಂಧಿಸಿದ ಲಿಂಗ ಸಂವೇದನೆಗಳು ಒಂದು ವಿಶ್ಲೇಷಣಾತ್ಮಕ ಅಧ್ಯಯನಕ್ಕಾಗಿ ದತ್ತಾಂಶ ಸಂಗ್ರಹಿಸುವ ಸಾಧನ**

| | | |
|---|---|---|
| ಸಂಸ್ಥೆ: ಶಾಲೆ/ಸಿಆರ್ ಸಿ/ಬಿಆರ್ ಸಿ/ಬಿಇಓ/ಡಯಟ್/ಡಿಡಿಪಿಐ | ತಾಲ್ಲೂಕು: | ಹುದ್ದೆ: |
| ಲಿಂಗ: ಗಂಡು/ಹೆಣ್ಣು ಬಿಂಬ ಕಿಶೋರಿ ಹೆಣ್ಣು ಮಕ್ಕಳ ಶಿಕ್ಷಣ (ಲಿಂಗ ಸಂವೇದನೆ) ತರಬೇತಿ ಆಗಿದೆ/ಇಲ್ಲ ಟಿಕ್ ಮಾಡಿರಿ | | |

1. ಲಿಂಗ ಸಂವೇದನೆ ಎಂದಾಗ ನನ್ನ ಮನಸ್ಸಿಗೆ ಬಂದ ಭಾವನೆಗಳು ಕೆಲವು ಪದಗಳಲ್ಲಿ ಹಂಚಿಕೊಳ್ಳಿರಿ

2. ನೀವು ವೈಯಕ್ತಿಕವಾಗಿ ಅಸಮಾನತೆ ಅನುಭವಿಸಿದ್ದೀರಾ? ಹೌದು/ಇಲ್ಲ
   ಅದರಿಂದ ನಿಮಗಾದ ಅನುಭವವನ್ನು ಎರಡು ವಾಕ್ಯದಲ್ಲಿ ಹಂಚಿಕೊಳ್ಳಿರಿ

3. ಶಾಲೆಯಲ್ಲಿರುವ ಬಾಲಕ ಬಾಲಕಿಯರಿಬ್ಬರಿಗೂ ಸಮಾನ ಅವಕಾಶವಿರಬೇಕೆಂದು ನೀವು ಭಾವಿಸುವಿರಾ? ಹೌದು/ಇಲ್ಲ ಏಕೆ? ನಿಮ್ಮ ಉತ್ತರ ಸಮರ್ಥಿಸುವ ಕೆಲವು ವಾಕ್ಯ ಬರೆಯಿರಿ

4. ಶಾಲೆಯಲ್ಲಿ ಬಾಲಕ ಬಾಲಕಿಯರಿಬ್ಬರಿಗೂ ಅವರ ವ್ಯಕ್ತಿತ್ವ ವಿಕಾಸಕ್ಕೆ ಸಮಾನ ಅವಕಾಶ ಸಿಗುತ್ತಿದೆ ಎಂದು ನೀವು ಭಾವಿಸುವಿರಾ? ಹೌದು/ಇಲ್ಲ ಏಕೆ? ನಿಮ್ಮ ಉತ್ತರ ಸಮರ್ಥಿಸುವ ಕೆಲವು ವಾಕ್ಯ ಬರೆಯಿರಿ

5. ನೀವು ವೃತ್ತಿ ಕ್ಷೇತ್ರದಲ್ಲಿ ಅಸಮಾನತೆಯನ್ನು ತೊಡಗಿಸಲು (ಅವಕಾಶವಿರುವ ಪ್ರಯತ್ನ) ವೈಯಕ್ತಿಕವಾಗಿ ಪ್ರಯತ್ನ ಮಾಡಿದ್ದೀರಾ? ಹೌದು/ಇಲ್ಲ

6. ಲಿಂಗ ಸಂವೇದನಾತ್ಮಕ ಕಾರ್ಯಗಳಿಗೆ ಅಡಚಣೆಗಳಿವೆಯೇ? ಹೌದು/ಇಲ್ಲ ಏಕೆ? ನಿಮ್ಮ ಉತ್ತರ ಸಮರ್ಥಿಸುವ ಕೆಲವು ವಾಕ್ಯ ಬರೆಯಿರಿ

7. ಲಿಂಗ ಸಂವೇದನಾತ್ಮಕ ಕಾರ್ಯಗಳಿಗಿರುವ ಅಡಚಣೆಗಳನ್ನು ಹೇಗೆ ನಿಭಾಯಿಸಬಹುದೆಂದು ನಿಮ್ಮ ಆಲೋಚನೆಗಳನ್ನು 2 ವಾಕ್ಯಗಳಲ್ಲಿ ವಿವರಿಸಿ

8. ಲಿಂಗಸಂವೇದನೆಯೆಡೆಗೆ (ಹೆಣ್ಣು ಮತ್ತು ಗಂಡು ಸಮಾನದೃಷ್ಟಿ) ಪೋಷಕರು ಶಿಕ್ಷಕರು ಅಧಿಕಾರಿಗಳು ಅಲೋಚಿಸುವಂತಹ ಸನ್ನಿವೇಶ ಒದಗಿಸಬೇಕೆಂದು ಬಯಸುತ್ತೀರಾ? ಹೌದು/ಇಲ್ಲ ಏಕೆ? ನಿಮ್ಮ ಉತ್ತರ ಸಮರ್ಥಿಸುವ ಕೆಲವು ವಾಕ್ಯ ಬರೆಯಿರಿ

9. ಲಿಂಗ ಸಂವೇದನಾಶೀಲ ತರಬೇತಿಯಂತಹ ಸನ್ನಿವೇಶಗಳು ನಮ್ಮ ಆಲೋಚನೆಯನ್ನು ಪ್ರಭಾವಿಸುತ್ತವೆ ಎಂದು ನೀವು ಭಾವಿಸುವಿರಾ? ಹೌದು/ಇಲ್ಲ ಏಕೆ? ನಿಮ್ಮ ಉತ್ತರ ಸಮರ್ಥಿಸುವ ಕೆಲವು ವಾಕ್ಯ ಬರೆಯಿರಿ

10. ಲಿಂಗ ಸಂವೇದನೆ ಸಂಬಂಧಿಸಿದಂತೆ ಯಾವ ವಿಷಯದ ಬಗ್ಗೆ ಇನ್ನೂ ಹೆಚ್ಚುವರಿ ಮಾಹಿತಿ ಅಗತ್ಯವಾಗಿ ತಿಳಿದುಕೊಳ್ಳಬೇಕೆಂದು ಬಯಸುವಿರಾ?

ಸಹಿ